ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 2 ಶುಕ್ರವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 225 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



75+ ವಿಶ್ವ ದರ್ಜೆಯ ಸೌಕರ್ಯಗಳು ಮತ್ತು 10,000 Sft ಅದ್ದೂರಿ ಕ್ಲಬ್ ಹೌಸ್ ಹೊಂದಿರುವ ಮೈಸೂರಿನ ಮೊದಲ ಐಷಾರಾಮಿ ಗೇಟೆಡ್ ಪ್ಲಾಟ್ ಸಮುದಾಯ







75+ ವರ್ಲ್ಡ್ ಕ್ಲಾಸ್ ಅಮೆನಿಟೀಸ್

ಝೋನ್ 01 - ಪ್ಲುಮೇರಿಯಾ ಪಾರ್ಕ್

01. ಪ್ಲುಮೇರಿಯಾ ಗ್ರೂವ್
02. ಮಲ್ಟಿಪರ್ಪಸ್ ಗ್ರೌಂಡ್
03. ರಿಫ್ರೆಶ್‌ಮೆಂಟ್ ಕಿಯೋಸ್ಕ್

ಝೋನ್ 02 - ಟ್ರ್ಯಾಂಕ್ವಿಲ್ ಪಾರ್ಕ್

04. ಮೆಡಿಟೇಶನ್ ಝೋನ್
05. ವಾಟರ್‌ಫ್ರಂಟ್ ವ್ಯೂ ಡೆಕ್
06. ಅರೋಮಾ ಗಾರ್ಡನ್
07. ಪೆಬಲ್ ಗಾರ್ಡನ್
08. ಸೀನಿಯರ್ ಸಿಟಿಝನ್ ಗೇಝೆಬೋ
09. ಸ್ವಿಂಗ್ ಪಾರ್ಕ್
10. ಪೆಟ್ ಝೋನ್
11. ಲಾಫಿಂಗ್ ಪಾರ್ಕ್
12. ಕಿಡ್ಸ್‌ಸ್ಕೇಟಿಂಗ್ ಏರಿಯಾ
13. ಹರ್ಬಲ್ ಗಾರ್ಡನ್
14. ಗಾರ್ಡನ್ ವಾಕ್
15. ರೆಫ್ಲೆಕ್ಸಾಲಾಜಿ ಪಾಥ್

ಝೋನ್ 03 - ಕಿಡ್ಸ್ ಪಾರ್ಕ್

16. ಬ್ಯಾಡ್‌ಮಿಂಟನ್ ಕೋರ್ಟ್
17. ಬಾಸ್ಕೆಟ್‌ಬಾಲ್ ಪೋಸ್ಟ್
18. ಕಿಡ್ಸ್ ಪ್ಲೇ ಝೋನ್
19. ಟಾಡ್ಲರ್ಸ್ ಪ್ಲೇ ಝೋನ್
20. ಸ್ಯಾಂಡ್ ಪಿಟ್
21. ಔಟ್‌ಡೋರ್ ಟೇಬಲ್ ಟನಿಸ್
22. ವಾಲಿಬಾಲ್ ಕೋರ್ಟ್
23. ಗಾಗಾ ಪಿಟ್
24. ರೆಸ್ಟಿಂಗ್ ಪೆವಿಲಿಯನ್
25. ಸ್ಪ್ಲ್ಯಾಶ್ ಪಾಂಡ್ (ಕಿಡ್ಸ್)

ಝೋನ್ 04 - ಫಿಟ್ನೆಸ್ ಹಬ್

26. ಓಪನ್ ಜಿಮ್
27. ಔಟ್‌ಡೋರ್ ಏರೋಬಿಕ್ಸ್
28. ಸೆರೆನಿಟಿ ಫೌಂಟೇನ್
29. ಸ್ಕಲ್ಪ್ಚರ್ ಆಫ್ ಪೀಸ್
30. ಔಟ್‌ಡೋರ್ ಯೋಗಾ ಕಬಾನ

ಝೋನ್ 05 - ಲೀಝರ್ ಪಾರ್ಕ್

31. ಪಾರ್ಟಿ ಲಾನ್
32. ಬಿಬಿಕ್ಯೂ ಕಾರ್ನರ್
33. ಹಮ್ಮಾಕ್
34. ಬೋನ್ ಫಾಯರ್ ಪಿಟ್
35. ಲಾಂಜ್ ಡೆಕ್
36. ಡಿಜಿ ಕನ್ಸೋಲ್
37. ಕಿಡ್ಸ್ ಪೂಲ್
38. ಸ್ವಿಮ್ಮಿಂಗ್ ಪೂಲ್
39. ಪೂಲ್ ಡೆಕ್ ಅಲ್‌ಫ್ರೆಸ್ಕೋ
40. ಬಗಿ ಕಾರ್ ಸ್ಟೇಶನ್
41. ಔಟ್‌ಡೋರ್ ಕೆಫೆ ಕಿಯೋಸ್ಕ್

ಝೋನ್ 06 - ಅಡ್ವೆಂಚರ್ ಪಾರ್ಕ್

42. ಕ್ರಿಕೆಟ್ ನೆಟ್
43. ಔಟ್‌ಡೋರ್ ಕಿಡ್ಸ್ ಮೇಝ್
44. ಕಿಡ್ಸ್ ಪ್ಲೇ ಕ್ಯಾಸ್ಟಲ್
45. ಕಿಡ್ಸ್ ರೋಪ್ ಬ್ರಿಜ್
46. ಕಿಡ್ಸ್ ರಾಕ್ ಕ್ಲೈಂಬಿಂಗ್ ವಾಲ್
47. ಸೈಕ್ಲಿಂಗ್ ಟ್ರ್ಯಾಕ್
48. ಕಿಡ್ಸ್ ಝಿಪ್ ಲೈನ್
49. ಟ್ರ್ಯಾಂಪೋಲೈನ್ ಪಾರ್ಕ್


ಕ್ಲಬ್‌ಹೌಸ್

50. ವೇಟಿಂಗ್ ಲಾಂಜ್
51. ಕೆಫೆಟೇರಿಯಾ
52. ಲಾಕರ್‌ಗಳೊಂದಿಗೆ ಚೇಂಜ್ ರೂಮ್‌ಗಳು
53. ಕನ್ವಿನಿಯೆನ್ಸ್ ಸ್ಟೋರ್
54. ಫಾರ್ಮಸಿ
55. ಹೆಲ್ತ್ ಕೇರ್
56. ಸೀನಿಯರ್ ಕಾರ್ನರ್ - ಆ್ಯಕ್ಯುಪ್ರೆಶರ್ ಏರಿಯಾ ಪಾಯಿಂಟ್
57. ಲಾಂಡ್ರೊಮ್ಯಾಟ್
58. ಬ್ಯೂಟಿ ಸಲೂನ್
59. ಕಿಡ್ಸ್ ಲೈಬ್ರರಿ
60. ಕಿಡ್ಸ್ ಡೇ ಕೇರ್ / ಕ್ರೇಶ್
61. ಇಂಡೋರ್ ಜಿಮ್
62. ಏರೋಬಿಕ್ಸ್
63. ಝುಂಬಾ ಫ್ಲೋರ್
64. ಸೌನಾ
65. ಸ್ಟೀಮ್
66. ಜಾಕುಝಿ
67. ಕಾನ್‌ಫರೆನ್ಸ್ / ಬೋರ್ಡ್ ರೂಮ್
68. ಗೆಸ್ಟ್ ಸೂಟ್ಸ್
69. ಮಿನಿ ಥಿಯೇಟರ್
70. ಬಾಂಕ್ವೆಟ್ ಹಾಲ್
71. ಇಂಡೋರ್ ಗೇಮ್ಸ್ (ಚೆಸ್ ಹಾಗೂ ಕ್ಯಾರಮ್)
72. ಬಿಲಿಯಾರ್ಡ್ಸ್
73. ಕಿಡ್ಸ್ ಅಮ್ಯೂಝ್‌ಮೆಂಟ್ ಆರ್ಕೇಡ್
74. ಬ್ಯಾಡ್‌ಮಿಂಟನ್
75. ಸ್ಕ್ವ್ಯಾಶ್ ಕೋರ್ಟ್ (ಮಿನಿ)
76. ಟೇಬಲ್ ಟೆನ್ನಿಸ್ (ಇಂಡೋರ್)

PRICE TABLE

Size Range (Sft.)	Neighbourhood Market Price (Bannimantap / SS Nagar)	G Square Launch Price	G Square Early Bird Price
800 - 1200	~~50L - 74L~~	~~41L - 61L~~	40L - 59L
1201 - 1900	~~75L - 1.17Cr~~	~~61.25L - 96L~~	60L - 94L
1901 - 3000	~~1.18Cr - 1.86Cr~~	~~97L - 1.53L~~	95L - 1.49Cr

LOCATION MAP



97431 93000
www.gsquarehousing.com

G SQUARE BUILD ASSIST
A POST-PURCHASE GUIDANCE PROGRAM

G SQUARE GROUP
YOUR PLOT. YOUR HOME. YOUR WAY.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 2 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 225 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು ರಿಂಗ್ ರಸ್ತೆ ಎಲ್‌ಇಡಿ ಬೆಳಕಲ್ಲಿ ಈಗ ಕಂಗೊಳಿಸುತ್ತಿದೆ

- ಸಂಸದ ಪ್ರತಾಪ್ ಸಿಂಹ, ಶಾಸಕ ತನ್ವೀರ್ ಸೇಠ್‌ರಿಂದ ಮೈಸೂರು ರಿಂಗ್ ರಸ್ತೆಯ ದೀಪಗಳಿಗೆ ಚಾಲನೆ
- 42.5 ಕಿಮೀ ರಿಂಗ್ ರಸ್ತೆಯಲ್ಲಿ 20 ಹೈಮಾಸ್ಟ್ ಲೈಟ್, 4818 ಎಲ್‌ಇಡಿ ಬಲ್ಬ್, ಹೈಟೆಕ್ ಕಂಟ್ರೋಲ್
- ರಿಂಗ್ ರಸ್ತೆ ಅರ್ಧ ಭಾಗದ ಲೈಟ್ ಆನ್, ಡಿ.10 ರೊಳಗೆ ಉಳಿದರ್ಧ ಭಾಗದ ದೀಪಗಳೂ ಬೆಳಗಲಿವೆ

ಮೈಸೂರು,ಡಿ.1(ಆರ್‌ಕೆ, ಜಿಎ)– ಕಗ್ಗತ್ತಲಲ್ಲಿ ಮುಳುಗಿದ್ದ ಮೈಸೂರಿನ 42.5 ಕಿ.ಮೀ. ರಿಂಗ್ ರಸ್ತೆ ಇನ್ನು ಮುಂದೆ ಎಲ್‌ಇಡಿ ಬಲ್ಬ್‌ಗಳ ಬೆಳಕಿನಲ್ಲಿ ಪ್ರಜ್ವಲಿಸಲಿದೆ. ರಿಂಗ್ ರಸ್ತೆಯ ಶೇ.50ರಷ್ಟು ಭಾಗದ ದೀಪಗಳಿಗೆ ಗುರುವಾರ ಸಂಜೆ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಹಾಗೂ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಹಂಚ್ಯಾ–ಸಾತಗಳ್ಳಿ, ದೇವೇಗೌಡ ಸರ್ಕಲ್, ತಿ.ನರಸೀಪುರ ಜಂಕ್ಷನ್, ಬಂಡೀಪಾಳ್ಯ ಎಪಿಎಂಸಿ ಬಳಿಯ ನಂಜನಗೂಡು ರಸ್ತೆ ಜಂಕ್ಷನ್‌ವರೆಗಿನ ರಿಂಗ್ ರಸ್ತೆಯಲ್ಲಿ ಇಂದು ಎಲ್‌ಇಡಿ ಬಲ್ಬ್‌ಗಳ ಬೊಂಬಾಟ್ ಬೆಳಕು ಚೆಲ್ಲಿದ್ದು, ಡಿ.10ರೊಳಗಾಗಿ ಉಳಿದ ಶೇ.50ರಷ್ಟು ರಿಂಗ್ ರಸ್ತೆಯಲ್ಲಿ ಎಲ್‌ಇಡಿ ಬಲ್ಬ್‌ಗಳು ಬೆಳಗಲಿವೆ.

ಮೈಸೂರು ರಿಂಗ್ ರಸ್ತೆಯಲ್ಲಿ ಈ ಹಿಂದೆ ದಸರಾ ಮಹೋತ್ಸವದ ವೇಳೆ ಬೀದಿದೀಪಗಳಿಗೆ ಬಲ್ಬ್‌ಗಳನ್ನು ಅಳವಡಿಸಲಾಗುತ್ತಿತ್ತು. ಆದರೆ ಕೆಲವೇ ದಿನಗಳಲ್ಲಿ ಅದು ದುರಸ್ತಿಗೊಳಗಾಗಿ ವರ್ಷವಿಡೀ ರಿಂಗ್ ರಸ್ತೆ ▶ 9ನೇ ಪುಟಕ್ಕೆ







ಮೂರು ವರ್ಷಗಳ ನಂತರ ಮೈಸೂರು ರಿಂಗ್ ರಸ್ತೆ ಈಗ ಎಲ್‌ಇಡಿ ದೀಪದ ಬೆಳಕಲ್ಲಿ ಕಂಗೊಳಿಸುತ್ತಿದೆ.

2 ಕಿ.ಮೀ.ಗೊಂದು ಸಿಸಿ ಕ್ಯಾಮರಾ

ಮೈಸೂರು, ಡಿ.1–ಮೈಸೂರು ನಗರ ಪಾಲಿಕೆಯು ರಿಂಗ್ ರಸ್ತೆಗೆ ಸಿಸಿ ಕ್ಯಾಮರಾ ಕಣ್ಗಾವಲು ವ್ಯವಸ್ಥೆಯನ್ನು ಮಾಡುವ ಮೂಲಕ ಅಪರಾಧ ಕೃತ್ಯಗಳನ್ನೆಸಗುವವರ ಮೇಲೆ ಕಣ್ಣಿಡಲು ಮುಂದಾಗಿದೆ.

ಇಂದು ಬೆಳಗ್ಗೆ ಪಾಲಿಕೆ ಕಚೇರಿಯಲ್ಲಿ ಸಂಸದ ಪ್ರತಾಪ್ ಸಿಂಹ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಂತರ ಈ ಕುರಿತು ಮಾತನಾಡಿದ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ರಿಂಗ್ ರಸ್ತೆಯ ಪ್ರತೀ 2 ಕಿ.ಮೀ.ಗೆ ಒಂದರಂತೆ ಸಿಸಿ ಕ್ಯಾಮರಾ ಅಳವಡಿಸಲು ನಿರ್ಧರಿಸಲಾಗಿದೆ. ಹೀಗೆ ಸಿಸಿ ಕ್ಯಾಮರಾ ಅಳವಡಿಸಿದಾಗ ರಿಂಗ್ ರಸ್ತೆಯುದ್ದಕ್ಕೂ ಕಟ್ಟಡದ ತ್ಯಾಜ್ಯ ಸುರಿಯುವವರನ್ನು, ಅಪಘಾತ ನಡೆಸಿ ಪರಾರಿಯಾಗುವವರನ್ನು, ಅಪರಾಧ ಕೃತ್ಯ ಎಸಗುವ ಕಿಡಿಗೇಡಿಗಳನ್ನು ಪತ್ತೆ ಹಚ್ಚಲು ಸಹಕಾರಿಯಾಗುತದೆ. ಸಿಸಿ ಕ್ಯಾಮರಾಗಳು ಕಾರ್ಯ ನಿರ್ವಹಿಸುತ್ತಿವೆ ಎಂಬುದು ಅರಿವಾಗುತ್ತಿದ್ದಂತೆಯೇ ಸಹಜವಾಗಿ ರಿಂಗ್ ರಸ್ತೆಯಲ್ಲಿ ಅಪರಾಧ ಕೃತ್ಯಗಳಿಗೆ ಕಡಿವಾಣ ಬೀಳುವ ಸಾಧ್ಯತೆಯೂ ಇದೆ. ಹೀಗಾಗಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ರಿಂಗ್ ರಸ್ತೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ನಿರ್ಧರಿಸಲಾಗಿದೆ ಎಂದರು.

ಕೆಆರ್‌ಎಸ್ ಬೃಂದಾವನ ಪ್ರವಾಸಿಗರಿಗೆ ಮುಕ್ತ



ಮಂಡ್ಯ, ಡಿ.1– ಚಿರತೆ ಭೀತಿ ಹಿನ್ನೆಲೆಯಲ್ಲಿ ಕಳೆದ ಒಂದು ತಿಂಗಳಿಂದ ಬಂದ್ ಆಗಿದ್ದ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ವಿಶ್ವವಿಖ್ಯಾತ ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆಯ ಬೃಂದಾವನವನ್ನು ಸಾಕಷ್ಟು ಮುಂಜಾಗ್ರತಾ ಕ್ರಮಗಳೊಂದಿಗೆ ಬುಧವಾರ ಸಂಜೆ ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ.

ಕೆಆರ್‌ಎಸ್ ಜಲಾಶಯದಲ್ಲಿ ಮೊದಲ ಬಾರಿಗೆ ಅ.22ರಂದು ಚಿರತೆ ಕಾಣಿಸಿಕೊಂಡಿತ್ತು. ನಂತರ ಅಣೆಕಟ್ಟೆಯ ಉತ್ತರ ಭಾಗದಲ್ಲಿ ಒಂದೆರಡು ಬಾರಿ ಚಿರತೆ ಕಾಣಿಸಿಕೊಂಡಿತ್ತು. ಹೀಗಾಗಿ ಸುರಕ್ಷತೆಯ ▶ 9ನೇ ಪುಟಕ್ಕೆ

ಏಕರೂಪ ನಾಗರಿಕ ಸಂಹಿತೆ ಜಾರಿ ಪ್ರಸ್ತಾಪ

ಸಂವಿಧಾನದಲ್ಲೇ ಅವಕಾಶವಿಲ್ಲ

- ಮಾಜಿ ಪ್ರಧಾನಿ ದೇವೇಗೌಡರ ಸ್ಪಷ್ಟ ನುಡಿ
- ಈ ಪ್ರಯತ್ನಕ್ಕೆ ನನ್ನ ವಿರೋಧವಂತೂ ಇದೆ

ಮೈಸೂರು, ಡಿ.1(ಎಂಟಿವೈ)– ನಮ್ಮ ಸಂವಿಧಾನದಲ್ಲಿ ಅವಕಾಶವಿಲ್ಲದ ಕಾರಣ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಅಸಾಧ್ಯ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಏಕರೂಪ ನಾಗರಿಕ ಸಂಹಿತೆ ಜಾರಿಯಿಂದ ಬಿಜೆಪಿಗೆ ಲಾಭ ಆಗುವುದೋ ಅಥವಾ ನಷ್ಟವಾಗುವುದೋ ನಮಗೆ ತಿಳಿಯದು. ಅದನ್ನು ಜಾರಿ ಮಾಡಲು ಹೊರಟರೆ ವ್ಯಾಪಕ ವಿರೋಧ ವ್ಯಕ್ತವಾಗುತ್ತದೆ. ಸಂವಿಧಾನದಲ್ಲಿ ಏನಿದೆಯೋ ಅದಕ್ಕೆ ನಾವು ಬದ್ಧವಾಗಿರಬೇಕು. ಆದರೆ ಏಕರೂಪ ನಾಗರಿಕ ಸಂಹಿತೆ ಜಾರಿಗೆ ನನ್ನ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು.

ಮೇಕೆದಾಟು ಯೋಜನೆಗೆ ಪ್ರಧಾನಿ ಮೋದಿ ಅನುಮತಿ ನೀಡಲಿಲ್ಲ. ಸಮುದ್ರಕ್ಕೆ ನೀರು ಹರಿಯುವುದನ್ನು ಬಯಸಿದ್ದಾರೆ. ಅಲ್ಲದೇ, ಕಾವೇರಿ ನೀರನ್ನು ಬಳಸಿಕೊಳ್ಳುವುದಕ್ಕೆ ತಮಿಳುನಾಡು ಸರ್ಕಾರಕ್ಕೆ ಅನುಮತಿ ಕೊಟ್ಟಿದ್ದಾರೆ. ಸೇಲಂ ಸೇರಿ ಆಸುಪಾಸಿನ ಜಿಲ್ಲೆಗಳಲ್ಲಿ ಹೆಚ್ಚುವರಿ 4 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಗೆ ಈ ನೀರು ಬಳಕೆಯಾಗುತ್ತಿದೆ. ತಮಿಳುನಾಡಿನ ಎಐಎಡಿಎಂಕೆ ಪಕ್ಷದೊಂದಿಗೆ ಬಿಜೆಪಿ ಒಳ ಒಪ್ಪಂದ ಮಾಡಿಕೊಂಡಿದೆ. ಮುಂದಿನ ದಿನಗಳಲ್ಲಿ ಎಐಎಡಿಎಂಕೆಗೆ ಅನುಕೂಲವಾಗಲಿ ಎಂದು ಅಲ್ಲಿನ ನೀರಾವರಿ ಯೋಜನೆಗೆ ಅನುಮತಿ ಕೊಟ್ಟಿದ್ದಾರೆ. ಈ ವಿಚಾರವನ್ನು ಇಲ್ಲಿಗೆ ಬಿಡುವುದಿಲ್ಲ. ಮೇಕೆದಾಟು ವಿಚಾರವಾಗಿ ಬಹಳ ಹಿಂದೆ ಪ್ರಧಾನಿಗೆ ಪತ್ರ ಬರೆದಿದ್ದೆ. ಈ ಪತ್ರಕ್ಕೆ ಇದುವರೆಗೂ ಪ್ರತಿಕ್ರಿಯೆ ನೀಡಿಲ್ಲ. ಮುಂಬರುವ ರಾಜ್ಯಸಭೆ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸುವೆ ಎಂದು ತಿಳಿಸಿದರು.


ಜನವರಿಯಿಂದ ಪ್ರವಾಸ: ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷ ಸಂಘಟಿಸಲು ಮುಂದಿನ ತಿಂಗಳಿಂದ ರಾಜ್ಯ ಪ್ರವಾಸ ಕೈಗೊಳ್ಳುತ್ತೇನೆ. ನಾನೇ ಪ್ರಚಾರಕ್ಕೆ ಹೋಗುತ್ತೇನೆ. ನನಗೆ ನಂಬಿಕೆ ಇದೆ, ಈಗಾಗಲೇ ಕುಮಾರಸ್ವಾಮಿ ಸೇರಿದಂತೆ ಪಕ್ಷದ ನಾಯಕರು ಪಂಚರತ್ನ ಯಾತ್ರೆ ಮಾಡುತ್ತಿದ್ದಾರೆ. ಪಕ್ಷದ ಶಾಸಕರು, ಮಾಜಿ ಶಾಸಕರು, ಮುಖಂಡರಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಪ್ರತಿ ಗ್ರಾಮಕ್ಕೆ ತೆರಳಿ ಮನೆ–ಮನೆಗೆ ಪಕ್ಷದ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ, ಪಕ್ಷದ ಪರವಾಗಿ ಕೆಲಸ ಮಾಡಲು ಕಾರ್ಯಕರ್ತರಿಗೆ ಸೂಚನೆ ನೀಡಲಾಗಿದೆ ಎಂದರು.

ದ್ವಂದ್ವದಲ್ಲಿದೆ: ಹಾಸನ ಜಿಲ್ಲೆ ಅರಸೀಕೆರೆಯ ಶಾಸಕ ಶಿವಲಿಂಗೇಗೌಡರ ವಿಚಾರ ಕುರಿತಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದ್ದಾರೆ. ಇನ್ನು ಅಲ್ಲಿ ಗೊಂದಲ, ದ್ವಂದ್ವ ಇರುವುದರಿಂದ ಅಂತಿಮ ತೀರ್ಮಾನ ಪ್ರಕಟಿಸಿಲ್ಲ ಎಂದು ತಿಳಿಸಿದರು.

ಬೆದರಿಕೆಗೆ ಬಗ್ಗಲ್ಲ: ಹಾಸನದಲ್ಲಿ ಬಿಜೆಪಿ ಶಾಸಕ ಪ್ರೀತಂಗೌಡ ಆರ್ಭಟ ಹೆಚ್ಚಾಗಿದೆ. ಆತನಿಗೆ ಯಡಿಯೂರಪ್ಪ ಸರ್ಕಾರ ಸರ್ವ ಶಕ್ತಿ ಕೊಟ್ಟಿದೆ. ಸಾಕಷ್ಟು ಕೆಲಸ ಕೊಟ್ಟಿದ್ದಾರೆ. ಅದರಿಂದ ಭಾರೀ ಪ್ರಮಾಣದ ಹಣ ಸಂಪಾದಿಸಿದ್ದಾರೆ. ಅವರ ಶಕ್ತಿ ಎಷ್ಟಿದೆ ಎಂಬುದು ಗೊತ್ತಿದೆ. ಅದಕ್ಕೆ ಮೂಲ ಕಾರಣ ಯಡಿಯೂರಪ್ಪ ಹಾಗೂ ಅವರ ಮಕ್ಕಳೇ ಆಗಿದ್ದಾರೆ. ಸವಾಲು ಹಾಕುವುದು, ಬೆದರಿಕೆ ಮಾತುಗಳಿಗೆ ನಾವು ಬಗ್ಗುವುದಿಲ್ಲ. ಹಾಸನ ಕ್ಷೇತ್ರದಿಂದ ಸ್ಪರ್ಧಿಸಲು ಆಕಾಂಕ್ಷಿಗಳ ಸಂಖ್ಯೆ ದೊಡ್ಡದಿದೆ. ಈ ಕುರಿತು ಹೆಚ್.ಡಿ. ಕುಮಾರಸ್ವಾಮಿ ಹಾಗೂ ಹೆಚ್.ಡಿ.ರೇವಣ್ಣ ಚರ್ಚಿಸಿ, ಅಂತಿಮ ನಿರ್ಧಾರ ಪ್ರಕಟಿಸುತ್ತಾರೆ ಎಂದರು.

ಪಟ್ಟಿ ಶಾಶ್ವತವಲ್ಲ: ಚುನಾವಣೆಗಾಗಿ ಜೆಡಿಎಸ್ ಬಿಡುಗಡೆ ಮಾಡಿರುವ ಮೊದಲ ಹಂತದ ಅಭ್ಯರ್ಥಿಗಳ ಪಟ್ಟಿ ಶಾಶ್ವತವಲ್ಲ. ಆಯಾ ಸಮಯಕ್ಕೆ ಹಾಗೂ ವಾತಾವರಣಕ್ಕೆ ಅನುಗುಣವಾಗಿ ಪಟ್ಟಿ ಬದಲಾಗುತ್ತದೆ. ಇದಕ್ಕೆ ಸರ್ವೆ ವರದಿಯೂ ಅನ್ವಯವಾಗಲಿದೆ ಎಂದು ತಿಳಿಸಿದರು.

ನಂಜುಂಡೇಶ್ವರನ ಮೊರೆ: ನಾನು ಚಿಕ್ಕ ವಯಸ್ಸಿನಿಂದಲೂ ನಂಜನಗೂಡಿಗೆ ಬರುತ್ತಿದ್ದೇನೆ. ಚಿಕ್ಕ ವಯಸ್ಸಿನಲ್ಲಿ ಕಿವಿ ಸಮಸ್ಯೆಯಾಗಿತ್ತು. ಎಷ್ಟೋ ವೈದ್ಯರಿಗೆ ತೋರಿಸಿದರೂ ಪ್ರಯೋಜನ ಆಗಲಿಲ್ಲ. ▶ 9ನೇ ಪುಟಕ್ಕೆ



> “ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಬರಮಾಡಿಕೊಳ್ಳಲು ಪಕ್ಷದ ಮುಖಂಡರು ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿದ್ದರು. ಆದರೆ ಶಾಸಕ ಜಿ.ಟಿ.ದೇವೇಗೌಡರ ಗೈರು ಹಾಜರಿ ಎದ್ದು ಕಾಣುತ್ತಿತ್ತು. ಇತ್ತೀಚೆಗೆ ಹೆಚ್.ಡಿ.ದೇವೇಗೌಡರು ಶಾಸಕ ಜಿಟಿಡಿ ನಿವಾಸಕ್ಕೆ ತೆರಳಿ, ಜೆಡಿಎಸ್‌ನಲ್ಲೇ ಮುಂದುವರೆಯುವಂತೆ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ, ಜಿ.ಟಿ.ದೇವೇಗೌಡರು ನಂಜನಗೂಡಲ್ಲಿ ದೊಡ್ಡ ದೇವೇಗೌಡರೊಂದಿಗೆ ದೇವರ ದರ್ಶನ ಮಾಡಿದರು.

ಕೌಟುಂಬಿಕ ಕಲಹದಿಂದ ಬೇಸತ್ತ ನರ್ಸ್ ಮೂವರು ಮಕ್ಕಳೊಂದಿಗೆ ಆತ್ಮಹತ್ಯೆ

ಮದ್ದೂರು, ಡಿ.1–ಕೌಟುಂಬಿಕ ಕಲಹದಿಂದ ಬೇಸತ್ತ ನರ್ಸ್‌ವೊಬ್ಬರು ತನ್ನ ಮೂರು ಮಕ್ಕಳಿಗೆ ವಿಷ ಉಣಿಸಿ ಕೊಂದು, ತಾನೂ ನೇಣಿಗೆ ಶರಣಾದ ಹೃದಯವಿದ್ರಾವಕ ಘಟನೆ ಮದ್ದೂರಿನ ಹೊಳೆಬೀದಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಕಾರ್ ಮೆಕ್ಯಾನಿಕ್ ಆಗಿರುವ ಅಖಿಲ್ ಅಹಮದ್ ಎಂಬುವರ ಪತ್ನಿ, ಮದ್ದೂರಿನ ಖಾಸಗಿ ನರ್ಸಿಂಗ್ ಹೋಂನ ನರ್ಸ್ ಉಸ್ಮಾ ಕೌಸರ್(30) ಎಂಬುವರೇ ತಮ್ಮ ಪುತ್ರ ಹ್ಯಾರೀಸ್(7), ಪುತ್ರಿಯರಾದ ಆಲೀಸಾ(4) ಮತ್ತು ಅನಮ್ ಫಾತಿಮಾ(2) ಅವರನ್ನು ಕೊಂದು, ತಾನೂ ಆತ್ಮಹತ್ಯೆ ಮಾಡಿಕೊಂಡವರು. ಉಸ್ಮಾ ಕೌಸರ್ ಪತಿ ಅಖಿಲ್ ಅಹಮದ್ ಚನ್ನಪಟ್ಟಣದಲ್ಲಿ ▶ 9ನೇ ಪುಟಕ್ಕೆ



ಪತಿ ಹಾಗೂ ಮಕ್ಕಳೊಂದಿಗೆ ಉಸ್ಮಾ ಕೌಸರ್

ವಿದ್ಯಾರ್ಥಿ ಬಲಿಯಾದ ಬೆನ್ನಲ್ಲೇ ಈಗ ವಿದ್ಯಾರ್ಥಿನಿ ಚಿರತೆಗೆ ಬಲಿ

ತಿ.ನರಸೀಪುರ, ಡಿ.1–ಚಿರತೆ ದಾಳಿಗೆ ಯುವತಿ ಬಲಿಯಾಗಿರುವ ಘಟನೆ ತಾಲೂಕಿನ ಎಸ್.ಕೆಬ್ಬೇಹುಂಡಿ ಗ್ರಾಮದಲ್ಲಿ ಗುರುವಾರ ನಡೆದಿದೆ.



ಗ್ರಾಮದ ನಿವಾಸಿ ರಮೇಶ್‌ನಾಯಕ ಎಂಬುವರ ಪುತ್ರಿ ಹಾಗೂ ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಮೇಘನಾ(22) ಚಿರತೆಗೆ ಬಲಿಯಾದವರು. ಯುವತಿ ಬಹಿರ್ದೆಸೆಗೆ ಹೋಗಿದ್ದ ವೇಳೆ ಚಿರತೆ ದಾಳಿ ನಡೆಸಿದೆ. ದಾಳಿಯಿಂದ ತೀವ್ರ ಗಾಯಗೊಂಡಿದ್ದ ಯುವತಿಯನ್ನು ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾಳೆ. ತಿಂಗಳ ಹಿಂದೆಯಷ್ಟೇ ಚಿರತೆ ದಾಳಿಯಿಂದ ಎಂ.ಎಲ್.ಹುಂಡಿ ಗ್ರಾಮದ ಯುವಕ ಬಲಿಯಾದ ನೆನಪು ಮಾಸುವ ಮುನ್ನವೇ ಚಿರತೆ ದಾಳಿಗೆ ಯುವತಿ ಬಲಿಯಾಗಿರುವುದು ತಾಲೂಕಿನ ಜನತೆಯ ಆತಂಕಕ್ಕೆ ಕಾರಣವಾಗಿದ್ದು, ಅರಣ್ಯ ಇಲಾಖೆ ನಿರ್ಲಕ್ಷ್ಯದಿಂದ ಈಗ ಮತ್ತೊಂದು ಬಡ ಜೀವ ಪ್ರಾಣ ಕಳೆದುಕೊಂಡಂತಾಗಿದೆ.

ಸಾರ್ವಜನಿಕರ ಆಕ್ರೋಶ: ಕಳೆದ ತಿಂಗಳಷ್ಟೇ ಚಿರತೆ ▶ 7ನೇ ಪುಟಕ್ಕೆ



SDJ GOLD

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.

ಒಂದು ಗ್ರಾಂ ಚಿನ್ನಕ್ಕೆ 5500

8884304444

ಮೈಸೂರಲ್ಲಿ ಹೆಚ್‌ಐವಿ/ಏಡ್ಸ್ ಜಾಗೃತಿ ಜಾಥಾ

ಹೆಚ್‌ಐವಿ ಪಾಸಿಟಿವಿಟಿ ದರ: 8ನೇ ಸ್ಥಾನದಲ್ಲಿ ಮೈಸೂರು ಜಿಲ್ಲೆ

ಏಡ್ಸ್ ಪೀಡಿತರ ಕೀಳಾಗಿ ಕಾಣಬೇಡಿ, ನೈತಿಕವಾಗಿ ಬೆಂಬಲಿಸಿ; ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕಿವಿಮಾತು

ಮೈಸೂರು, ಡಿ.1 (ಆರ್‌ಕೆಬಿ)– ವಿಶ್ವ ಏಡ್ಸ್ ದಿನದ ಅಂಗವಾಗಿ ನೂರಾರು ಮಂದಿ ಗುರುವಾರ ಮೈಸೂರಿನಲ್ಲಿ ಹೆಚ್‌ಐವಿ/ಏಡ್ಸ್ ಕುರಿತ ಜಾಗೃತಿ ಜಾಥಾ ನಡೆಸಿದರು. ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮಿಲೇನಿಯಂ ವೃತ್ತ (ಎಲ್‌ಐಸಿ ವೃತ್ತ)ದ ಬಳಿ ಜಾಗೃತಿ ಜಾಥಾಕ್ಕೆ ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ಡಿಎಲ್‌ಎಸ್‌ಎ) ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಚಾಲನೆ ನೀಡಿದರು.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರ, ಆಶೋದಯ ಸಮಿತಿ, ಎಸ್‌ವಿವೈಎಂ, ಮಹಾನ್ ಹಾಗೂ ಇನ್ನಿತರೆ ಸೇವಾ ಸಂಸ್ಥೆಗಳ ಆಶ್ರಯದಲ್ಲಿ ಜಾಥಾ ನಡೆಯಿತು. ವಿವಿಧ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿ, ಹೆಚ್‌ಐವಿ/ಏಡ್ಸ್ ಬಗ್ಗೆ ಜನಜಾಗೃತಿ ಮೂಡಿಸಿದರು. ಬನ್ನಿಮಂಟಪ ಬಡಾವಣೆಯ ವಿವಿಧ ರಸ್ತೆಗಳ ಮೂಲಕ ಸಾಗಿದ ಜಾಥಾದಲ್ಲಿ ಹೆಚ್‌ಐವಿ/ಏಡ್ಸ್ ಕುರಿತ ಘೋಷಣಾ ಫಲಕಗಳನ್ನು ಹಿಡಿದಿದ್ದ ವಿದ್ಯಾರ್ಥಿಗಳು, ಏಡ್ಸ್ ಬಗ್ಗೆ ಜನರು ಎಚ್ಚರಿಕೆ ವಹಿಸುವಂತೆ ಸಾರಿದರು. ಜಾಥಾ ಬಳಿಕ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಂದಲೇ ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ ಚಾಲನೆ ನೀಡಲಾಯಿತು. ನಂತರ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಹೆಚ್‌ಐವಿ/ಏಡ್ಸ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಏಡ್ಸ್ ಹರಡುವುದನ್ನು ತಡೆಯಲು ವಿಶ್ವದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಏಡ್ಸ್‌ಗೆ ಪ್ರಮುಖವಾದ ನಾಲ್ಕು ಕಾರಣಗಳೆಂದರೆ, ಅಸುರಕ್ಷಿತ ಲೈಂಗಿಕ ಸಂಪರ್ಕ, ಪರೀಕ್ಷೆ ಮಾಡದ ಸೋಂಕಿತ ರಕ್ತ, ರಕ್ತ ಉತ್ಪನ್ನಗಳ ವರ್ಗಾವಣೆ ಮಾಡುವುದರಿಂದ, ಸಂಸ್ಕರಿಸದ ಹರಿತವಾದ ಸಾಧನಗಳು, ಸೂಜಿ, ಸಿರಿಂಜು, ಶಸ್ತ್ರಕ್ರಿಯಾ ಸಾಧನೆಗಳ ಉಪಯೋಗದಿಂದ ಹಾಗೂ ಹೆಚ್‌ಐವಿ ಸೋಂಕು ಇರುವ ತಾಯಿಯಿಂದ ಆಕೆಯ ಮಗುವಿಗೆ ಹರಡುತ್ತದೆ. ಜೊತೆಗೆ ಡ್ರಗ್ಸ್, ಹಚ್ಚೆ ಹಾಕಿಸಿಕೊಳ್ಳುವಾಗ ಸೂಜಿಗಳ ಬಳಕೆಯಿಂದಲೂ ಸೋಂಕು ಬರಬಹುದು. ಹೀಗಾಗಿ ಇವೆಲ್ಲದರ ▶ 9ನೇ ಪುಟಕ್ಕೆ





2022–23 ಸಾಲಿನ ಕಳೆದ ಅಕ್ಟೋಬರ್‌ವರೆಗೆ 440 ಮಂದಿಗೆ, 13 ಗರ್ಭಿಣಿಯರಿಗೆ ಹೆಚ್‌ಐವಿ ಸೋಂಕು

ಡಿಹೆಚ್‌ಓ ಡಾ.ಪ್ರಸಾದ್ ಮಾಹಿತಿ

ಮೈಸೂರು, ಡಿ.1–ಹೆಚ್‌ಐವಿ ಪಾಸಿಟಿವಿಟಿ ದರದಲ್ಲಿ ಮೈಸೂರು ಜಿಲ್ಲೆ 8ನೇ ಸ್ಥಾನದಲ್ಲಿದೆ. 2021ರ ಮಾಹಿತಿ ಪ್ರಕಾರ ಕರ್ನಾಟಕದಲ್ಲಿ ಅತೀ ಹೆಚ್ಚು ಹೆಚ್‌ಐವಿ ಪ್ರವೆಲೆನ್ಸ್ ಹೊಂದಿರುವ ಜಿಲ್ಲೆಗಳ ಪೈಕಿ 1–ಬೆಳಗಾವಿ, 2–ಧಾರವಾಡ ಮತ್ತು ವಿಜಯಪುರ, 3–ಚಿತ್ರದುರ್ಗ, 4– ರಾಯಚೂರು, 5– ಕಲಬುರ್ಗಿ, 6– ಬಾಗಲಕೋಟೆ, 7–ಕೊಪ್ಪಳ. ನಂತರದ ಸ್ಥಾನದಲ್ಲಿ ಮೈಸೂರು ಜಿಲ್ಲೆ ಇದೆ ಎಂದು ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ 2020–21ನೇ ಸಾಲಿನಲ್ಲಿ ಹೆಚ್‌ಐವಿ ಪರೀಕ್ಷೆ ಮಾಡಲಾದ 91,953 ಸಾಮಾನ್ಯ ಜನರ ಪೈಕಿ 521 (ಶೇ.0.56) ಸೋಂಕಿತರನ್ನು ಪತ್ತೆ ಹಚ್ಚಲಾಗಿದೆ. 45,636 ಗರ್ಭಿಣಿಯರನ್ನು ಪರೀಕ್ಷಿಸಿ, ಆ ಪೈಕಿ 20 (ಶೇ.0.04) ಮಂದಿಗೆ ಹೆಚ್‌ಐವಿ ಸೋಂಕು ಇರುವುದು ಪತ್ತೆ ಹಚ್ಚಲಾಯಿತು ಎಂದರು. 2020–21ನೇ ಸಾಲಿನಲ್ಲಿ ಪರೀಕ್ಷೆಗೆ ಒಳಪಡಿಸಲಾದ 1,31,964 ಸಾಮಾನ್ಯ ಜನರ ಪೈಕಿ 722 (ಶೇ.0.54) ಮಂದಿಗೆ ಹಾಗೂ ▶ 9ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಕಂಡಕ್ಟರ್ : ಏನಯ್ಯಾ, ಹನ್ನೆರಡು ವರ್ಷ ಆಗಿರುವವರಿಗೆ ಅರ್ಧ ಚಾರ್ಜು. ನಿನ್ನ ವಯಸ್ಸು ಎಷ್ಟು?
ಆತ : ಹನ್ನೊಂದು ವರ್ಷ
ಕಂಡಕ್ಟರ್ : ಹಾಗಾದರೆ ಹನ್ನೆರಡು ಆಗೋದು ಯಾವಾಗ?
ಆತ : ಬಸ್ ಇಳಿದ ಮೇಲೆ!

ಮೈಸೂರು ಮಿತ್ರ

ಶುಕ್ರವಾರ, 2 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜೀವನದ ಆರಂಭದಲ್ಲಿಯೇ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವವನು ಧನ್ಯ – ಎಮರ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿರಿಯ ಮಗನಾಗ ಬೇಡ, ಕಿರಿ ಸೊಸೆಯಾಗಬೇಡ

ನಿಮ್ಮ ಪತ್ರಗಳು

ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನದ ಹಕ್ಕನ್ನು ಕಸಿದುಕೊಂಡ ಕೇಂದ್ರ ಸರ್ಕಾರ

ಮಾನ್ಯರೆ,

ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೇಂದ್ರ ಸರ್ಕಾರವು ಒಂದರಿಂದ ಎಂಟನೇ ತರಗತಿಯ ಎಸ್.ಸಿ/ಎಸ್.ಟಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ನಿಲ್ಲಿಸಿ, ಯೋಜನೆಯನ್ನು ಕೇವಲ 9 ಮತ್ತು 10ನೇ ತರಗತಿಗೆ ಸೀಮಿತಗೊಳಿಸಿದೆ. ಈವರೆವಿಗೂ ಎಲ್ಲ ತರಗತಿಯ ವಿದ್ಯಾರ್ಥಿಗಳಿಗೂ ವೇತನದ ಅವಕಾಶ ಇತ್ತು. ಈಗಿನ ನಿರ್ಧಾರದಿಂದ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ವೇತನದಿಂದ ವಂಚಿತರಾಗುತ್ತಿದ್ದಾರೆ. ಒಂದರಿಂದ ಎಂಟನೇ ತರಗತಿಯ ಮಕ್ಕಳು ಕಡ್ಡಾಯ ಶಿಕ್ಷಣದ ಅಡಿಯಲ್ಲಿ ಬರುವುದರಿಂದ, ಇವರ ಶಿಕ್ಷಣದ ಸಂಪೂರ್ಣ ಜವಾಬ್ದಾರಿ ಸರ್ಕಾರದ್ದೇ ಆಗಿರುತ್ತದೆ. ಹಾಗಾಗಿ ವಿದ್ಯಾರ್ಥಿ ವೇತನವನ್ನು ಹಿಂಪಡೆಯಲಾಗಿದೆ ಎಂದು ಸರ್ಕಾರ ಹೇಳಿದೆ. ಈಗಾಗಲೇ ಹಾಸ್ಟೆಲ್ ಸೌಲಭ್ಯ, ಶಾಲೆಗಳ ಸಮರ್ಪಕ ನಿರ್ವಹಣೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳ ಕೊರತೆಯಿಂದ ಶಾಲೆಗಳು ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿವೆ ಮತ್ತು ವಿದ್ಯಾರ್ಥಿಗಳು ಹಲವು ಯೋಜನೆಗಳಿಂದ ವಂಚಿತರಾಗಿದ್ದಾರೆ. ಅಸಂಖ್ಯಾತ ಬಡ ವರ್ಗದ ಮಕ್ಕಳು ಶಾಲಾ ಶುಲ್ಕ ಕಟ್ಟಲು ಆಗದೆ ಆರ್ಥಿಕ ಸಮಸ್ಯೆಯ ಕಾರಣದಿಂದ ಶಿಕ್ಷಣವನ್ನು ತ್ಯಜಿಸಿ, ಕೆಲಸ ಮಾಡುತ್ತಿದ್ದಾರೆ. ಎಸ್.ಸಿ/ಎಸ್.ಟಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಈಗ ವಿದ್ಯಾರ್ಥಿ ವೇತನವನ್ನೂ ಸಹ ಕೈಬಿಟ್ಟರೆ, ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಶಾಶ್ವತವಾಗಿ ಶಿಕ್ಷಣದಿಂದ ದೂರ ಉಳಿಯುವ ಸಾಧ್ಯತೆ ಇದೆ.

ಹೋರಾಟಗಳ ಫಲವಾಗಿ ವಿದ್ಯಾರ್ಥಿ ವೇತನ ಹಾಗೂ ಇನ್ನಿತರ ಹಕ್ಕುಗಳನ್ನು ವಿದ್ಯಾರ್ಥಿ ಸಮುದಾಯ ದಕ್ಕಿಸಿಕೊಂಡಿದೆ. ವಿದ್ಯಾರ್ಥಿಗಳ ಹಕ್ಕನ್ನು ಯಾವ ಕಾರಣಕ್ಕೂ ಸರ್ಕಾರವು ಹಿಂಪಡೆಯಬಾರದು. ವಾಸ್ತವದಲ್ಲಿ, ಹುಟ್ಟುವ ಪ್ರತಿ ಮಗುವಿಗೂ ಶಿಕ್ಷಣ ನೀಡುವುದು ಸರ್ಕಾರದ ಮೂಲಭೂತ ಜವಾಬ್ದಾರಿ. ಒಂದಲ್ಲ ಮತ್ತೊಂದು ನೆಪವೊಡ್ಡಿ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮುಡಿಪಾಗಿರುವ ಯೋಜನೆಗಳನ್ನು ನಿಲ್ಲಿಸುತ್ತಿರುವುದು ವಿದ್ಯಾರ್ಥಿಗಳ ಬಗ್ಗೆ ಸರ್ಕಾರದ ನಿರ್ಲಕ್ಷ್ಯವನ್ನು ತೋರಿಸುತ್ತದೆ.

ಈ ಕೂಡಲೇ ಸರ್ಕಾರವು ಹಿಂದಿನಂತೆ ಎಲ್ಲ ವಿದ್ಯಾರ್ಥಿಗಳಿಗೂ ವೇತನ ನೀಡುವ ಯೋಜನೆಯನ್ನು ಮುಂದುವರೆಸಬೇಕು. ಕಡ್ಡಾಯ ಶಿಕ್ಷಣದ ಹೆಸರಿನಲ್ಲಿ ವಿದ್ಯಾರ್ಥಿಗಳ ಹಕ್ಕನ್ನು ಕಸಿಯುವಂತಹ ನಿರ್ಧಾರ ಕೈಗೊಳ್ಳಬಾರದು.

–ಸ್ವಾತಿ, ಎಐಡಿಎಸ್‌ಓ ಪರವಾಗಿ

ಟ್ವಿಟರ್ ಅಕ್ಷರ ಮಿತಿ ಹೆಚ್ಚಳ ಸ್ವಾಗತಾರ್ಹ

ಮಾನ್ಯರೆ,

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಧಿಕಾರ ಹುಟ್ಟಿನಿಂದಲೇ ಬಂದಿರುತ್ತದೆ. ಜನಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಹಲವಾರು ವೇದಿಕೆಗಳಿವೆ. ಪ್ರಸ್ತುತ ಟ್ವಿಟರ್ ವೇದಿಕೆಯೂ ಒಂದಾಗಿದೆ. ಟ್ವಿಟರ್‌ನ ಇತಿಹಾಸ ಗಮನಿಸುವುದಾದರೆ ಇದರ ಪ್ರಾರಂಭ ಮಾರ್ಚ್ 21, 2006 ರಂದು ರಾತ್ರಿ 9:50 ರಲ್ಲಿ ಜ್ಯಾಕ್ ಎಂಬುವರು Twitter ನಲ್ಲಿ ಮೊದಲ ಸಂದೇಶ ಕಳುಹಿಸಿದರು.

ಅದರ ಸಾರಾಂಶ "ನನ್ನ ಟ್ವಿಟ್ ಅನ್ನು ಜಸ್ಟ್ ಟೆಸ್ಟ್ ಮಾಡುತ್ತಿದ್ದೇನೆ" ಎಂದು ಬರೆಯಲಾಗಿದೆ. ಅಂಕಿ ಅಂಶದ ಪ್ರಕಾರ 2012ರಲ್ಲಿ, 100 ಮಿಲಿಯನ್‌ಗಿಂತಲೂ ಹೆಚ್ಚು ಬಳಕೆದಾರರು ದಿನಕ್ಕೆ 340 ಮಿಲಿಯನ್ ಟ್ವೀಟ್‌ಗಳನ್ನು ಪೋಸ್ಟ್ ಮಾಡಿದ್ದಾರೆ. ಪ್ರಸ್ತುತ 400 ಮಿಲಿಯನ್ ಜನರು ಟ್ವಿಟರ್‌ನ್ನು ಬಳಸುತ್ತಿದ್ದು, ಪ್ರತಿ ಸೆಕೆಂಡಿಗೆ 6000 ಟ್ವೀಟ್‌ಗಳನ್ನು ಪೋಸ್ಟ್ ಮಾಡಲಾಗುತ್ತದೆ. ಒಂದು ದಿನ 500 ಮಿಲಿಯನ್ ಟ್ವಿಟ್‌ಗಳು ಟ್ವಿಟರ್‌ನಲ್ಲಿ ಪೋಸ್ಟ್ ಆಗುತ್ತದೆ. ಆದರೆ ಟ್ವಿಟರ್‌ನಲ್ಲಿ ನಾವು ಪೋಸ್ಟ್ ಮಾಡುವುದಕ್ಕೆ ಪದಗಳ ಮಿತಿಯನ್ನು ವಿಧಿಸಲಾಗಿತ್ತು.

ಟ್ವಿಟರ್‌ನ ಪ್ರಾರಂಭದಲ್ಲಿ 140 ಪದಗಳ ಮಿತಿಯನ್ನು ಹೊಂದಿದ್ದ ಟ್ವಿಟರ್‌ನಲ್ಲಿ ಚುಟುಕಾಗಿ ನಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಬಹುದಿತ್ತು. ನಂತರ 2017 ರಲ್ಲಿ ಪದಗಳ ಮಿತಿಯನ್ನು 280 ಪದಗಳಿಗೆ ಹೆಚ್ಚಿಸಲಾಗಿತ್ತು. ಆದರೂ ಪದಗಳ ಮಿತಿಯನ್ನು ಹೆಚ್ಚಿಸಬೇಕೆಂಬುದು ಟ್ವಿಟರ್ ಬಳಸುವವರ ಅಭಿಪ್ರಾಯವಾಗಿತ್ತು. ಇದೀಗ ಟ್ವಿಟರ್ ಬಳಕೆದಾರರ ಅನುಕೂಲಕ್ಕಾಗಿ ಟ್ವಿಟರ್ ಸಂಸ್ಥೆ ಟ್ವಿಟ್‌ಗಳ ಪದಗಳ ಮಿತಿಯನ್ನು 1000 ಪದಗಳಿಗೆ ಏರಿಕೆ ಮಾಡಿರುವುದು ನಮ್ಮ ಅಭಿಪ್ರಾಯವನ್ನು ವಿವರವಾಗಿ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಟ್ವಿಟರ್‌ನ ಈ ಕ್ರಮ ಉತ್ತಮವಾಗಿದ್ದು, ಟ್ವಿಟರ್ ಸಂಸ್ಥೆಯ ಈ ನಿರ್ಧಾರಕ್ಕೆ ಜಗತ್ತಿನ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು

ಇಎಸ್‌ಐಸಿ ವೇತನ ಮಿತಿ ಏರಿಕೆ ಮಾಡಲಿ

ಮಾನ್ಯರೆ,

ಕೇಂದ್ರ ಸರ್ಕಾರವು ಖಾಸಗಿ ವಲಯದ ಕಾರ್ಖಾನೆಗಳ ನೌಕರರ ಹಾಗೂ ಇನ್ನಿತರ ಖಾಸಗಿ ಸಂಸ್ಥೆಗಳ ನೌಕರರ ಆರೋಗ್ಯದ ಹಿತದೃಷ್ಟಿಯಿಂದ ಕಾರ್ಮಿಕರ ವಿಮಾ ಯೋಜನೆಯನ್ನು(ಇಎಸ್‌ಐಸಿ)ಜಾರಿಗೆ ತಂದಿದ್ದು, ಪ್ರತಿ ತಿಂಗಳು ನೌಕರರಿಂದ ಇಂತಿಷ್ಟು ವಂತಿಗೆಯನ್ನು ಪಡೆದು ಕುಟುಂಬದ ಎಲ್ಲಾ ಸದಸ್ಯರಿಗೆ ಆರೋಗ್ಯ ವಿಮೆಯನ್ನು ಇಎಸ್‌ಐಸಿ ಆಸ್ಪತ್ರೆ ಹಾಗೂ ಔಷಧಾಲಯಗಳ ಮೂಲಕ ಚಿಕಿತ್ಸೆಯನ್ನು ನೀಡುತ್ತಿದೆ, ಈ ಸೌಲಭ್ಯವು ಕೆಲವು ಖಾಸಗಿ ನೌಕರರಿಗೆ ತುಂಬಾ ಅನುಕೂಲವಾಗುತ್ತಿದೆ, ಆದರೆ ನೌಕರರ ಪ್ರತಿ ತಿಂಗಳ ವೇತನವು ಸರ್ಕಾರದ ನಿಯಮಾನುಸಾರ ಗರಿಷ್ಠ ಮಿತಿ 21,000 ರೂ. ಪಡೆಯುವ ಆಧಾರದ ಮೇಲೆ ಈ ವಿಮೆಯು ನಿರ್ಧಾರವಾಗುತ್ತಿದೆ. ರೂ. 21,000 ಕ್ಕಿಂತ ಹೆಚ್ಚು ವೇತನವನ್ನು ಪಡೆಯುವ ಮಧ್ಯಮ ವರ್ಗದ ನೌಕರರು ಈ ವಿಮೆಯಿಂದ ವಂಚಿತರಾಗುತ್ತಿದ್ದಾರೆ. ಇಂದಿನ ದಿನಗಳಲ್ಲಿ ದಿನನಿತ್ಯ ಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೆ ಏರಿದ್ದು, ಜೀವನವನ್ನು ಸಾಗಿಸುವುದೇ ತುಂಬಾ ಕಷ್ಟಕರವಾಗಿದ್ದು, ನೌಕರರು ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸ ಶುಲ್ಕ, ಮನೆಯಲ್ಲಿ ಅನಾರೋಗ್ಯದಿಂದಿರುವ ಹಿರಿಯ ಜೀವಗಳ ತಿಂಗಳ ಔಷಧ ಮತ್ತು ಚಿಕಿತ್ಸಾ ವೆಚ್ಚ, ಗೃಹಬಳಕೆಯ ಅಗತ್ಯತೆ ವಸ್ತುಗಳ ಖರ್ಚು, ಖಾಸಗಿ ಮಹಿಳಾ ನೌಕರರ ಹೆರಿಗೆ ಆಸ್ಪತ್ರೆ ವೆಚ್ಚ ಹಾಗೂ ಆರು ತಿಂಗಳ ವೇತನ, ದಿನನಿತ್ಯದ ಆಹಾರ ಪದಾರ್ಥಗಳ ಖರೀದಿ ಖರ್ಚು, ಇನ್ನಿತರ ಖರ್ಚುಗಳಿಗಾಗಿ ಈ ವೇತನ ಸಾಲುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ಅನಾರೋಗ್ಯದಿಂದ ಆಸ್ಪತ್ರೆಗೆ ನೌಕರ ಅಥವಾ ಯಾರಾದರೂ ಕುಟುಂಬ ಸದಸ್ಯರು ದಾಖಲಾದರೆ, ಲಕ್ಷಾಂತರ ರೂಪಾಯಿ ಚಿಕಿತ್ಸೆಗಾಗಿ ಖರ್ಚಾಗುತ್ತದೆ. ಇದರಿಂದ ನೌಕರರ ಆರ್ಥಿಕ ಪರಿಸ್ಥಿತಿಯು ಇನ್ನೂ ಹದಗೆಟ್ಟಿ, ಸಾಲಗಾರರಾಗಿ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಯಿಂದ ಖಾಸಗಿ ನೌಕರರು ಹೊರಬರಲು ಅನುಕೂಲವಾಗುವಂತೆ, ಪ್ರತಿ ತಿಂಗಳ ವೇತನದ ಆಧಾರದ ಮೇಲೆ 21,000 ದಿಂದ 30,000ಗಳಿಗೆ ಗರಿಷ್ಠ ವೇತನ ಮಿತಿಯನ್ನು ಸರ್ಕಾರವು ಏರಿಕೆ ಮಾಡಿದರೆ, ಈ ವೇತನವನ್ನು ಪಡೆಯುವ ನೌಕರರಿಂದ ಪ್ರತಿ ತಿಂಗಳು ವಂತಿಗೆಯನ್ನು ಪಡೆದು ಇಎಸ್‌ಐಸಿ ಆಸ್ಪತ್ರೆಯ ಸೌಲಭ್ಯವನ್ನು ಬಹುಸಂಖ್ಯಾತ ನೌಕರರಿಗೆ ನೀಡಿದರೆ ತುಂಬಾ ಅನುಕೂಲವಾಗುತ್ತದೆ. ಸಾವಿರಾರು ನೌಕರ ಕುಟುಂಬಗಳ ಬದುಕಿನಲ್ಲಿ ಸಂತಸ ಉಂಟಾಗಿ ಹಾಗೂ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರವಾಗಲಿ ತುರ್ತಾಗಿ ಗಮನಹರಿಸಿ ಇಎಸ್‌ಐಸಿ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಕೊಡಗು ನೈಸರ್ಗಿಕ ಚೆಲುವೆ; ಸಾಹಸಿಗರ ನಾಡು



ಕೊಡಗು ಮೈಸೂರು ರಾಜ್ಯದ ಒಂದು ಪುಟ್ಟ ಜಿಲ್ಲೆ. ಕನ್ನಡದ ಕುಡು ಎಂಬ ಶಬ್ದದಿಂದ ಕೊಡಗು ಎನ್ನುವ ಹೆಸರು ಬಂದಿದೆ. ಕೊಡಗಿನ ಸರ್ವೇಕ್ಷಣೆ ನಡೆಸಿದ ಲೆಫ್ಟಿನೆಂಟ್ ಕಾನಾರ್ ಕೊಡಗನ್ನು ಲಕ್ಷಾಂತರ ಮಲೆನಾಡು ಎಂದು ಕರೆದಿದ್ದಾನೆ. ಮುಂದುವರೆದು ಕೊಡಗು ಎಂದರೆ ಪಶ್ಚಿಮಕ್ಕಿರುವ ನಾಡೂ ಎಂದು ಕಾನಾರ್ ಹೇಳಿದ್ದಾರೆ. ಕೊಡಗಿನ ಬೆಟ್ಟ ಅಕ್ಕಪಕ್ಕದಲ್ಲೇ ಇವೆ. ಕೊಡಗಿನ ಪೂರ್ವ ಗಡಿಯಲ್ಲಿ ಕಾವೇರಿ ಹಾಗೂ ಲಕ್ಷ್ಮಣತೀರ್ಥಗಳ ನಡುವಿನ ಕಣಿವೆಗಳಲ್ಲಿ ಹೆಚ್ಚು ಪ್ರಪಾತಗಳಿವೆ. ಒಟ್ಟಿನಲ್ಲಿ ಪರ್ವತ ಶಿಖರಗಳು ಹಸಿರು ಹುಲ್ಲಿನಿಂದಲೂ ಮತ್ತು ವೃಕ್ಷಗಳ ಎತ್ತರವಾದ ಅರಣ್ಯವಿದೆ. ಕೊಡಗಿನಲ್ಲಿ ಬಿದಿರು ವಿಶೇಷವಾಗಿ ಕಂಡು ಬರುತ್ತದೆ. ಕೆಲವು ಕಡೆಗಳಲ್ಲಿ ಕಾಫಿಯ ಗಿಡಗಳಿವೆ.

ಪ್ರಮುಖ ಶಿಖರಗಳು: ಕೊಡಗಿನ ಪಶ್ಚಿಮದ ಗಡಿಯ ಬಳಿ ಇರುವ ಶಿಖರಗಳಲ್ಲಿ ಮುಖ್ಯವಾದವುಗಳೇ ಹನುಮಬೆಟ್ಟ ಮತ್ತು ಪೆರಮಾಲೆ ಮಲೈ. ಬ್ರಹ್ಮಗಿರಿಯಿಂದ ಕಿಗ್ಗಟ್ಟ ನಾಡಿನ ಕಡೆಗಳಲ್ಲಿ ಅನೇಕ ಕವಲುಗಳು ಹಬ್ಬಿವೆ. ಇವುಗಳಲ್ಲಿ ಮುಖ್ಯವಾದವುಗಳು– ವಿರಾಜಪೇಟೆ ಹತ್ತಿರವಿರುವ ಅಂಬಟಿಬೆಟ್ಟ, ಬಿಟ್ಟಂಗಾಲ, ಕುಂಡದಬೆಟ್ಟ, ಸಿದ್ದೇಶ್ವರ ಬೆಟ್ಟ, ಪೌಕುಲ ಬೆಟ್ಟ, ಇನ್ನೊಂದು ಕವಲು ಡೊಂಕು ಡೊಂಕಾಗಿ ಕುಶಾಲನಗರದ ಕಡೆಗೆ ಸಾಗುತ್ತದೆ. ಕೊಡಗಿನಲ್ಲಿ ತೇಗಮರದ ಕಾಡುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕೊಡಗಿನ ಉತ್ತರದ ಗಡಿಯಿಂದ ಕಾವೇರಿ ನದಿಯ ಕಡೆಗೆ ಬೆಟ್ಟದ ಶ್ರೇಣಿಯಿದೆ.

ಹತ್ತಾರು ನದಿಗಳ ಉಗಮ ಸ್ಥಾನ: ಕೊಡಗಿನ ಮುಖ್ಯ ನದಿಯೇ ಕಾವೇರಿ. ಇದು ಬ್ರಹ್ಮಗಿರಿಯಲ್ಲಿ ಹುಟ್ಟಿ ಸಿದ್ದಾಪುರದವರೆಗೂ ಆಗ್ನೇಯಾಭಿಮುಖವಾಗಿ ಹರಿದು, ಅಲ್ಲಿಂದ ಈಶಾನ್ಯಕ್ಕೆ ದಿಕ್ಕು ಬದಲಾಯಿಸುತ್ತದೆ. ಕಾವೇರಿಯನ್ನು ಸೇರುವ ಉಪನದಿಗಳೇ, ಕನ್ನಿಕೆ, ಕಕ್ಕಬೆ, ಕಾಡನೂರು ಹೊಳೆ, ಮುತ್ತಾರು ಮುಡಿ, ಚಿಕ್ಕಹೊಳೆ ಮತ್ತು ಹಾರಂಗಿ, ಪಶ್ಚಿಮಕ್ಕೆ ಹರಿಯುವ ಮುಖ್ಯನದಿಯೇ ಬರಪೊಳೆ. ಇದು ನೈಋತ್ಯದಲ್ಲಿ ಮಲಬಾರಿನ ಕಡೆಗೆ ಸಾಗುತ್ತದೆ. ಇತರ ನದಿಗಳಾದ ಸಾರತ್, ಕುಮಾರಧಾರೆ ಮತ್ತು ಪಯಸ್ವಿನಿ ಕೊಡಗಿನ ಇತರ ನದಿಗಳು.

ವನ್ಯಜೀವಿ ಸಂಪತ್ತು: ಕೊಡಗಿನಲ್ಲಿ ಪ್ರಾಣಿಗಳಿಗೆ ಘಟ್ಟ ಕಾಡುಗಳ ರಕ್ಷಣೆಯೂ ಸಾಕಷ್ಟು ದೊರಕುತ್ತದೆ ಹಾಗೂ ಕುಡಿಯುವ ನೀರು ಇರುವುದರಿಂದ ಪ್ರಾಣಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕೊಡಗಿನ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಕಪ್ಪು, ಬೂದು ಮತ್ತು ಕಂದು ಬಣ್ಣದ ಕೋತಿಗಳು ಹೇರಳವಾಗಿವೆ. ನಾಯಿಗಳಲ್ಲಿ ಕ್ನಾಯಿ ಮುಖ್ಯವಾದದ್ದು. ಇದು ತೋಳವನ್ನು ಹೋಲುತ್ತದೆಯಾದ್ದರಿಂದ ಈ ನಾಯಿ ಬಹು ಭಯಂಕರ. ಈ ನಾಯಿಗೆ ಹುಲಿಯು ಕೂಡ ಹೆದರುತ್ತದೆ. ಇದು ಒಂಟಿಯಾಗಿ ತಿರುಗುವುದು ಅಪರೂಪ. ಕೊಡಗಿನಲ್ಲಿ ಹುಲಿ, ಕಿರುಬ, ಕಾಡುಹಂದಿ, ಕರಡಿ, ಕತ್ತೆ ಕಿರುಬ, ಮುಳ್ಳು ಹಂದಿ, ಪುನುಗು ಬೆಕ್ಕು, ಮುಂಗುಸಿ, ಇಲಿ, ಹೆಗ್ಗಣ, ಅಳಿಲು, ಆಮೆ, ಜಿಂಕೆ, ಆನೆ ಹಾಗೂ ಕಾಡೆಮ್ಮೆಗಳೂ ಇವೆ. ನಾಗರಹಾವು ಮತ್ತು ಹೆಬ್ಬಾವುಗಳೂ ವಿಶೇಷ. ಕೆಲವು ನದಿಗಳಲ್ಲಿ ಮೊಸಳೆಗಳು ಇರುತ್ತವೆ. ಕೊಡಗಿನಲ್ಲಿ ಗಿಡುಗ, ಹದ್ದು, ಮಿಂಚುಳ್ಳಿ, ಮರಕುಟಿಕ, ಕೋಗಿಲೆ, ಮೈನಾ ಮುಂತಾದವುಗಳು ಹೇರಳವಾಗಿವೆ.

ಅರಣ್ಯ ಸಂಪತ್ತು: ಈ ಜಿಲ್ಲೆಯ ಮೂರನೆಯ ಒಂದು ಭಾಗ ಅರಣ್ಯದಿಂದ ಕೂಡಿದೆ. ಇಲ್ಲಿ ತೇಗ, ಬೀಟೆ, ಹೊನ್ನೆ, ಶ್ರೀಗಂಧದ ಮರಗಳು ಮುಖ್ಯವಾದವುಗಳು. ತೇಗದ ಮರದ ಕಾಡುಗಳನ್ನು ಸರ್ಕಾರದ ಅರಣ್ಯ ಇಲಾಖೆ ಅಭಿವೃದ್ಧಿಪಡಿಸುತ್ತಿದೆ. ಬೆಂಕಿ ಕಡ್ಡಿಗಳಿಗಾಗಿ ಅವಶ್ಯಕವಾದ ಮೆದುವಾದ ಮರಗಳನ್ನು ನೆಟ್ಟು ಬೆಳೆಸಲಾಗುತ್ತಿದೆ.

ಪ್ರಮುಖ ಬೆಳೆ: ಕೊಡಗಿನ ಮುಖ್ಯ ಬೆಳೆಗಳೆಂದರೆ ಕಾಫಿ, ರಾಗಿ, ಭತ್ತ, ಮೆಣಸು, ಕಿತ್ತಳೆ, ಏಲಕ್ಕಿ ಇತ್ಯಾದಿ. ಸುಮಾರು 75 ಸಾವಿರ ಎಕರೆಗಳಲ್ಲಿ ಕಾಫಿ ತೋಟಗಳಿವೆ. ಸುಮಾರು 29000 ಎಕರೆಯನ್ನು ಕಿತ್ತಳೆ ಹಣ್ಣಿಗಾಗಿ ಮೀಸಲಿಟ್ಟಿದ್ದಾರೆ. ಅಲ್ಲದೆ ಏಲಕ್ಕಿಯನ್ನು 15000 ಎಕರೆಗಳಲ್ಲಿ ಮತ್ತು ಕಾಳು ಮೆಣಸನ್ನು 1500 ಎಕರೆಗಳಲ್ಲಿ ಬೆಳೆಯುತ್ತಾರೆ. ಮಡಿಕೇರಿ ಬಳಿ ಒಂದು ಸಾವಿರದ ಇನ್ನೂರು ಇಪ್ಪತ್ತೆರಡು ಎಕರೆಗಳಲ್ಲಿ ಚಹಾ ತೋಟವೂ ಉಂಟು. ಮಾವುಕೂಟ, ಜೋಡುಪಾಲ, ಸಂಪಾಜೆ ಮತ್ತು ಕಡಮಲ್ಲುಗಳಲ್ಲಿ ಮೂರು ಸಾವಿರ ನಾನೂರು ಇಪ್ಪತ್ತೇಳು ಎಕರೆಗಳಲ್ಲಿ ರಬ್ಬರ್ ತೋಟಗಳಿವೆ. ಬೆಟ್ಟದ ಕೆಳಗೆ 3427 ಎಕರೆಗಳಲ್ಲಿ ಸಂಪಾಜೆ, ಪೆರಾಜೆ ಹಾಗೂ ಚೆಂಬುಗಳಲ್ಲಿ ತೆಂಗು ಹಾಗೂ ಗೇರು ಬೀಜಗಳನ್ನು ಬೆಳೆಯುತ್ತಾರೆ.

ಕೈಗಾರಿಕೆ: ಕೊಡಗಿನ ಮುಖ್ಯ ಉದ್ಯಮವೇ ಜೇನು ಸಾಕುವುದು. ಭಾಗಮಂಡಲದಲ್ಲಿ ಮಧುವನ ಎಂಬ ಹೆಸರಿನ ಜೇನು ಸಾಕುವ ಕೇಂದ್ರವಿದೆ. ಕೊಡಗು ಜೇನು ಉತ್ಪಾದಕರ ಸಂಘ ಜೇನು ಉದ್ಯಮಕ್ಕಾಗಿ ಶ್ರಮಿಸುತ್ತಿದೆ. ಶನಿವಾರಸಂತೆ ಹಾಗೂ ಶಿರಂಗಾಲದಲ್ಲಿ ಕೈಮಗ್ಗದ ಬಟ್ಟೆಯು ತಯಾರಾಗುತ್ತದೆ. ಶಿರಂಗಾಲದಲ್ಲಿ ಕೈಮಗ್ಗ ನೇಕಾರರ ಸಹಕಾರ ಸಂಘವು ಸ್ಥಾಪಿತವಾಗಿದೆ. ವಿರಾಜಪೇಟೆ ತಾಲೂಕಿನ ಮಲೆನಾಡಿನಲ್ಲಿ ಬೆತ್ತದಿಂದ ಪೀಠೋಪಕರಣ ತಯಾರು ಮಾಡುವವರ ಒಂದು ಸಹಕಾರ ಸಂಘವಿದೆ. ಪೊನ್ನಂಪೇಟೆಯ ಹತ್ತಿರದಲ್ಲಿ ಮಡಿಕೆ ಮಾಡುವ ಕೇಂದ್ರವಿದೆ. ಮಡಿಕೇರಿಯಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ತಯಾರಿಸುವ, ಹೊಳೆಯುವ ಉಕ್ಕಿನ ಪಾತ್ರೆಗಳನ್ನು ತಯಾರಿಸುವ ಕಾರ್ಖಾನೆಯೂ ಇದೆ. ಮತ್ತು ಕೂಡಿಗೆಯಲ್ಲಿ ಕಾಫಿ ಸಂಸ್ಕರಿಸುವ ಕಾರ್ಖಾನೆಯಿದೆ. ಮಡಿಕೇರಿಯಲ್ಲಿ ಒಂದು ಸರ್ಕಾರಿ ಮುದ್ರಣಾಲಯ ಮತ್ತು ವಾಹನಗಳ ದುರಸ್ತಿ ಮಾಡುವ ಕಾರ್ಯಾಗಾರವೂ (ವರ್ಕ್‌ಶಾಪ್) ಇದೆ.

1954ರಲ್ಲಿ ಸರ್ಕಾರವು ಮಾರ್ಕೆಟ್ ಎಂಬ ಸ್ಥಳದಲ್ಲಿ ಮರವನ್ನು ಕುಯ್ಯುವ ಕಾರ್ಖಾನೆಯನ್ನು ಸ್ಥಾಪಿಸಿತು. ಕೊಡಗು ಭತ್ತ ಬೆಳೆಯುವ ಮುಖ್ಯ ಕೇಂದ್ರವಾಗಿರುವುದರಿಂದ ಇಲ್ಲಿ ಅನೇಕ ಅಕ್ಕಿ ಗಿರಣಿಗಳಿವೆ. ಸೋಮವಾರಪೇಟೆ ಮತ್ತು ಕೂಡಿಗೆಯಲ್ಲಿ ವ್ಯವಸಾಯಕ್ಕೆ ಉಪಯೋಗವಾಗುವ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳೂ ಇವೆ.

ಕೊಡಗಿನಲ್ಲಿ ಎರವರು, ಕುಡಿಯರು, ತಾಪಾಳರು ಮುಂತಾದ ಗಿರಿಜನರೂ ಇದ್ದಾರೆ. ಕೊಡವರು ವಿಶಿಷ್ಟವಾದ ಜನಗಳು. ಕದಂಬ ವಂಶದ ಚಂದ್ರವರ್ಮ ಕೊಡವರ ಮೂಲ ಪುರುಷ ಎಂದು ಕೊಡವರು ಭಾವಿಸಿದ್ದಾರೆ.

ವೈವಿಧ್ಯಮಯ ಸಂಸ್ಕೃತಿ: ಕೊಡಗಿನ ಸಂಸ್ಕೃತಿ ವಿಶಿಷ್ಟವಾದದ್ದು. ಕತ್ತಿ ಹಾಗೂ ಕೋವಿಗಳು ಕೊಡಗರಿಗೆ ಬಲು ಪ್ರಿಯವಾದ ಆಯುಧಗಳು. ಹುತ್ತರಿಯ ಕುಣಿತ, ಬೋಳುಕಾಟ, ಕೋಲಾಟ ಮೊದಲಾದವುಗಳು ಕೊಡವರ ಜಾನಪದ ನೃತ್ಯಗಳು. ಈ ಆಟಗಳಲ್ಲಿ ವೀರರಸವೇ ಮುಖ್ಯವಾದುದು. ಹುತ್ತರಿ ಹಬ್ಬದ ಸಮಯದಲ್ಲಿ ಕೋಲಾಟ ಮುಖ್ಯವಾದದ್ದು. ಪರಿಯ ಕುಳಿ ಎಂಬುದು ಕೊಡವರ ಯುದ್ಧ ನೃತ್ಯ. ಬೊಳುಕಾಟ ದೇಶ–ವಿದೇಶದಲ್ಲಿ ಪ್ರಸಿದ್ಧಿ ಪಡೆದಿದೆ. ಕೈಲ್ ಪೊಳದ್, ಕಾವೇರಿ ಸಂಕ್ರಮಣ, ಹುತ್ತರಿ, ಶಿವರಾತ್ರಿ, ಯುಗಾದಿ, ಸುಬ್ಬರಾಯನ ಷಷ್ಠಿ ಮತ್ತು ವಿಷು ಸಂಕ್ರಮಣ ಕೊಡವರ ಮುಖ್ಯ ಹಬ್ಬಗಳು.

ಕೊಡಗರಿಗೆ ಅವರದೇ ಆದ ಭಾಷೆ ಇದೆ. ಅದೇ ಕೊಡವ ನುಡಿ. ಆದರೆ ಇದಕ್ಕೆ ಲಿಪಿಯಿಲ್ಲ. ಈ ಭಾಷೆ ಕನ್ನಡ, ತಮಿಳು ಹಾಗೂ ಮಲಯಾಳಂ ಶಬ್ದಗಳಿಂದ ಕೂಡಿದೆ. ಕೊಡವ ಭಾಷೆಯ ಸಾಹಿತಿಗಳು ಅಪ್ಪುರ ನೆರವಂಡ ಅಪ್ಪಚ್ಚ ಕವಿ, ನಡಿಕೇರಿಯಂಡ ಚಿಣ್ಣಪ್ಪ ಮುಂತಾದವರು.

ಉಡುಗೆ ವೈಶಿಷ್ಟ್ಯ: ಕೊಡಗಿನ ಉಡುಪೂ ವೈಶಿಷ್ಟ್ಯ ಪೂರ್ಣವಾದದ್ದು. ಕೊಡಗಿನಲ್ಲಿ ಗಂಡಸರು ಹಬ್ಬ ಮತ್ತು ವಿವಾಹದ ಸಮಯದಲ್ಲಿ ಜರಿಪೇಟ, ಕರಿಯ ಮೇಲಂಗಿ ಹಾಗೂ ಜರಿಯ ನಡುದಟ್ಟಿ ತೊಟ್ಟು ಬಲಗಡೆಗೆ ಬೆಳ್ಳಿಯ ಬರೆಯಲ್ಲಿ ಪೀಚು ಕತ್ತಿಯನ್ನು ಧರಿಸುತ್ತಾರೆ. ಕೊಡಗಿನ ಮಹಿಳೆಯರು ಸೆರಗನ್ನು ಹಿಂದಕ್ಕೆ ಬಿಟ್ಟು ತುಂಬು ತೋಳಿನ ರವಿಕೆ ತೊಡುವುದು ಕೊಡಗಿನ ಮುಖ್ಯ ಕ್ರಮ. ವಿಶೇಷ ದಿವಸಗಳಲ್ಲಿ ಕೊಡಗಿನ ಮಹಿಳೆಯರು ತಲೆಗೆ ಜರಿ ಹೊದಿಕೆ ಕಟ್ಟುತ್ತಾರೆ.

ಪ್ರೇಕ್ಷಣೀಯ ಸ್ಥಳಗಳು: ಮಡಿಕೇರಿಯು ಕೊಡಗಿನ ಜಿಲ್ಲಾ ಕೇಂದ್ರ. ಇಲ್ಲಿ ಹಿಂದಿನ ಅರಸರು ಕಟ್ಟಿಸಿದ ಅರಮನೆ ಹಾಗೂ ಕೋಟೆ ಇದೆ. ಅರಮನೆಯ ಕಟ್ಟಡದಲ್ಲಿ ಈಗ ಜಿಲ್ಲಾ ಕಚೇರಿಯಿದೆ. ಹಿಂದಿನ ರಾಜರು ಕುಳಿತುಕೊಂಡು ನಿಸರ್ಗವನ್ನು ವೀಕ್ಷಿಸುತ್ತಿದ್ದ ರಾಜಾಸೀಟ್ ಈಗಲೂ ಪ್ರಸಿದ್ಧವಾಗಿದೆ. ಲಿಂಗರಾಜ ಕಟ್ಟಿಸಿದ ಓಂಕಾರೇಶ್ವರ ದೇವಾಲಯ ಮತ್ತು ಕೊಡಗಿನ ಅರಸರ ಗದ್ದುಗೆಗಳು (ಸಮಾಧಿ) ಮುಂತಾದವು ಇತರ ಪ್ರೇಕ್ಷಣೀಯ ಸ್ಥಳಗಳಾಗಿವೆ. ಕೊಡಗಿನಲ್ಲಿ ದಾದಿಯರ ಶಿಕ್ಷಣ ಕೇಂದ್ರ, ಸಹಕಾರ ತರಬೇತಿ ಕೇಂದ್ರ, ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಪ್ರಥಮ ದರ್ಜೆ ಕಾಲೇಜು ಇದೆ. ತಲಕಾವೇರಿ, ಭಾಗಮಂಡಲ, ರಾಮಸ್ವಾಮಿ ಕಣಿವೆ, ಕೂಡಿಗೆ ಹಾಗೂ ನಾಲ್ಕು ನಾಡು, ಇಗ್ಗುತಪ್ಪ ದೇವಾಲಯ ಮತ್ತು ಚೆಟ್ಟಳ್ಳಿ ಪ್ರೇಕ್ಷಣೀಯ ಸ್ಥಳಗಳು. ಕೂಡಿಗೆಯಲ್ಲಿರುವ ವ್ಯವಸಾಯ ಸಂಶೋಧನಾ ಕ್ಷೇತ್ರ, ಮಾದರಿ ಕೃಷಿ ಕ್ಷೇತ್ರ, ಪಶು ಸಂಗೋಪನೆ ಮತ್ತು ಕ್ಷೀರೋತ್ಪನ್ನ ಕೇಂದ್ರಗಳೂ, ಕೋಳಿ ಸಾಕುವ ಕ್ಷೇತ್ರ, ಗ್ರಾಮ ತರಬೇತಿ ಕೇಂದ್ರ, ಕೈಗಾರಿಕಾ ತರಬೇತಿ ಹಾಗೂ ಪ್ರಥಮ ದರ್ಜೆ ಕಾಲೇಜು ಕೊಡಗಿನಲ್ಲಿದೆ.

ಭಾಷಾ ಪ್ರಭಾವ : ಕೊಡಗು ಭಾಷೆಯ ಕ್ಷೇತ್ರ ಮಲಯಾಳಂ, ಕನ್ನಡ ಹಾಗೂ ತುಳು ಭಾಷೆಗಳ ಸ್ಥಳದಲ್ಲಿರುವುದರಿಂದ ಈ ಮೂರೂ ಭಾಷೆಗಳ ಪ್ರಭಾವವನ್ನು ಕೊಡಗಿನ ಭಾಷೆಯಲ್ಲಿ ಕಾಣಬಹುದು ಎಂದು ಕಾಲ್ಡ್‌ವೆಲ್ ಎಂಬ ಭಾಷಾತಜ್ಞ ಅಭಿಪ್ರಾಯ ಪಟ್ಟಿದ್ದಾರೆ. ಮೋಗ್ಲಿಂಗ್ ಎಂಬ ಭಾಷಾತಜ್ಞನ ಪ್ರಕಾರ ಕನ್ನಡಕ್ಕಿಂತಲೂ, ಕೊಡಗು ಭಾಷೆಯು ತಮಿಳು ಹಾಗೂ ಮಲಯಾಳಂ ಭಾಷೆಗಳನ್ನೇ ಹೋಲುತ್ತದೆ ಎಂದು ಮೋಗ್ಲಿಂಗ್‌ನ ಅಭಿಪ್ರಾಯ.

ಕೊಡಗು ಭಾಷೆಯನ್ನು ಕೆಲವರು ಕೂರ್ಗಿ ಭಾಷೆ ಎಂದು ಕರೆಯುತ್ತಾರೆ. 1174ರ ಹುಣಸೂರು ಶಾಸನದಲ್ಲಿ ಕುಡ, ಕುಡಗು, ಕೊಡಗು, ಕೊಡಗರು, ಕೊಡವ, ಕೂರ್ಗಿ ಮುಂತಾದ ಪದಗಳು ಬೇರೆ ಬೇರೆ ಗ್ರಂಥಗಳಲ್ಲಿ ದೊರಕುತ್ತವೆ. ಕೊಡಗು ಭಾಷೆಯಲ್ಲಿ ಮೊಟ್ಟ ಮೊದಲಿಗೆ ವ್ಯಾಕರಣವನ್ನು ರಚಿಸಿದ ಕೀರ್ತಿ ಕೋಲ್ ಎಂಬ ವಿದ್ವಾಂಸರಿಗೆ ಸಲ್ಲುತ್ತದೆ. ಕೋಲ್ ಮಹಾಶಯ ತಾನು ಬರೆದ ವ್ಯಾಕರಣದಲ್ಲಿ ಮಲಯಾಳಂ, ತುಳು ಭಾಷೆಗಳ ಜೊತೆಗೆ ಹೋಲಿಕೆಯನ್ನು ಮಾಡುವ ಕೆಲಸವನ್ನು ಕಾಲ್ಡ್‌ವೆಲ್ ಮತ್ತು ಗ್ರೆಟರ್ ಎಂಬ ಪಂಡಿತರು ಪ್ರಯತ್ನಿಸಿದ್ದಾರೆ. ಇದರ ಬಗ್ಗೆ ಅಮೆರಿಕದ ಪ್ರಮುಖ ದ್ರಾವಿಡ ಭಾಷಾ ವಿಜ್ಞಾನಿ ಎಂ.ಬಿ ಎಮೆನೋ ಕೂಡ ಸಂಶೋಧನೆ ಮಾಡಿದ್ದಾನೆ.

ಕೊಡಗು ಭಾಷೆಯನ್ನು ಕನ್ನಡ ಭಾಷೆಯೊಡನೆ ಹೋಲಿಸಿ ನೋಡಿದಾಗ, ಎರಡಕ್ಕೂ ವಾಕ್ಯ ರಚನೆ ಮತ್ತು ವ್ಯಾಕರಣದಲ್ಲಿ ಹೆಚ್ಚಿನ ಹೋಲಿಕೆ ಕಾಣಿಸುತ್ತದೆ. ಈಗ ಕೊಡಗು ಭಾಷೆಯು ಸ್ವತಂತ್ರ ಭಾಷೆಯಾಗಿ ನಿಲ್ಲಬಲ್ಲ ಶಕ್ತಿಯನ್ನು ಪಡೆದುಕೊಂಡಿದೆ ಎಂದು ಭಾಷಾ ವಿಜ್ಞಾನಿಗಳು ಮನಗಂಡಿದ್ದಾರೆ.

ಕನ್ನಡ ಭಾಷೆಗಳ ಕೆಲವು ಪದಗಳಲ್ಲಿ ದ್ರಾವಿಡ ಪದಗಳು, ಕ ಎಂಬ ಅಕ್ಷರವು ಪ ಕಾರವಾಗಿಯೂ ಮತ್ತು ಹ ಕಾರವು ಚ ಕಾರವಾಗಿಯೂ ಪರಿವರ್ತನೆಗೊಂಡಿಲ್ಲ.

ಕನ್ನಡದ ಸಾಮೀಪ್ಯ ಪದಗಳು: ಕೊಡು ಭಾಷೆಯಲ್ಲಿ ಲಿಂಗ, ವಚನ, ವಿಭಕ್ತಿ ಪ್ರತ್ಯಯಗಳು, ನಾಮಪದ, ಸಂಖ್ಯಾವಾಚಕ ಗುಣವಾಚಕ ಹಾಗೂ ಕ್ರಿಯಾ ಪದಗಳು ತಮಿಳು, ಮಲಯಾಳಂ, ಕನ್ನಡ ಮತ್ತು ತುಳುವನ್ನೇ ಹೋಲುತ್ತದೆ ಎಂದು ಭಾಷಾತಜ್ಞರು ಪದೇ ಪದೇ ಹೇಳುತ್ತಿದ್ದಾರೆ. ಕನ್ನಡಕ್ಕೆ ಸಂಬಂಧಿಸಿದಂತೆ ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಕೊಟ್ಟಿದೆ.

ಕನ್ನಡ ಭಾಷೆ	ಕೊಡಗು ಭಾಷೆ
ಹೂವು	ಪೂವ್
ಹಾಲು	ಪಾಲ್
ಹುಳು	ಪುಳು
ಹಂದಿ	ಪಂದಿ
ಕೆಲವು ಸರ್ವನಾಮಗಳು:	
ನಾನು	ನಾನ್
ನಾವು	ನಾಂಗ ಅಥವಾ ನಂಗ
ನೀನು	ನೀನ್
ನೀವು	ನೀಂಗ ಅಥವಾ ನಿಂಗ
ಅದು	ಅದ್
ಕೆಲವು ಸಂಖ್ಯಾವಾಚಕಗಳು:	
ಒಂದು	ಒಂದ್
ಎರಡು	ದಂಡ್
ಮೂರು	ಮೂಂಡ್
ನಾಲ್ಕು	ನಾಲ್
ಐದು	ಅಂಜಿ
ಆರು	ಆರ್
ಏಳು	ಏಳ್
ಹತ್ತು	ಪತ್

ಎಂಬುದಾಗಿ ಕೊಡಗು ಭಾಷೆಯಲ್ಲಿ ಪರಿವರ್ತನೆಗೊಂಡಿರುವುದು ಕಂಡುಬರುತ್ತದೆ.

ಕೊಡಗು ಪತ್ರಿಕೆ: ಈಗ ಕೊಡಗಿನಲ್ಲಿ ಪ್ರಾರಂಭವಾದ ಪತ್ರಿಕೆಯು 1.6.1921 ರಲ್ಲಿ ಮಡಿಕೇರಿಯಲ್ಲಿ ಪ್ರಕಟವಾಯಿತು. ಈ ಪತ್ರಿಕೆಯು ಮುದ್ರಣವಾಗುತ್ತಿದ್ದುದು ಮೈಸೂರಿನಲ್ಲಿ. ಈ ಪತ್ರಿಕೆಯ ಮೊದಲ ಸಂಪಾದಕರು ಪದ್ಯಂಡ ಬೆಳ್ಳಪ್ಪ. ನಂತರ ಮೂರು ವರ್ಷಗಳ ಕಾಲ ಈ ಪತ್ರಿಕೆಯು ಮಡಿಕೇರಿಯಲ್ಲಿ ಅವರ ಮುದ್ರಾಲಯದಲ್ಲಿ ಪ್ರಾರಂಭವಾಗಿ, ಪತ್ರಿಕೆಯು ಮಡಿಕೇರಿಯಿಂದಲೇ ಪ್ರಕಟವಾಗುತ್ತಿದ್ದಿತು. 1971ರಲ್ಲಿ ಈ ಪತ್ರಿಕೆಗೆ ಐವತ್ತು ವರ್ಷಗಳು ತುಂಬಿದವು.

ತನ್ನ ಜೀವನದ ದೀರ್ಘ ಅವಧಿಯಲ್ಲಿ ಈ ಪತ್ರಿಕೆಯು ಹಲವು ಎಡರು ತೊಡರುಗಳನ್ನು ಕಂಡಿದೆ. ಅಚ್ಚ ರಾಷ್ಟ್ರೀಯತಾವಾದಿಯಾದ ಈ ಪತ್ರಿಕೆಯು ಬ್ರಿಟಿಷರ ಆಡಳಿತದ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ಸುಗ್ರೀವಾಜ್ಞೆಗಳನ್ನು ಎದುರಿಸಬೇಕಾಯಿತು. ಈ ಪತ್ರಿಕೆಯ ಮೇಲೆ ದಂಡ ವಿಧಿಸಿದ್ದು ಎರಡು ಸಾರಿ, ಸಂಪಾದಕರಾದ ಬೆಳ್ಳಿಯಪ್ಪ ಮತ್ತು ಅವರ ನಂತರ ಸಂಪಾದಕರಾದ ಬಿ.ಡಿ. ಗಣಪತಿಯವರನ್ನು 1942 ರಲ್ಲಿ ಸರ್ಕಾರವು ದಸ್ತಗಿರಿ ಮಾಡಿ ಪತ್ರಿಕಾಲಯವನ್ನು ಮುಟ್ಟುಗೋಲು ಹಾಕಿಕೊಂಡಿತು. ಆದರೂ ಪತ್ರಿಕೆಯು ನಿಲ್ಲಲಿಲ್ಲ. ಸ್ವಾತಂತ್ರ್ಯ ನಂತರವೂ ತನ್ನ ಸತ್ಯನಿಷ್ಠೆಯ ಕಾರಣದಿಂದಾಗಿ ಅನೇಕ ಎಡರು ತೊಡರುಗಳ ದಾರಿಯಲ್ಲೇ ಮುನ್ನಡೆದಿದ್ದಿತು. ಈ ಪತ್ರಿಕೆಯು ಕನ್ನಡದ ಸ್ಥಾನಮಾನಗಳಿಗಾಗಿಯೂ ಹಾಗೂ ಅದರ ಪ್ರಚಾರಕ್ಕಾಗಿ ಬಹಳ ಸಹಾಯ ಮಾಡಿದೆ. 1921 ರಿಂದ ಇದುವರೆಗಿನ ಅದರ ಸಂಚಿಕೆಗಳನ್ನು ಪರಿಶೀಲಿಸಿದಾಗ, ಕೊಡಗಿನಲ್ಲಿ ಕನ್ನಡ ಭಾಷೆಯ ಬೆಳವಣಿಯು ಯಾವ ರೀತಿಯ ಆಗಿದೆ ಎಂಬುದರ ಸ್ಪಷ್ಟ ಚಿತ್ರ ಸಿಗುತ್ತದೆ. ಈ ಪತ್ರಿಕೆಯು ತರುಣ ಬರಹಗಾರರಿಗೆ ಪ್ರೋತ್ಸಾಹ ನೀಡಿತ್ತು ಹಾಗೂ ಅನೇಕ ಲೇಖಕರನ್ನು ಗುರುತಿಸಿದೆ. ಪತ್ರಿಕೆ ಈಗಿನ ಸಂಪಾದಕರು ಬಿ.ಡಿ. ಗಣಪತಿಯವರು.

ಹಬ್ಬಗಳ ವಿಶೇಷ: ಕೊಡಗರಿಗೆ ಹುತ್ತರಿ ಹಬ್ಬ ಮುಖ್ಯವಾದುದು. ಹುತ್ತರಿ ಹಬ್ಬದ ಸಂದರ್ಭದಲ್ಲಿ ನಡೆಯುವುದು ಕೊಡಗಿನ ಒಂದು ಜನಪದ ನೃತ್ಯ. ಈ ಹಬ್ಬ ದೇವಸ್ಥಾನದ ಬಯಲಿನಲ್ಲಿ ಒಂದು ವಾರದವರೆಗೆ ನಡೆಯುತ್ತದೆ. ಹುತ್ತರಿ ಹಬ್ಬಕ್ಕೆ ಐದು ದಿನಗಳ ಮುಂಚೆ ಗ್ರಾಮದ ಯುವಕರು ಮತ್ತು ಹಿರಿಯರು ಗ್ರಾಮದಲ್ಲಿ ಸೇರಿ ಕೋಲಾಟವನ್ನು ಅಭ್ಯಾಸ ಮಾಡುತ್ತಾರೆ. ಇದಕ್ಕೆ ಈದ್ ಎಂದು ಹೆಸರು. ಇವರ ಜೊತೆ ದುಡಿ ನುಡಿಸುವ ವಾದ್ಯಗಾರರೂ ಇರುತ್ತಾರೆ. ಈ ಕೋಲಾಟವನ್ನು ನೋಡಲು ಬಹಳ ಜನರು ಬರುತ್ತಾರೆ. ಮಂದಿರವನ್ನು ತಲುಪಿದಾಗ ಈ ಕೋಲಾಟವನ್ನು ನೋಡಲು ಬಹಳ ಚಂದ.

ಬಾಳ್ ಬಾಳೆನ್ನಡ ಜಬ್ಬಾಮಿ ಬಾಳೋ।
ಜಬ್ಬಾಮಿ ಮೀದಲೆ ಪೂಮಂದ್ ಬಾಳೋ॥
ದೇವಂಗೊತ್ತಾಚಾರ ಪಾಡಿಚೋ ನಂಗ ।
ಆಚಾರಪಾಡಿತ್ ಪಾಟ್‌ಬೆಕ್ಕನ ಎಂಗ॥
ಕನ್ನಡದಲ್ಲಿ ಈ ಪದ್ಯದ ಅರ್ಥವನ್ನು ಹಿಂಗೆ ಹೇಳಬಹುದು.
ಜೀವನ ಮಾಡು ಒಳ್ಳೆಯ ಭೂಮಿಯ ಮೇಲೆ
ಒಳ್ಳೆಯ ಭೂಮಿಯ ಮೇಲೆ ಚೆನ್ನಾಗಿ ಬಾಳು
ಒಳ್ಳೆಯ ಭೂಮಿಯ ಮೇಲೆ ದೇವಮ್ಮ ನೀನು ಬಾಳು
ದೇವರಿಗೆ ಒಪ್ಪುವಂತಹ ಆಚಾರ
ವಿಚಾರವನ್ನು ಹಾಡಿದೆವು ನಾವು.

ಆಚಾರವನ್ನು ಹಾಡಿ ಪಾಡಿ ಹೇಳುವೆವು ನಾವು । ಎಂದು ಹಾಡಿ ವಾದ್ಯಗಾರರು ಹಾಡನ್ನು ನಿಲ್ಲಿಸುತ್ತಾರೆ. ಅನಂತರ ಅನೇಕ ರೀತಿಯ ಕೋಲಾಟ ಪ್ರದರ್ಶಿತವಾಗುತ್ತದೆ ಮತ್ತು ಬೊಳ್‌ಕಾಟ ಹಾಗೂ ಪಡಕಳಿ ಮುಂತಾದ ನೃತ್ಯಗಳೂ ನಡೆಯುತ್ತವೆ. ಹಾಡುಗಳ ಜೊತೆಗೆ ನೃತ್ಯದ ಹೆಜ್ಜೆಗಳನ್ನೂ ಜೊತೆ ಜೊತೆಯಾಗಿಡುವಂತೆ ಮಾಡುತ್ತಾರೆ. ಹುತ್ತರಿ ಕೋಲಾಟದ ಹಾಡುಗಳು ಪೊಯಿಲೇ–ಪೊಯಿಲೇ ಎಂದು ಆರಂಭವಾಗುತ್ತವೆ. ಈ ಹಾಡುಗಳಲ್ಲಿ ದೇವರ ಆಶೀರ್ವಾದವನ್ನು ಬೇಡುತ್ತಾರೆ ಹಾಗೂ ಸಲಹೆಗಳನ್ನು ನೀಡುವ ಸರಸ ಮತ್ತು ಹಾಸ್ಯ ಪ್ರಸಂಗಗಳೂ ಇರುತ್ತವೆ.

ಹುತ್ತರಿ ಹಬ್ಬದ ಸಂಜೆ ಅಥವಾ ಕೋಲಾಟ ನಡೆಯುವಷ್ಟು ದಿನಗಳು, ಪ್ರತಿರಾತ್ರಿಯೂ ಗ್ರಾಮದವರ ಮನೆಗೆ ಹೋಗಿ, ಮನೆಯವರನ್ನು ಹೊಗಳಿದ ನಂತರ, ಮನೆಯವರಿಂದ ಕಾಣಿಕೆಯನ್ನು ಪಡೆಯುತ್ತಾರೆ.

ಒಂದು ಮನೆಯ ಹಾಡು ಹೀಗಿದೆ:

ನಂದಾಟ್ ಈ ಮನೆ ಮಂದಿ ಮಹಾದೇವ
ಪತ್ತಾಯ ಚಿತ್ತಾರಿ ತೊನೆಯತಿರದೋ
ತೊಟ್ಟಿಲ್ ಪಾಕು ಇತಪ್ಪತಿರಡೊ
ಕೊಟ್ಟಿಲ್ ಕರಪತ್ರ ತಿಪ್ಪತಿರಡೊ
ಪೊಟ್ಟಿಲ್ ಬೀರಾಳಿ ನೀಂಗತಿರಡೊ
ಬೆಪ್ಪಲ್ ಪೊಂಬಣನಂಗತಿರಡೊ

ಈ ಪದ್ಯವನ್ನು ಅರ್ಥವನ್ನು ಕನ್ನಡದಲ್ಲಿ ಹೀಗೆ ಸಂಗ್ರಹಿಸಬಹುದು.

ಈ ಮನೆಯವರಿಗೆ ಮಂಗಳವನ್ನುಂಟು
ಮಾಡು ಮಹದೇವ
ಈ ಮನೆಯ ಎಲ್ಲ ದಿಕ್ಕುಗಳಲ್ಲಿಯೂ
ಅಭಿವೃದ್ಧಿ ಹೊಂದಲಿ
ಇದರ ಉಗ್ರಾಣದಲ್ಲಿ ಸಣ್ಣ
ಅಕ್ಕಿ ತುಂಬಿ ತುಳುಕಾಡುತ್ತಿರಲಿ
ಕೊಟ್ಟಿಗೆಯಲ್ಲಿ ಹಾಲು ಕರೆಯುವ ಹಸುವಿರಲಿ.

ಈ ಹಾಡಿಗಾಗಿ ಕೊಡವರನ್ನು ಎಲ್ಲರೂ ಅಭಿನಂದಿಸಲೇಬೇಕು.

ಈ ಲೇಖನವನ್ನು ಬರೆಯಲು ಪ್ರಸಕ್ತ ಲೇಖಕನು ಕನ್ನಡ ವಿಶ್ವಕೋಶ ಸಂಪುಟ ಐದು ಹಾಗೂ ಸಂಪುಟ 14ನ್ನು ಉಪಯೋಗಿಸಿದ್ದಾರೆ.ಈ ಇಬ್ಬರು ಸಂಪಾದಕರಿಗೆ ಲೇಖಕನು ಕೃತಜ್ಞನಾಗಿದ್ದಾನೆ.

(ದಯಮಾಡಿ ತಲಕಾವೇರಿಯ ಉಗಮಸ್ಥಾನ, ಕೊಡವರ ಸಾಂಪ್ರದಾಯಿಕ ಉಡುಪುಗಳು ಮತ್ತು ಕೊಡವರ ನೃತ್ಯದ ಚಿತ್ರಗಳನ್ನು ಅಳವಡಿಸಿರಿ ಮತ್ತು ಕಾರ್ಯಪ್ಪ ಮತ್ತು ತಿಮ್ಮಯ್ಯನವರ ಚಿತ್ರಗಳನ್ನು ಅಳವಡಿಸಿ. ಕೊಡಗು ಇಬ್ಬರು ಜನರಲ್‌ಗಳಿಗೆ ಜನ್ಮವನ್ನು ನೀಡಿದೆ. ಅವರೇ ಕಾರ್ಯಪ್ಪನವರು ಹಾಗೂ ಜನರಲ್ ತಿಮ್ಮಯ್ಯನವರು.)

ಕರ್ನಾಟಕದ ಅಭಿವೃದ್ಧಿಗೆ ನೀಲನಕ್ಷೆ ಹಾಕಿದವರು ಕೆಂಗಲ್ ಹನುಮಂತಯ್ಯನವರು

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಮರಣೆ
● ಅವರ ದೂರದೃಷ್ಟಿಯ ಫಲವೇ ಶಕ್ತಿ ಕೇಂದ್ರ ವಿಧಾನಸೌಧ



ಬೆಂಗಳೂರು, ಡಿ.1(ಕೆಎಂಶಿ)–ಕೆಂಗಲ್ ಹನುಮಂತಯ್ಯನವರು ಕರ್ನಾಟಕದ ಅಭಿವೃದ್ಧಿಗೆ ನೀಲನಕ್ಷೆ ಹಾಕಿದವರು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಪುಣ್ಯತಿಥಿಯ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು. ವಿಧಾನಸೌಧದ ನಿರ್ಮಾತೃ, ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಕೆಂಗಲ್ ಹನುಮಂತಯ್ಯ ಅವರ ಪುಣ್ಯತಿಥಿಯ ಅಂಗವಾಗಿ ಅವರನ್ನು ಇಂದು ಸ್ಮರಿಸಿದ್ದೇವೆ. ಅವರ ಕಾರ್ಯಕ್ರಮಗಳು, ಬಿಟ್ಟು ಹೋಗಿರುವ ತತ್ವ ಆದರ್ಶಗಳನ್ನು ಸ್ಮರಿಸುವ ದಿನವಾಗಿದೆ.

ಕೆಂಗಲ್ ಹನುಮಂತಯ್ಯ ಅವರು ಮೈಸೂರು ಪ್ರಾಂತ್ಯದ ಅತ್ಯಂತ ಹಿರಿಯ, ಪ್ರಮುಖ ನಾಯಕರಾಗಿದ್ದರು. ಕರ್ನಾಟಕದ ಏಕೀಕರಣದಲ್ಲಿ ಮಹತ್ತರ ಪಾತ್ರವನ್ನು ವಹಿಸಿ ಅವರು ಇಡೀ ಕನ್ನಡ ನಾಡಿನ ಬಗ್ಗೆ ಅಪ್ರತಿಮ ಪ್ರೀತಿ, ಕನ್ನಡಿಗರು ಒಂದಾಗಬೇಕೆಂಬ ಹೆಬ್ಬಯಕೆ ಇತ್ತು. ಮೈಸೂರು ಒಡೆಯರ ರಾಜಮನೆತನದ ಪ್ರಭಾವ ಅವರ ಮೇಲಿತ್ತು. ಅಭಿವೃದ್ಧಿಯನ್ನು ರಾಜಕಾರಣದ ಮೂಲ ಮಂತ್ರವಾಗಬೇಕು ಎಂದು ನಾಡಿನ ಅಭಿವೃದ್ಧಿಯ ಬಗ್ಗೆ ಸದಾ ಚಿಂತನೆ ಮಾಡಿದವರು ಅವರು. ಅಂದಿನ ಮೈಸೂರು ರಾಜ್ಯವಾದ ತಕ್ಷಣ ಬೆಂಗಳೂರು ಅದರ ಶಕ್ತಿ ಕೇಂದ್ರವಾಗಬೇಕೆಂದು ಯೋಚಿಸಿ, ಕರ್ನಾಟಕದ ಶಕ್ತಿ ಸೌಧ ವಿಧಾನಸೌಧ ನಿರ್ಮಿಸಿದರು. ಅವರ ದೂರದೃಷ್ಟಿಯಿಂದ ಭವ್ಯವಾದ ವಿಧಾನಸೌಧ ನಮಗೆ ಕೊಟ್ಟಿದ್ದಾರೆ.

ಇಡೀ ಭಾರತ ದೇಶದಲ್ಲಿ ವಿಧಾನಮಂಡಲಗಳ ಕಟ್ಟಡ ಯಾವುದೇ ರಾಜ್ಯದಲ್ಲಿ ಇಲ್ಲ. ಇದರಲ್ಲಿ ಕುಳಿತು ಅವರು ಆಡಳಿತ ಮಾಡಲು ಸಾಧ್ಯವಾಗಲಿಲ್ಲ. ಆದರೆ ಜನಸಾಮಾನ್ಯರಲ್ಲಿ, ತಮ್ಮದೇ ಆದ ಶಾಶ್ವತ ಸ್ಥಾನ ಗಳಿಸಿದ್ದಾರೆ. ಕೇಂದ್ರ ರೈಲ್ವೆ ಸಚಿವರಾಗಿ ರಾಜ್ಯದಲ್ಲಿ ಡಬಲ್ ಲೈನ್ ರೈಲ್ವೆ ಆಗಬೇಕೆಂದು ಪ್ರಥಮ ಬಾರಿಗೆ ಚಿಂತನೆ ಮಾಡಿದವರು ಹನುಮಂತಯ್ಯ ಅವರು. ಅವರು ಹಾಕಿದ ಬುನಾದಿಯಿಂದ ಕರ್ನಾಟಕದಲ್ಲಿ ಪ್ರಗತಿ ಕಾಣಲು ಸಾಧ್ಯವಾಯಿತು. ಆಡಳಿತದ ಬಗ್ಗೆ ಬಹಳಷ್ಟು ವಿಚಾರಗಳನ್ನೊಳಗೊಂಡಿತ್ತು. ಆಡಳಿತ ಸುಧಾರಣೆಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಸ್ವಾತಂತ್ರ್ಯ ನಂತರ ಅವರನ್ನು ಸದಾ ಸ್ಮರಣೆ ಮಾಡಿ, ಅವರು ಹಾಕಿಕೊಟ್ಟ ಹಾದಿಯಲ್ಲಿ ನಡೆಯಬೇಕು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಕೈಯಲ್ಲಿ 'ಮಿತ್ರ'



ಕಳೆದ ಸೋಮವಾರ ಕೆ.ಆರ್.ಪೇಟೆಯಲ್ಲಿ ನಡೆದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ನಂತರ ಮಾಜಿ ಕೇಂದ್ರ ಸಚಿವ ರೆಹಮಾನ್ ಖಾನ್ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ಈ ವೇಳೆ ಅಲ್ಲಿದ್ದಂತಹ 'ಮೈಸೂರು ಮಿತ್ರ'ನನ್ನು ಕೈಗೆತ್ತಿಕೊಂಡು ಸುದೀರ್ಘ ಸಮಯ ಓದಿದರು.

ಕಲಾಮಂದಿರದಲ್ಲಿ 'ಟಿಪ್ಪು ನಿಜಕನಸುಗಳು' ಹೌಸ್‌ಫುಲ್

7ನೇ ಪ್ರದರ್ಶನಕ್ಕೆ 1200ಕ್ಕೂ ಅಧಿಕ ಜನ: ಆಸನಗಳು ಭರ್ತಿ: ನೆಲದ ಮೇಲೆ ಕುಳಿತೂ ನಾಟಕ ನೋಡಿದರು





ಡಿ.1ರ ಟಿಪ್ಪು ನಿಜಕನಸುಗಳು ನಾಟಕ ಪ್ರದರ್ಶನಕ್ಕೆ ಕಲಾಮಂದಿರ ಕಿಕ್ಕಿರಿದು ರಂಗಕರ್ಮಿಗಳಿಂದ ತುಂಬಿತ್ತು.

ಮೈಸೂರು,ಡಿ.1(ಎಂಕೆ)–ಇತಿಹಾಸ ತಿಳಿಯುವ ಹಂಬಲ... ಸತ್ಯ ಅರಿಯುವ ಕುತೂಹಲ... ಹೊಸ ಪ್ರಯತ್ನವನ್ನು ಕಣ್ತುಂಬಿಕೊಳ್ಳುವ ಕಾತುರ...!

ಕಲಾಮಂದಿರದಲ್ಲಿ 7ನೇ ಪ್ರದರ್ಶನ ಕಂಡ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕ ವೀಕ್ಷಣೆಗೆ ದೌಡಾಯಿಸಿ ಬಂದ ರಂಗ ಪ್ರೇಕ್ಷಕರಾಡಿದ ಮಾತುಗಳಿವು. 1200ಕ್ಕೂ ಹೆಚ್ಚು ಜನರ ಸಮೂಹದ ನಡುವೆ ಪ್ರದರ್ಶನಗೊಂಡ 'ಟಿಪ್ಪು ನಿಜಕನಸುಗಳು' ನಾಟಕ ಅಪಾರ ಜನಮನ್ನಣೆ ಗಳಿಸಿದ್ದು, ಜನಸಮೂಹವನ್ನು ತನ್ನತ್ತ ಸೆಳೆಯುತ್ತಿದೆ.

ಮೈಸೂರಿನ ವಿವಿಧೆಡೆ, ಕೊಡಗು, ಹುಣಸೂರು ಸೇರಿದಂತೆ ಜಿಲ್ಲೆಯ ಸುತ್ತಮುತ್ತಲಿನಿಂದ ನಾಟಕ ವೀಕ್ಷಣೆಗೆ ಆಗಮಿಸುತ್ತಿರುವ ರಂಗಭೂಮಿ ಅಭಿಮಾನಿಗಳು 'ಟಿಪ್ಪು ನಿಜಕನಸುಗಳ' ನಾಟಕ ನೋಡುವ ಕುತೂಹಲಕ್ಕೆ ಕಾರಣವನ್ನು 'ಮೈಸೂರು ಮಿತ್ರ'ನಲ್ಲಿ ಹಂಚಿಕೊಂಡಿದ್ದಾರೆ.

ಕೊಡವ ದಂಪತಿಗಳಾದ ಕುಟ್ಟಪ್ಪ ಮತ್ತು ಕಾವ್ಯ ಕುಟ್ಟಪ್ಪ ಮಾತನಾಡಿ, ಮೊದಲಿನಿಂದಲೂ ಅಡ್ಡಂಡ ಸಿ.ಕಾರ್ಯಪ್ಪ ನಿರ್ದೇಶನದ ನಾಟಕಗಳನ್ನು ಇಷ್ಟಪಟ್ಟು ನೋಡುತ್ತಿದ್ದೆವು. ಟಿಪ್ಪುವಿನಿಂದ ನಮ್ಮ ಕುಟುಂಬದ 200 ಮಂದಿ ಬಲಿಯಾಗಿದ್ದಾರೆ. 22 ಮಕ್ಕಳ ಮಾರಣಹೋಮ ಮಾಡಲಾಗಿತ್ತು. ಇಂದು ಆ ಮಕ್ಕಳ ಸ್ಮರಣಾರ್ಥ ಕಲ್ಲುಗಳನ್ನು ನೆಟ್ಟು ಪೂಜಿಸುತ್ತಿದ್ದೇವೆ. ಟಿಪ್ಪು ಆಡಳಿತದ ಸತ್ಯಾಂಶವನ್ನು ತಿಳಿಸುವ ಈ ನಾಟಕ ಪ್ರದರ್ಶನ ಮಾಡುತ್ತಿರುವುದು ಒಳ್ಳೆಯ ಸಂಗತಿಯಾಗಿದೆ ಎಂದು ತಿಳಿಸಿದರು.

ನಾಟಕದ ಬಗ್ಗೆ ತುಂಬಾ ಕೇಳಿದ್ದೇವೆ. ನಾಟಕ ನೋಡಿದ ಸಾಕಷ್ಟು ಜನರು ನೀವು ಒಮ್ಮೆ ನೋಡಿ ಎನ್ನುತ್ತಿದ್ದರು. ಆದ್ದರಿಂದ ಕುತೂಹಲ ಹೆಚ್ಚಾಗಿ ನಾಟಕ ನೋಡಲು ಬಂದಿದ್ದೇವೆ ಎಂದು ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿ ಮೈನಾ ಮತ್ತು ಅವರ ಸ್ನೇಹಿತೆ ಚಂದ್ರಿಕಾ ಹೇಳಿದರೆ, ಟಿಪ್ಪು ಸುಲ್ತಾನ್ ಬಗ್ಗೆ ಪುಸ್ತಕಗಳಲ್ಲಿ ಓದಿದ್ದೇವೆ. ಆದರೆ ನಾಟಕದಲ್ಲಿ ಏನಿದೆ ಎಂಬುದನ್ನು ಅರಿಯಲು ಬಂದಿದ್ದೇವೆ. ಸತ್ಯಾಂಶ ತಿಳಿದರೆ ನಾವು ಜಾಗೃತರಾಗಬಹುದು ಎಂದು ಮೈಸೂರಿನ ರಾಧ, 86 ವರ್ಷದ ಅನುಸೂಯಮ್ಮ ತಿಳಿಸಿದರು.

ನಿಜಾಂಶ ತಿಳಿಯಬೇಕು. ಪುಸ್ತಕದಲ್ಲಿ ಓದಿದ್ದೇವೆ. ಆದರೆ ನಾಟಕದಲ್ಲಿ ಇರುವ ಸಂಗತಿಯೇ ಬೇರೆ ಎನ್ನಲಾಗಿದೆ. ಆದ್ದರಿಂದ 'ಟಿಪ್ಪು ನಿಜಕನಸುಗಳು' ನಾಟಕ ನೋಡಲು ಕುಟುಂಬ ಸಮೇತ ಹುಣಸೂರಿನಿಂದ ಬಂದಿದ್ದೇವೆ ಎಂದು ಅರುಣ್ ಚೌಹಾಣ್ ತಿಳಿಸಿದರೆ, ರಂಗಾಯಣದಲ್ಲಿ ನಾಟಕ ನೋಡಬೇಕು ಎಂದು ವೆಬ್‌ಸೈಟ್ ಚೆಕ್ ಮಾಡುತ್ತಿದ್ದೆವು. ಸ್ನೇಹಿತರು ಹೇಳಿದ್ದರಿಂದ ಆನ್‌ಲೈನ್ ಮೂಲಕವೇ ಟಿಕೆಟ್ ಖರೀದಿಸಿ ಬಂದಿದ್ದೇವೆ ಎಂದು ವಿದ್ಯಾರ್ಥಿಗಳಾದ ಬಿಂದು, ಅಮೃತ ಹೇಳಿದರು.

ಇತಿಹಾಸ ಗೊತ್ತಾಗಬೇಕಲ್ಲವೇ: 30 ವರ್ಷ ಅಮೇರಿಕಾದಲ್ಲಿದ್ದು, ಸದ್ಯ ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ನೆಲೆಸಿರುವ ಪದ್ಮಜ ಹಾಗೂ ವೆಂಕಟೇಶ್ ಪ್ರತಿಕ್ರಿಯಿಸಿ, ನಮ್ಮ ಸ್ನೇಹಿತರು ಈಗಾಗಲೇ ಈ ನಾಟಕ ನೋಡಿ ನೀವು ಒಮ್ಮೆ ನಾಟಕ ನೋಡಿಬನ್ನಿ ಎನ್ನುತ್ತಿದ್ದರು. ಅವರ ಮಾತು ಕೇಳಿದ ನಂತರ ಯೂಟ್ಯೂಬ್‌ನಲ್ಲಿ ಚೆಕ್ ಮಾಡಿದಾಗ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರ ನಾಟಕ ಕುರಿತ ವಿಡಿಯೋ ನೋಡಿ, ನಾಟಕ ನೋಡಲು ನಿರ್ಧರಿಸಿದೆವು. ಟಿಪ್ಪು ಕುರಿತ ಇತಿಹಾಸ ತಿಳಿಯುವುದಕ್ಕೆ ಕಾತುರರಾಗಿದ್ದೇವೆ ಎಂದು ಹೇಳಿದರು.

ಸತ್ಯಾಂಶ ಅರಿಯುವುದು ಮುಖ್ಯ: ಟಿಪ್ಪು ಇತಿಹಾಸ ಕುರಿತು ನಾಟಕ ನಿರ್ಮಿಸಿರುವುದು ಖುಷಿಯ ವಿಚಾರವಾಗಿದೆ. ಸತ್ಯಾಂಶ ಅರಿಯುವುದು ಮುಖ್ಯ. ಟಿಪ್ಪು ಕೆಟ್ಟವನೇ ಆಗಿದ್ದರೆ ಮೈಸೂರು, ಶ್ರೀರಂಗಪಟ್ಟಣದಲ್ಲಿ ಬೇರೆ ಜಾತಿಯವರು ಉಳಿಯುತ್ತಿದ್ದರೆ? ಎಂದ ನಿವೃತ್ತ ಪ್ರಾಧ್ಯಾಪಕ ಚಂದ್ರಶೇಖರೇಗೌಡ, ಕೇರಳ ಹಾಗೂ ಕೊಡಗಿನಲ್ಲಿ ಟಿಪ್ಪು ದಾಳಿ ಮಾಡಿರುವುದು ನಿಜ. ಟಿಪ್ಪುವಿನ ಕುರಿತಾದ ಸತ್ಯ ಇತಿಹಾಸ ತಿಳಿದು ಟೀಕೆ ಮಾಡುವುದು ಒಳ್ಳೆಯದು. ಪಾಳೇಗಾರರು, ಸುಲ್ತಾನರು ರಕ್ಷಣೆ ಮಾಡುತ್ತಿದ್ದರೆ ಹೊರತು ಅವರಿಗೆ ಸಾಮಾಜಿಕ ಜ್ಞಾನದ ಕೊರತೆಯಿತ್ತು ಎಂಬುದನ್ನು ಇಂತಹ ನಾಟಕಗಳ ಮೂಲಕ ತಿಳಿಯಬಹುದಾಗಿದೆ ಎಂದರು.

ನೆಲದಲ್ಲೇ ಕುಳಿತರು: ಕಿಕ್ಕಿರಿದು ತುಂಬಿದ ಕಲಾಮಂದಿರದಲ್ಲಿ ಕುಳಿತುಕೊಳ್ಳಲು ಆಸನವಿಲ್ಲದೆ ಸಾಕಷ್ಟು ಮಂದಿ ನೆಲದಲ್ಲೇ ಕುಳಿತು ನಾಟಕ ವೀಕ್ಷಿಸಿದರು. ಸಣ್ಣ ವಯಸ್ಸಿನ ವಿದ್ಯಾರ್ಥಿಗಳಿಂದ ಹಿಡಿದು 90 ವರ್ಷದ ಹಿರಿಯರು ನಾಟಕ ನೋಡಿದರು. ಎಂದಿನಂತೆ ಭದ್ರತೆ ನೀಡಿದ್ದ ಪೊಲೀಸರು, ಎಲ್ಲರನ್ನು ತಪಾಸಣೆಗೊಳಪಡಿಸಿ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟರು.

ಇದು ರಂಗಭೂಮಿಯ ಗೆಲುವು...

"ನಿರೀಕ್ಷೆಗೂ ಮೀರಿ ಜನರು ನಾಟಕ ನೋಡಲು ಬರುತ್ತಿದ್ದಾರೆ. ಟಿಕೆಟ್ ಸಿಗದೆ ವಾಪಸ್ ತೆರಳುವವರಿಗೆ ಮುಂದಿನ ಪ್ರದರ್ಶನಕ್ಕೆ ಬನ್ನಿ ಎನ್ನುವುದೇ ನನ್ನ ಕಾಯಕವಾಗಿದೆ. ನನ್ನ ಜೀವಿತಾವಧಿಯಲ್ಲಿ ಇಂತಹದೊಂದು ದೃಶ್ಯ ಕಂಡಿಲ್ಲ. ಇದು ರಂಗಭೂಮಿಯ ಗೆಲುವು. 7ನೇ ಪ್ರದರ್ಶನ ನೋಡಲು 1200ಕ್ಕೂ ಹೆಚ್ಚು ಮಂದಿ ಬಂದಿದ್ದಾರೆ. ರಂಗಾಯಣದಲ್ಲಿಯೇ ಇದೊಂದು ದಾಖಲೆಯೂ ಆಗಿದೆ. ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ಸಿದ್ಧತೆ ನಡೆಸಲಾಗುವುದು. ಅಲ್ಲದೆ, ಡಿ.3 ಮತ್ತು 4ರಂದು ರಂಗಾಯಣದ ಭೂಮಿಗೀತದಲ್ಲಿ ಪ್ರದರ್ಶನಗೊಂಡ ನಂತರ ಡಿ.9ರಂದು ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿಯೂ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಗೊಳ್ಳಲಿದೆ.

–ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣ ನಿರ್ದೇಶಕ

"'ಟಿಪ್ಪು ನಿಜಕನಸುಗಳು' ನಾಟಕ ಚೆನ್ನಾಗಿ ನಡೆಯುತ್ತಿದೆ. ಜನರು ಇಷ್ಟಪಟ್ಟು ನೋಡುತ್ತಿರುವುದರಿಂದ ಖುಷಿಯಾಗುತ್ತಿದೆ. ಮುಂದಿನ ವಾರದಿಂದ ಬಹುರೂಪಿ ಇರುವುದರಿಂದ ಅದರಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

–ನಿರ್ಮಲ ಮಠಪತಿ, ರಂಗಾಯಣ ಉಪನಿರ್ದೇಶಕಿ

ಮೈಸೂರಿನ ಐವರು ಸೇರಿ ರಾಜ್ಯದ 71 ಅಧಿಕಾರಿಗಳಿಗೆ ಮುಂಬಡ್ತಿ

ಮೈಸೂರು,ಡಿ.1–ಮೈಸೂರಿನ ಐವರು ಅಧಿಕಾರಿಗಳು ಸೇರಿದಂತೆ ರಾಜ್ಯದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 71 ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಮುಂಬಡ್ತಿ ನೀಡಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಹಾಯಕ ನಿಶ್ಚಯ್ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ ಬೆಂಗಳೂರು ರಿಜಿಸ್ಟ್ರಾರ್ ಆಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ತಹಸೀಲ್ದಾರ್ ಆಗಿರುವ ಕೆ.ಜಾನ್ಸನ್ ಅವರನ್ನು ಮಂಡ್ಯ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಯಾಗಿ ಮುಂಬಡ್ತಿ ನೀಡಿ ವರ್ಗಾವಣೆ ಮಾಡಲಾಗಿದೆ. ಸ್ಥಳ ನಿರೀಕ್ಷಣೆಯಲ್ಲಿದ್ದ ಜೆ.ಮಹೇಶ್ ಅವರನ್ನು ಮೈಸೂರು ಕಾಡಾ ಕಚೇರಿ ಸಹಾಯಕ ಆಡಳಿತಾಧಿಕಾರಿಯಾಗಿ, ಸ್ಥಳ ನಿರೀಕ್ಷಣೆಯಲ್ಲಿದ್ದ ಆರ್.ಕೆ.ರಕ್ಷಿತ್ ಅವರನ್ನು ಮೈಸೂರು ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಯಾಗಿ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ತಹಸೀಲ್ದಾರ್ ಆರ್.ಮಂಜುನಾಥ್ ಅವರನ್ನು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮುಖ್ಯ ಆಡಳಿತಾಧಿಕಾರಿಯಾಗಿ ಮುಂಬಡ್ತಿ ನೀಡಲಾಗಿದೆ.



ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್‌ನ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಅನಿವಾರ್ಯ ಕಾರಣದಿಂದ ಭಾಗವಹಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರನ್ನು ಬೆಂಗಳೂರಿನ ತಮ್ಮ ಕಚೇರಿಯಲ್ಲಿ ಮೈಲ್ಯಾಕ್ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಅವರು ಅಭಿನಂದಿಸಿದರು. ಇದೇ ವೇಳೆ ಕಾರ್ಖಾನೆಯ ಹೊಸ ಪ್ರಸ್ತಾಪಗಳನ್ನು ಸಚಿವರಲ್ಲಿ ರಘು ಮಂಡಿಸಿದರು. ವ್ಯವಸ್ಥಾಪಕ ನಿರ್ದೇಶಕ ಕುಮಾರಸ್ವಾಮಿ, ಜನರಲ್ ಮ್ಯಾನೇಜರ್ ಹರಕುಮಾರ್ ಅವರನ್ನು ಚಿತ್ರದಲ್ಲಿ ಕಾಣಬಹುದು.



ಗುರುವಾರ ಮೈಸೂರಿಗೆ ಆಗಮಿಸಿದ ಗೂಡಲೂರು ವಾಗೀಶ್ವರಿ ಮೂಕಾಂಬಿಕಾ ದೇವಸ್ಥಾನದ ಅಮ್ಮನವರಾದ ಮಾತಾ ಅಂಬಿಕಾ ಚೈತನ್ಯಮಯಿ (ಸ್ವಾಮೀನಿ) ಅವರನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರೂ ಆದ ಮಾಜಿ ಸಚಿವ ಎಂ.ಶಿವಣ್ಣ ಭಕ್ತಿಪೂರ್ವಕವಾಗಿ ಸ್ವಾಗತಿಸಿದರು. ಈ ವೇಳೆ ಬಿ.ಪಿ.ಬೋರೇಗೌಡ, ಪ್ರದೀಶ್‌ಕುಮಾರ್, ಜಗದೀಶ್ ಹೆಬ್ಬಾರ್, ಗೂಡಲೂರು ಪ್ರಜೇಶ್ ಸ್ವಾಮಿ, ಸುರೇಶ್, ಶಿವ ಇನ್ನಿತರರು ಉಪಸ್ಥಿತರಿದ್ದಾರೆ.

ಗುಜರಾತ್‌ನಲ್ಲಿ ಮೊದಲನೇ ಹಂತದಲ್ಲಿ ಶೇ.57ರಷ್ಟು ಮತದಾನ

ಅಹಮದಾಬಾದ್,ಡಿ.1–ಗುಜರಾತ್ ವಿಧಾನಸಭೆ ಚುನಾವಣೆಯ ಮೊದಲನೇ ಹಂತದ ಮತದಾನ ಪ್ರಕ್ರಿಯೆ ಗುರುವಾರ ಮುಕ್ತಾಯಗೊಂಡಿದ್ದು, ಸಂಜೆ 5ರವರೆಗೆ ಶೇ.57.24ರಷ್ಟು ಮತದಾನವಾಗಿದೆ.



ಇಂದು ಬೆಳಗ್ಗೆ 8 ಗಂಟೆಯಿಂದ ಬಿಗಿ ಭದ್ರತೆಯೊಂದಿಗೆ ಮತದಾನ ಆರಂಭವಾಗಿದ್ದು, ಸಂಜೆ 5ರವರೆಗೆ ಶೇ.57.24ರಷ್ಟು ಮತದಾನವಾಗಿದೆ ಎಂದು ತಿಳಿದುಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯದಲ್ಲಿ 27 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಬಿಜೆಪಿ ಈಗ ಮತ್ತೆ ಅಧಿಕಾರಕ್ಕೆ ಬರಲು ತೀವ್ರ ಹೋರಾಟ ನಡೆಸುತ್ತಿದೆ. ಮೊದಲ ಹಂತದಲ್ಲಿ, ಸೌರಾಷ್ಟ್ರ–ಕಚ್ ಪ್ರದೇಶ ಮತ್ತು ದಕ್ಷಿಣ ಭಾಗಗಳು ಸೇರಿದಂತೆ ಒಟ್ಟು 19 ಜಿಲ್ಲೆಗಳ 89 ವಿಧಾನಸಭಾ ಕ್ಷೇತ್ರಗಳಲ್ಲಿ ಇಂದು ಮತದಾನ ನಡೆದಿದ್ದು, ಒಟ್ಟು 788 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಬಿಜೆಪಿ ಮತ್ತು ಕಾಂಗ್ರೆಸ್ ಎಲ್ಲಾ 89 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಹೊಸದಾಗಿ ಎಂಟ್ರಿ ಕೊಟ್ಟಿರುವ ಎಎಪಿ 88 ಸ್ಥಾನಗಳಲ್ಲಿ ಸ್ಪರ್ಧಿಸಿದೆ. 339 ಪಕ್ಷೇತರ ಅಭ್ಯರ್ಥಿಗಳು ಸಹ ಕಣದಲ್ಲಿದ್ದಾರೆ. ಚುನಾವಣೆಯಲ್ಲಿ ಕೇವಲ 70 ಮಹಿಳಾ ಅಭ್ಯರ್ಥಿಗಳು ಮಾತ್ರ ಕಣದಲ್ಲಿದ್ದು, ಬಿಜೆಪಿಯಿಂದ 9, ಕಾಂಗ್ರೆಸ್‌ನಿಂದ ಆರು ಮತ್ತು ಎಎಪಿಯಿಂದ ಐವರು ಸ್ಪರ್ಧಿಸಿದ್ದಾರೆ.

ಸಿವೇಜ್ ಫಾರಂ ಕಸ ತೆರವಿಗೆ ಶೀಘ್ರದಲ್ಲೇ ಅನುದಾನ ಬಿಡುಗಡೆ

ಸಂಸದ ಪ್ರತಾಪ್ ಸಿಂಹ ವಿಶ್ವಾಸ

ಮೈಸೂರು, ಡಿ.1(ಎಸ್‌ಬಿಡಿ)– ಮೈಸೂರಿನ ವಿದ್ಯಾರಣ್ಯಪುರಂ



ಸಿವೇಜ್ ಫಾರಂ ಕಸದ ರಾಶಿ ತೆರವು ಯೋಜನೆಗೆ ಅಗತ್ಯ ಅನುದಾನ ಬಿಡುಗಡೆಗೆ ಸರ್ಕಾರ ಶೀಘ್ರ ಅನುಮೋದನೆ ನೀಡಲಿದೆ ಎಂದು ಸಂಸದ ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ವಿದ್ಯಾರಣ್ಯಪುರಂ ಸಿವೇಜ್ ಫಾರಂನಲ್ಲಿ ಸಂಗ್ರಹವಾಗಿರುವ 6.5 ಲಕ್ಷ ಟನ್ ಕಸ ವಿಲೇವಾರಿಗೆ ಅನುದಾನಕ್ಕೆ ಸರ್ಕಾರವನ್ನು ಕೋರಲಾಗಿದೆ. ಈ ಯೋಜನೆಗೆ 57 ಕೋಟಿ ರೂ. ಅನುದಾನವನ್ನು ಸ್ವಚ್ಛ ಭಾರತ್ ಮಿಷನ್‌ನಡಿ ಬಿಡುಗಡೆಗೆ ಸರ್ಕಾರ ಅತೀ ಶೀಘ್ರದಲ್ಲೇ ಒಪ್ಪಿಗೆ ಸೂಚಿಸುವ ವಿಶ್ವಾಸವಿದೆ ಎಂದರು. ಅನುದಾನ ಬಿಡುಗಡೆಯಾದ ತಕ್ಷಣವೇ ಗ್ಲೋಬಲ್ ಟೆಂಡರ್ ಮೂಲಕ ಅರ್ಹರಿಗೆ ಯೋಜನೆಯನ್ನು ವಹಿಸಿ, 18 ತಿಂಗಳಲ್ಲಿ ಸಿವೇಜ್ ಫಾರಂನ ಕಸದ ರಾಶಿಯನ್ನು ಸಂಪೂರ್ಣವಾಗಿ ಸ್ಥಳಾಂತರಿಸಲಾಗುವುದು. ಹಾಗೆಯೇ ಕೆಸರೆ ಕಸ ಸಂಸ್ಕರಣೆ ಘಟಕ ಒಂದೂವರೆ ತಿಂಗಳಲ್ಲಿ ಹಾಗೂ ರಾಯನಕೆರೆ ಘಟಕ ನಿರ್ಮಾಣ ಇನ್ನು 3 ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು, ನಂತರದಲ್ಲಿ ಉತ್ಪತ್ತಿಯಾಗುವ ಕಸ ಮೂರು ಘಟಕಗಳಿಗೆ ವಿಂಗಡಣೆಯಾಗಲಿದೆ. ಅದರಿಂದ ವಿದ್ಯಾರಣ್ಯಪುರಂ ಘಟಕದ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂದು ಹೇಳಿದರು.

ನಾಗನಹಳ್ಳಿ ಸಾವಯವ ಕೃಷಿ ಕೇಂದ್ರದಲ್ಲಿ 'ದೇಸಿ ಕಾರ್ಯಕ್ರಮ'



ಮೈಸೂರು, ಡಿ.1(ಎಂಕೆ)– ಕೃಷಿ ವಿಸ್ತರಣಾ ನಿರ್ವಹಣಾ ರಾಷ್ಟ್ರೀಯ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ, ಕೃಷಿ ತಂತ್ರಜ್ಞಾನ ಸಂಸ್ಥೆ, ಕೃಷಿ ಇಲಾಖೆ ಹಾಗೂ ವಿಸ್ತರಣಾ ಶಿಕ್ಷಣ ಘಟಕದ ಸಂಯುಕ್ತಾಶ್ರಯದಲ್ಲಿ ಮೈಸೂರಿನ ನಾಗನಹಳ್ಳಿ ಸಾವಯವ ಕೃಷಿ ಕೇಂದ್ರದಲ್ಲಿ 'ದೇಸಿ ಕಾರ್ಯಕ್ರಮ' ನಡೆಯಿತು.

ದೇಸಿ ಕಾರ್ಯಕ್ರಮ ಉದ್ಘಾಟಿಸಿದ ಕೃಷಿ ವಿವಿ ಸಿಬ್ಬಂದಿ ತರಬೇತಿ ಘಟಕದ ಸಂಯೋಜಕ ಡಾ.ಕೆ.ಶಿವರಾಮು, ಕೃಷಿ ಪರಿಕರಗಳ ಮಾಹಿತಿ ನೀಡಿದರು. ಅಲ್ಲದೆ, ದೇಸಿ ಕಾರ್ಯಕ್ರಮದಲ್ಲಿ ಕಲಿತ ತಾಂತ್ರಿಕ ಅಂಶಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಇಳುವರಿ ಪಡೆದು ಆರ್ಥಿಕವಾಗಿ ಸಬಲರಾಗುವಂತೆ ಅವರು ಸಲಹೆ ನೀಡಿದರು.

ವಿಸ್ತರಣಾ ಶಿಕ್ಷಣ ಘಟಕದ ಬೇಸಾಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸಿ. ರಾಮಚಂದ್ರ ಮಾತನಾಡಿ, ದೇಸಿ ಕಾರ್ಯಕ್ರಮವು ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಶಿಕ್ಷಣಾರ್ಥಿಗಳು ಆಹಾರ ಭದ್ರತೆ, ಪೋಷಕಾಂಶಗಳ ಭದ್ರತೆ ಕಾಪಾಡುವಲ್ಲಿ ಹಾಗೂ ರೈತರ ಆದಾಯ ಹೆಚ್ಚಳ ಮಾಡುವಂತಹ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು.

ಕೃಷಿ ಇಲಾಖೆ ಉಪನಿರ್ದೇಶಕ ಡಾ. ರಾಜು, ನೋಡಲ್ ಅಧಿಕಾರಿ ಡಾ.ಬಿ.ಕಲ್ಪನಾ, ಹಿರಿಯ ಕ್ಷೇತ್ರಾಧೀಕ್ಷಕ ಡಾ.ಪಿ.ಪ್ರಕಾಶ್, ಡಾ.ಜಿ.ಹೆಚ್.ಯೋಗೇಶ್, ಮಮತಾ, ಡಾ.ಎಸ್.ಗಂಗಾಧರಯ್ಯ, ಎಂ.ಎಲ್. ಚನ್ನಬಸವಣ್ಣ, ಹೆಚ್.ಆರ್.ಉಮೇಶ್, ಡಾ.ಎ.ನಾಗಮಣಿ, ಡಾ.ಆರ್.ಎನ್.ಪುಷ್ಪ, ಡಾ.ಕೃಷ್ಣ ಯಾದವ್, ರಾಹುಲ್ ದಾಸ್, ಆಸಿಫ್ ಪಾಷಾ, ಧರಣೇಶ ಉಪಸ್ಥಿತರಿದ್ದರು.





ಕುವೆಂಪುನಗರ ಪೊಲೀಸ್ ಠಾಣೆಯಿಂದ ವರ್ಗಾವಣೆಗೊಂಡಿರುವ ಇನ್ಸ್‌ಪೆಕ್ಟರ್ ಷಣ್ಮುಖ ವರ್ಮ ಅವರನ್ನು ಆದ್ಯ ಸಹಕಾರಿ ಸಂಘದ ಅಧ್ಯಕ್ಷ ಡಾ.ವಿಶ್ವನಾಥ್ ಅಭಿನಂದಿಸಿ, ಬೀಳ್ಕೊಟ್ಟರು(ಎಡಚಿತ್ರ). ನೂತನ ಇನ್ಸ್‌ಪೆಕ್ಟರ್ ಅರುಣ್ ಅವರನ್ನು ಕುವೆಂಪುನಗರ ಮುಖಂಡರು ಸ್ವಾಗತಿಸಿದರು. ಈ ವೇಳೆ ವಿಕ್ರಾಂತ್ ಪಿ.ದೇವೇಗೌಡ, ಆಡಿಟರ್ ಕೃಷ್ಣೇಗೌಡ, ರಘುರಾಂ ವಾಜಪೇಯಿ, ಎಪಿ ನಾಗೇಶ್, ಒಂಟಿಕೊಪ್ಪಲ್ ಗುರುರಾಜ್, ವರದರಾಜ, ಅರವಿಂದನಗರ ರಾಜಣ್ಣ ಇನ್ನಿತರರಿದ್ದಾರೆ.

ಸಾಮಾನ್ಯ ಮಕ್ಕಳೊಂದಿಗೆ ವಿಶೇಷಚೇತನ ಮಕ್ಕಳ ಸಮನ್ವಯಗೊಳಿಸಿ ಕಲಿಕೆಗೆ ಅವಕಾಶ

● ಶಾಸಕ ರಾಮದಾಸ್ ಸಲಹೆ ● ವಿಶೇಷ ಮಕ್ಕಳಿಗೆ ಆರೋಗ್ಯ ತಪಾಸಣೆ



ಮೈಸೂರು,ಡಿ.1(ಎಂಕೆ)–ಸಾಮಾನ್ಯ ಮಕ್ಕಳೊಂದಿಗೆ ವಿಶೇಷಚೇತನ ಮಕ್ಕಳನ್ನು ಸಮನ್ವಯಗೊಳಿಸಿ ಕಲಿಕೆಗೆ ಅವಕಾಶ ಮಾಡಿಕೊಡಬೇಕು ಎಂದು ಶಾಸಕ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟರು. ನಗರದ ಸೆಂಟ್ ಮೇರಿಸ್ ಶಾಲೆ ಆಯೋಜಿಸಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಆಯೋಜಿಸಿದ್ದ 'ವಿಶೇಷಚೇತನ ಮಕ್ಕಳ ವೈದ್ಯಕೀಯ ತಪಾಸಣಾ ಶಿಬಿರ' ಉದ್ಘಾಟಿಸಿ ಮಾತನಾಡಿದ ಅವರು, ಸಮಗ್ರ ಶಿಕ್ಷಣ ಪರಿಕಲ್ಪನೆಯಲ್ಲಿ ಸಾಮಾನ್ಯ ಮಕ್ಕಳೊಂದಿಗೆ ವಿಶೇಷಚೇತನ ಮಕ್ಕಳನ್ನು ಸಮನ್ವಯಗೊಳಿಸಿ ಕಲಿಕೆಗೆ ಅವಕಾಶ ಮಾಡಿಕೊಟ್ಟರೆ, ವಿಶೇಷಚೇತನ ಮಕ್ಕಳ ಶೈಕ್ಷಣಿಕ ಕಲಿಕೆ ಉತ್ತಮವಾಗುತ್ತದೆ ಎಂದರು. ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ವಿಶೇಷಚೇತನ ಮಕ್ಕಳಿಗೆ ಅವಕಾಶ ನೀಡಿ, ಅವರನ್ನು ಪ್ರೋತ್ಸಾಹಿಸಬೇಕು. ಅವರ ಶೈಕ್ಷಣಿಕ ಪ್ರಗತಿಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಾಣ ಮಾಡುವುದು. ಹಾಗೆಯೇ ಅವರನ್ನು ಕರೆದೊಯ್ಯುವುದು ಮುಖ್ಯವಾಗಿದೆ ಎಂದು ವಿಶೇಷಚೇತನ ಮಕ್ಕಳ ಪೋಷಕರಿಗೆ ಸಲಹೆ ನೀಡಿದರು. ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಬಿಇಓ ರಾಮಾರಾಧ್ಯ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಶ್ರೀಕಂಠಸ್ವಾಮಿ, ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ ಉಪಸ್ಥಿತರಿದ್ದರು.

ಡಿ.10, ಉದ್ಯೋಗ ಮೇಳ

ಮೈಸೂರು, ಡಿ.1– ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ ವತಿಯಿಂದ ಡಿ.10ರಂದು ಬೆಳಗ್ಗೆ 10 ರಿಂದ ಸಂಜೆ 4ರವರೆಗೆ ಮಹಾರಾಜ ಕಾಲೇಜು ಆವರಣದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ದೂರವಾಣಿ ಸಂಖ್ಯೆ: 0821–2970815 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಯರ್ ನೇತೃತ್ವದ ತಂಡ ವಾರಣಾಸಿಯಲ್ಲಿ ಅಧ್ಯಯನ ಪ್ರವಾಸ

ಮೈಸೂರು, ಡಿ.1(ಆರ್‌ಕೆ)–ಮೈಸೂರು ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಪಾಲಿಕೆಯ 35 ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ತಂಡವು ವಾರಣಾಸಿ, ಮುಂಬೈನಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿದೆ.

ಬುಧವಾರ ಸಂಜೆ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಿದ ಕಾರ್ಪೊರೇಟರ್‌ಗಳು, ಬೆಂಗಳೂರಿನಿಂದ ವಿಮಾನದಲ್ಲಿ ಪ್ರಯಾಣಿಸಿ, ತಡರಾತ್ರಿ ಉತ್ತರ ಪ್ರದೇಶದ ವಾರಣಾಸಿ ಪಾರಂಪರಿಕ ನಗರಿ ತಲುಪಿದರು. ಅವರನ್ನು ವಾರಣಾಸಿ ಮೇಯರ್ ಹಾಗೂ ಅಲ್ಲಿನ ಪಾಲಿಕೆ ಕಮಿಷ್ನರ್ ಆತ್ಮೀಯವಾಗಿ ಬರಮಾಡಿಕೊಂಡರು.

ಗುರುವಾರ ಬೆಳಗ್ಗೆ ವಾರಣಾಸಿ ನಗರಪಾಲಿಕೆ ಕಚೇರಿಯಲ್ಲಿ ಅಲ್ಲಿನ ಆಡಳಿತ, ಕಸ ವಿಲೇವಾರಿ, ಸಂಸ್ಕರಣೆ, ಮರು ಬಳಕೆ ವಿಧಾನ, ಕುಡಿಯುವ ನೀರಿನ ಸಂಪರ್ಕ ಜಾಲ, ವಿತರಣಾ ವ್ಯವಸ್ಥೆ, ಒಳಚರಂಡಿ ನಿರ್ವಹಣೆ, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ಕಟ್ಟಡ ತ್ಯಾಜ್ಯ ವಿಲೇವಾರಿ, ಬೀದಿದೀಪಗಳು, ನಗರದ ರಸ್ತೆ, ವೃತ್ತಗಳ ಸೌಂದರ್ಯ ಕಾಪಾಡುವುದು, ಪೌರಕಾರ್ಮಿಕರ ದೈನಂದಿನ ಕಾರ್ಯ ಇತ್ಯಾದಿ ವಿಷಯಗಳ ಬಗ್ಗೆ ಅಲ್ಲಿನ ಪಾಲಿಕೆ ಕಮಿಷ್ನರ್ ಹಾಗೂ ಮೇಯರ್ ಶಿವಕುಮಾರ್ ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ವಿವರಿಸಿದರು.

ನಂತರ ಅಲ್ಲಿನ ಗ್ರೀನ್ ಕೋಲ್ ಪ್ಲಾಂಟ್, ಪಾರಂಪರಿಕ ಕಟ್ಟಡ, ಕಸ ವಿಲೇವಾರಿ ಘಟಕಗಳೂ ಸೇರಿದಂತೆ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ ತಂಡವು, ಇಂದು ರಾತ್ರಿ ವಾರಣಾಸಿಯಲ್ಲಿ ವಾಸ್ತವ್ಯ ಹೂಡಿದ್ದು, ನಾಳೆ(ಡಿ.2)ಯೂ ಕೆಲ ಅಭಿವೃದ್ಧಿ ಯೋಜನೆಗಳು, ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ನಂತರ ಮುಂಬೈಗೆ ತೆರಳುವರು. ಅಲ್ಲಿನ ಬೃಹತ್ ಮುಂಬೈ ಮುನಿಸಿಪಲ್ ಕಾರ್ಪೊರೇಷನ್ ಅಧಿಕಾರಿಗಳೊಂದಿಗೆ ಚರ್ಚಿಸಲಿರುವ ಮೇಯರ್ ನೇತೃತ್ವದ ತಂಡವು ಭಾನುವಾರ ರಾತ್ರಿ ಮೈಸೂರು ತಲುಪಲಿದೆ. ನಗರಪಾಲಿಕೆ ಹಿರಿಯ ವೈದ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್, ಇಂಜಿನಿಯರ್ ರೂಪಶ್ರೀ, ಮೇಯರ್ ಆಪ್ತ ಕಾರ್ಯದರ್ಶಿ ಸಂದೀಶ್ ಸೇರಿದಂತೆ 35 ಮಂದಿ ಕಾರ್ಪೊರೇಟರ್‌ಗಳು ವಾರಣಾಸಿ ಮತ್ತು ಮುಂಬೈ ಅಧ್ಯಯನ ಪ್ರವಾಸದಲ್ಲಿದ್ದಾರೆ.



ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ ನೇತೃತ್ವದ ತಂಡವು ಗುರುವಾರ ವಾರಣಾಸಿ ತಲುಪಿತು.

ಮೈಸೂರು ವಿಶ್ವವಿದ್ಯಾನಿಲಯ
ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು–570006
ದೂರವಾಣಿ ಸಂಖ್ಯೆ: 2419622, ಫ್ಯಾಕ್ಸ್ : 2419624.

ಸಂಖ್ಯೆ: ಯುಜಿಡಿ/351/2022–23 ದಿನಾಂಕ: 29.11.2022

ಪ್ರಕಟಣೆ

ದಿನಾಂಕ: 12.12.2022ರಂದು ವಿಭಾಗದ ಸಪೋಟ, ಸೀಬೆ ಮತ್ತು ಸೀತಾಫಲ ಫಸಲುಗಳ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ 2022–23ನೇ ಸಾಲಿನ ಸಪೋಟ, ಸೀಬೆ ಮತ್ತು ಸೀತಾಫಲ ಫಸಲುಗಳ **ಟೆಂಡರ್ ಕಂ ಬಹಿರಂಗ ಹರಾಜು ಪ್ರಕ್ರಿಯೆ ದಿನಾಂಕ: 12.12.2022ರಂದು ಬೆಳಿಗ್ಗೆ 11.00 ಗಂಟೆಗೆ ಮಾನಸಗಂಗೋತ್ರಿಯಲ್ಲಿರುವ ನರ್ಸರಿ ತೋಟದಲ್ಲಿ** ಪ್ರಾರಂಭವಾಗುತ್ತದೆ. ಸದರಿ ಟೆಂಡರ್ ಕಂ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಗಡ ಹಣ **ರೂ. 10,000/–** (ಹತ್ತು ಸಾವಿರ ರೂಪಾಯಿ)ಗಳ ನಗದನ್ನು ಠೇವಣಿಯನ್ನಾಗಿ ಹರಾಜು ಸ್ಥಳದಲ್ಲಿ ಪಾವತಿಸಿದ ನಂತರವೇ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡಬಹುದು. ಟೆಂಡರ್ ಕಂ ಬಹಿರಂಗ ಹರಾಜಿನ ಯಶಸ್ವಿ ಬಿಡ್‌ದಾರರು ಪೂರ್ತಾ ಹಣವನ್ನು ಸ್ಥಳದಲ್ಲೇ ಪಾವತಿಸತಕ್ಕದ್ದು.

(1) ಸಪೋಟ ಫಸಲಿನ ಮರ – 530, (2) ಸೀಬೆ ಫಸಲಿನ ಮರ – 250, (3) ಸೀತಾಫಲ ಫಸಲಿನ ಮರ – 88.

ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂ: 0821–2419310.

ಸಹಿ/– ಸಹಾಯಕ ನಿರ್ದೇಶಕರು
ತೋಟಗಾರಿಕೆ ವಿಭಾಗ,
ವಾಸಾಸಂಇ/ಮೈಸೂರು/ಶಿರಡಿಸಾಯಿ/721/2022–23 ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.


PUBLIC NOTICE

The general public at large are hereby notified that my client HARISH KUMAR. S, S/o Late Shivagangaiah, aged about 45 years, Permanently residing at S-008, 1st Cross, 19th Main, Bharath Nagar, 2nd Stage, Bengaluru - 560091 has lost the Original Sale deed in respect of the property bearing No. 69, Situated at Hebbal Industrial Area, Kasaba Hobli, Mysore Taluk, Mysore District, measuring 243 Sq.ft. meter and bounded on the east by: road, West by: Site No. 76., North by: Site No.70, South by: Site No. 68 (herein after referred to as the "Schedule Property"). The following original documents are lost Sale Deed dated 23/3/2010 duly executed by "M.C. Nagaraj, Assistant Secretary KIADB, in favour of Late Shivagangaiah, duly registered as document bearing No. MYN-1-20587/2009-10 of C.D. No.MYND231 of KIADB Land, in the office of the sub-registrar, Mysore North.

Any person tracing the said document or respect of the schedule property in possession of the documents in requested to handover to the same to the undersigned. The public are also cautioned that the above said document shall not be used to deal in any manner whatsoever with respect of the Schedule Property and if any such action is done, the same shall not be binding on my client. A police complaint also has been lodged with regard to the loss of the said document Vide lost report no PO0047221200357, Date: 7/7/2022.

Within 07 days please inform to the above said address.

Sd/- K.R. Poorna Prasad,
Advocate, No. A-308, Oceanus Royal, Apartment,
Vishveshwaranagara,
2nd Stage, Mysore - 570008.
Mob.: 9845540013



ಮೇಲುಕೋಟೆಯಲ್ಲಿ ಪುಟ್ಟರಾಜು ಪರಾಕ್ರಮಕ್ಕೆ ಯಾರು ಸರಿಸಮರು..!

ರೈತ ಸಂಘದಿಂದ ದರ್ಶನ್, ಕಾಂಗ್ರೆಸ್‌ನಿಂದ ಡಾ.ರವೀಂದ್ರ, ಬಿಜೆಪಿಯಿಂದ ಇಂದ್ರೇಶ್ ಸ್ಪರ್ಧೆ ಬಹುತೇಕ ಖಚಿತ

...ಎಂ.ಕೆ.ಮೋಹನ್‌ರಾಜ್


ದರ್ಶನ್ ಪುಟ್ಟಣ್ಣಯ್ಯ
ಡಾ.ರವೀಂದ್ರ
ಡಾ.ಇಂದ್ರೇಶ್

ಮಂಡ್ಯ, ಡಿ.1– ಚುನಾವಣೆಗೆ ಇನ್ನೂ ನಾಲ್ಕೈದು ತಿಂಗಳು ಬಾಕಿ ಇದ್ದು, ಐತಿಹಾಸಿಕ ಧಾರ್ಮಿಕ ಸನ್ನಿಧಿ ಒಳಗೊಂಡ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ರಂಗೇರಿಲ್ಲ. ಇದಕ್ಕೆ ಪ್ರಮುಖ ಕಾರಣ ಹಾಲಿ ಜೆಡಿಎಸ್ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಪ್ರಬಲ ಎದುರಾಳಿಗಳ ಕೊರತೆ ಇದ್ದು, ಇತರೆ ಪಕ್ಷದ ಅಘೋಷಿತ ಅಭ್ಯರ್ಥಿಗಳು ಇನ್ನೂ ಚುನಾವಣಾ ಅಖಾಡಕ್ಕೆ ಧುಮುಕಿಲ್ಲ.

ಮೇಲುಕೋಟೆ ಮಂಡ್ಯ ಜಿಲ್ಲೆಯಲ್ಲೇ ವಿಶೇಷವಾದ ಕ್ಷೇತ್ರವಾಗಿದ್ದು, ಜಿಲ್ಲೆಯ 6 ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಹಣಾಹಣಿ ನಡೆದರೆ ಈ ಕ್ಷೇತ್ರದಲ್ಲಿ ಮಾತ್ರ ಜೆಡಿಎಸ್ ಹಾಗೂ ರೈತ ಸಂಘದ ನಡುವೆ ಹಣಾಹಣಿ. ಈ ಹಿಂದೆ ಸಿ.ಎಸ್. ಪುಟ್ಟರಾಜು ಹಾಗೂ ರೈತ ಸಂಘದ ದಿ.ಕೆ.ಎಸ್.ಪುಟ್ಟಣ್ಣಯ್ಯ ನಡುವೆ ಹಣಾಹಣಿ ನಡೆಯುತ್ತಿತ್ತು. ಕಳೆದ 2018ರ ಚುನಾವಣೆಯಲ್ಲಿ ಕೆ.ಎಸ್.ಪುಟ್ಟಣ್ಣಯ್ಯ ಅವರ ಅಕಾಲಿಕ ಸಾವಿನಿಂದ ಸಿ.ಎಸ್.ಪುಟ್ಟರಾಜು ಹಾಗೂ ಪುಟ್ಟಣ್ಣಯ್ಯ ಪುತ್ರ ದರ್ಶನ್ ಪುಟ್ಟಣ್ಣಯ್ಯ ನಡುವೆ ನೇರ ಸ್ಪರ್ಧೆ ನಡೆದು ಪುಟ್ಟರಾಜು ಗೆಲುವು ಸಾಧಿಸಿದ್ದರು.

ಚುನಾವಣೆ ಹತ್ತಿರ ಬರುತ್ತಿದ್ದರೂ ದರ್ಶನ್ ಸುಳಿವಿಲ್ಲ: ಈಗಾಗಲೇ ಹೇಳಿದಂತೆ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಕೇವಲ ನಾಲ್ಕೈದು ತಿಂಗಳು ಇದೆ. ಆದರೆ ರೈತ ಸಂಘದ ಅಭ್ಯರ್ಥಿ ಎಂದು ಹೇಳಲ್ಪಡುತ್ತಿರುವ ದರ್ಶನ್ ಪುಟ್ಟಣ್ಣಯ್ಯ ಮಾತ್ರ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿಲ್ಲ. ಕಳೆದ ಚುನಾವಣೆಯಲ್ಲಿ 21 ಸಾವಿರ ಮತಗಳ ಅಂತರದಿಂದ ಪರಾಭವಗೊಂಡಿದ್ದ ದರ್ಶನ್, ಬಳಿಕ ಕ್ಷೇತ್ರದಲ್ಲಿ ಕೆಲ ದಿನಗಳ ಕಾಲ ಓಡಾಡಿದರಾದರೂ ನಂತರ ವಿದೇಶಕ್ಕೆ ಹೋದರು. ಕೊರೊನಾ ಸಂದರ್ಭದಲ್ಲೂ ಕ್ಷೇತ್ರದಲ್ಲಿ ಇರಲಿಲ್ಲ. ಇತ್ತೀಚೆಗೆ ಕ್ಷೇತ್ರಕ್ಕೆ ಬಂದು ಇಲ್ಲೇ ಉಳಿದುಕೊಂಡು ಸಂಘಟನೆ ಮಾಡುವುದಾಗಿ ಹಲವು ಸುದ್ದಿಗೋಷ್ಠಿಗಳಲ್ಲಿ ಘೋಷಿಸಿದರಾದರೂ ಮತ್ತೆ ವಿದೇಶಕ್ಕೆ ಹೋದವರು ಇನ್ನೂ ವಾಪಸ್ ಆಗಿಲ್ಲ. ಅವರ ಬೆಂಬಲಿಗರು ಮಾತ್ರ ದರ್ಶನ್ ಸ್ಪರ್ಧೆ ಖಚಿತ ಎನ್ನುತ್ತಿದ್ದಾರೆ.

ಕ್ಷೇತ್ರದಲ್ಲಿ ಇಂದ್ರೇಶ್ ಓಡಾಟ: ಇನ್ನು ಬಿಜೆಪಿಯಿಂದ ಡಾ.ಇಂದ್ರೇಶ್ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದ್ದು, ಕ್ಷೇತ್ರದಲ್ಲಿ ಕಳೆದ 2 ವರ್ಷಗಳಿಂದ ಓಡಾಡುತ್ತಿದ್ದಾರೆ. ಸಮಾಜ ಸೇವೆ, ರೈತರು, ನಿರಾಶ್ರಿತರಿಗೆ ಸಹಾಯಹಸ್ತ ಚಾಚುತ್ತಾ, ಜನಸೇವೆಯಲ್ಲಿ ತೊಡಗಿದ್ದು, ಇತ್ತೀಚೆಗೆ ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಹಲವು ಸಚಿವರನ್ನು ಕರೆಸಿ, ಬೃಹತ್ ಕಾರ್ಯಕ್ರಮ ಮಾಡಿದ್ದರು. ಆದರೆ ಬಿಜೆಪಿ ಮತಬ್ಯಾಂಕ್ ಇರುವ ಕಡೆ ಮಾತ್ರ ಇವರ ಓಡಾಟವಿದ್ದು, ಇಡೀ ಕ್ಷೇತ್ರ ವ್ಯಾಪ್ತಿಯಲ್ಲಿ ಅಬ್ಬರಿಸುತ್ತಿಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಇಂದ್ರೇಶ್ ಸ್ಪರ್ಧೆಯಿಂದ ಈ ಬಾರಿ ಮೇಲುಕೋಟೆಯಲ್ಲಿ ಬಿಜೆಪಿ ಮತ ಗಳಿಕೆ ತಕ್ಕಮಟ್ಟಿಗೆ ಹೆಚ್ಚಾಗಬಹುದು.

ಅಖಾಡಕ್ಕೆ ಧುಮುಕದ ಡಾ.ರವೀಂದ್ರ: ಕಾಂಗ್ರೆಸ್‌ನಿಂದ ಡಾ.ರವೀಂದ್ರ ಸ್ಪರ್ಧೆ ಬಹುತೇಕ ಖಚಿತವಾಗಿದೆ. ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿರುವ ಉತ್ತಮ ವಾಗ್ಮಿ ಡಾ.ರವೀಂದ್ರ ಅನೇಕ ಹೋರಾಟಗಳ ಮೂಲಕ ಹೆಸರುವಾಸಿಯಾಗಿದ್ದು, ಈ ಬಾರಿ ದರ್ಶನ್ ಪುಟ್ಟಣ್ಣಯ್ಯಗೆ ಕಳೆದ ಬಾರಿಯಂತೆ ಸಹಾಯ ಮಾಡುವ ಪ್ರಶ್ನೆಯೇ ಇಲ್ಲ ನಾನೇ ಅಭ್ಯರ್ಥಿ ಎಂದು ಘಂಟಾಘೋಷವಾಗಿ ಘೋಷಿಸಿದ್ದು, ಆದರೆ ಚುನಾವಣಾ ಅಖಾಡಕ್ಕೆ ಮಾತ್ರ ಇನ್ನೂ ಅಧಿಕೃತವಾಗಿ ಧುಮುಕಿಲ್ಲ. ರಾಹುಲ್‌ಗಾಂಧಿ ನಡೆಸಿದ ಭಾರತ್ ಜೋಡೋ ಯಾತ್ರೆ ಮೇಲುಕೋಟೆ ಕ್ಷೇತ್ರದಲ್ಲಿ ಸಂಚರಿಸಿದ್ದು, ರಾಹುಲ್ ಜೊತೆಗೆ ಸೋನಿಯಾಗಾಂಧಿ ಸಹ ಹೆಜ್ಜೆ ಹಾಕಿದ್ದರು. ಇದು ಕಾಂಗ್ರೆಸ್‌ಗೆ ಸ್ವಲ್ಪ ಮಟ್ಟಿನ ಬಲ ತಂದಿದೆ. ಈ ನಡುವೆ ಕಾಂಗ್ರೆಸ್‌ನಿಂದ ಟಿಕೆಟ್‌ಗಾಗಿ ಡಾ.ರವೀಂದ್ರ ಜೊತೆಗೆ ಮಾಜಿ ಶಾಸಕ ಹಲಗೇಗೌಡರ ಪುತ್ರ ತ್ಯಾಗರಾಜು, ಕಾಂಗ್ರೆಸ್ ಮುಖಂಡರಾದ ಆನಂದ್ ಕುಮಾರ್, ನಾಗಭೂಷಣ್, ಎಲ್.ಡಿ.ರವಿ ಜೊತೆಗೆ ಕೆಪಿಸಿಸಿ ಕಿಸಾನ್ ಘಟಕದ ಅಧ್ಯಕ್ಷ ಸಚಿನ್ ಮೀಗಾ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಒಟ್ಟಾರೆ ಮೇಲುಕೋಟೆಯಲ್ಲಿ ಈ ಬಾರಿ ಜೆಡಿಎಸ್, ಕಾಂಗ್ರೆಸ್, ರೈತಸಂಘ, ಬಿಜೆಪಿ ನಡುವೆ ಹಣಾಹಣಿ ನಡೆಯಲಿದ್ದು, ವಿಜಯಮಾಲೆ ಯಾರಿಗೆ ಎಂಬುದನ್ನು ಕಾದು ನೋಡಬೇಕಿದೆ.

ಕ್ಷೇತ್ರದಲ್ಲಿ ಜೋರಾಗಿದೆ ಪುಟ್ಟರಾಜು ಅಬ್ಬರ



ಹಾಲಿ ಜೆಡಿಎಸ್ ಶಾಸಕ ಸಿ.ಎಸ್.ಪುಟ್ಟರಾಜು ಕ್ಷೇತ್ರದಲ್ಲಿ ಚುರುಕಿನಿಂದ ಓಡಾಡುತ್ತಿದ್ದು, ಅಭಿವೃದ್ಧಿ ಹಾಗೂ ಪಕ್ಷ ಸಂಘಟನೆ ಎರಡರ ನೊಗವನ್ನು ಹೊತ್ತು ನಾಜೂಕಾಗಿ ಮುನ್ನಡೆಯುತ್ತಿದ್ದಾರೆ. ಅವರು ಸಮ್ಮಿಶ್ರ ಸರ್ಕಾರದಲ್ಲಿ ಸಣ್ಣ ನೀರಾವರಿ ಸಚಿವರಾಗಿದ್ದಾಗ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಪಾಂಡವಪುರ ಹಾಗೂ ದುದ್ದ ಭಾಗದ ಹಲವು ಪ್ರದೇಶಗಳಿಗೆ ಕುಡಿಯುವ ನೀರು, ಮೂಲಭೂತ ಸೌಕರ್ಯ, ರಸ್ತೆ ಸೇರಿದಂತೆ ಹಲವು ಕೆಲಸಗಳಿಗೆ ಸಾವಿರಾರು ಕೋಟಿ ಹಣ ಮಂಜೂರು ಮಾಡಿಸಿದ್ದರು. ಆದರೆ ಹಲವು ಕಡೆ ಕುಮಾರಸ್ವಾಮಿ ಘೋಷಿಸಿದ್ದ ಅನುದಾನಗಳು ವಾಪಸ್ ಹೋದರೆ, ಪುಟ್ಟರಾಜು ಮಾತ್ರ ಛಲಬಿಡದೇ ಸಮ್ಮಿಶ್ರ ಸರ್ಕಾರದಲ್ಲಿ ಘೋಷಣೆಯಾಗಿದ್ದ ಎಲ್ಲಾ ಅನುದಾನವನ್ನು ಬಿಜೆಪಿ ಸರ್ಕಾರದಲ್ಲೂ ಸಂಬಂಧಿಸಿದ ಸಚಿವರ ಮನವೊಲಿಸಿ, ಹಣ ತಂದು ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದಾರೆ.

ಇನ್ನು ಪಕ್ಷ ಸಂಘಟನೆಯಲ್ಲೂ ಹಿಂದೆ ಬಿದ್ದಿಲ್ಲ. ಕೊರೊನಾ ವೇಳೆ ಸಂಕಷ್ಟದಲ್ಲಿದ್ದ ಕ್ಷೇತ್ರದ ಜನರಿಗೆ ಫುಡ್‌ಕಿಟ್ ಸೇರಿದಂತೆ ಹಲವು ಸೌಲಭ್ಯ ಒದಗಿಸಿದ್ದರು. ಅಲ್ಲದೇ ಅನೇಕ ಬಾರಿ ಜೆಡಿಎಸ್ ನಾಯಕರಾದ ಹೆಚ್.ಡಿ. ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರನ್ನು ಕರೆಸಿ, ಸಮಾವೇಶಗಳನ್ನು ಮಾಡಿದ್ದಾರೆ. ಇತ್ತೀಚೆಗೆ ಕ್ಷೇತ್ರದ ಜನರಿಗಾಗಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ 3 ದಿನಗಳ ಕಾಲ ದಿ.ಪುನೀತ್ ರಾಜ್‌ಕುಮಾರ್ ಹೆಸರಲ್ಲಿ ಪುನೀತೋತ್ಸವ ಕಾರ್ಯಕ್ರಮ ಆಯೋಜಿಸಿ, ಚಿತ್ರರಂಗದ ನಟ, ನಟಿಯರು, ಗಾಯಕರನ್ನು ಕರೆಸಿ, ಅದ್ಧೂರಿ ಮನರಂಜನಾ ಕಾರ್ಯಕ್ರಮ ಏರ್ಪಡಿಸಿದ್ದರು.

ಮೇಲುಕೋಟೆ ವಿಧಾನಸಭಾ ಕ್ಷೇತ್ರದ ವಿಶೇಷ



ಈ ಹಿಂದೆ ಮೇಲುಕೋಟೆ ವಿಧಾನಸಭಾ ಕ್ಷೇತ್ರ, ಪಾಂಡವಪುರ ಕ್ಷೇತ್ರವಾಗಿತ್ತು. 2008ರ ಕ್ಷೇತ್ರ ಪುನರ್ ವಿಂಗಡಣೆ ಬಳಿಕ ಮಂಡ್ಯ ತಾಲೂಕಿನ ದುದ್ದ ಹೋಬಳಿ ಒಳಗೊಂಡು ಮೇಲುಕೋಟೆ ವಿಧಾನಸಭಾ ಕ್ಷೇತ್ರವಾಗಿ ಪುನರ್ ವಿಂಗಡಣೆಯಾಯಿತು. ಈವರೆಗೂ ಕ್ಷೇತ್ರಕ್ಕೆ 15 ಚುನಾವಣೆ ನಡೆದಿದ್ದು, ಒಮ್ಮೆಯೂ ಉಪಚುನಾವಣೆ ಕಾಣದ ಕ್ಷೇತ್ರವಿದು.

ಈ ಕ್ಷೇತ್ರದಲ್ಲಿ ಹಾಲಿ ಶಾಸಕ ಸಿ.ಎಸ್.ಪುಟ್ಟರಾಜು ಹೆಸರಲ್ಲಿ ಹಲವು ದಾಖಲೆಗಳಿವೆ. ಕ್ಷೇತ್ರ ಪುನರ್ ವಿಂಗಡಣೆಗೂ ಮುನ್ನ ಪಾಂಡವಪುರ ಕ್ಷೇತ್ರದ ಕಡೆಯ ಶಾಸಕ ಸಿ.ಎಸ್.ಪುಟ್ಟರಾಜು ಅವರಾದರೆ, ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಮೊದಲ ಶಾಸಕರೂ ಸಿ.ಎಸ್.ಪುಟ್ಟರಾಜು ಆಗಿದ್ದಾರೆ. ಇನ್ನು ಪಾಂಡವ ಪುರ ಹಾಗೂ ಮೇಲುಕೋಟೆಯ ಒಬ್ಬ ಶಾಸಕರಿಗೂ ಮಂತ್ರಿ ಭಾಗ್ಯ ಒಲಿದಿರಲಿಲ್ಲ. 2018ರಲ್ಲಿ ಸಿ.ಎಸ್.ಪುಟ್ಟರಾಜು ಮಂತ್ರಿಯಾಗುವ ಮೂಲಕ ಇಡೀ ಕ್ಷೇತ್ರದಿಂದ ಮಂತ್ರಿ ಪಟ್ಟ ಅಲಂಕರಿಸಿದ ಏಕೈಕ ಶಾಸಕ ಎನಿಸಿದರೆ, ಈ ಕ್ಷೇತ್ರದ ಶಾಸಕರ ಪೈಕಿ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದ ಪಟ್ಟ ಒಲಿದಿದ್ದು ಸಹ ಸಿ.ಎಸ್.ಪುಟ್ಟರಾಜು ಅವರಿಗೆ.

ಮೇಲುಕೋಟೆ ಶಾಸಕರು

ವರ್ಷ	ಹೆಸರು	ಪಕ್ಷ
1952	ಬಿ.ವೈ.ನೀಲೇಗೌಡ	ಕಾಂಗ್ರೆಸ್
1957	ಬಿ.ಚಾಮಯ್ಯ	ಪ್ರಜಾ ಸೋಷಲಿಸ್ಟ್
1962	ಬಿ.ವೈ.ನೀಲೇಗೌಡ	ಕಾಂಗ್ರೆಸ್
1967	ಎನ್.ಎ.ಚನ್ನೇಗೌಡ	ಪಕ್ಷೇತರ
1972	ಡಿ.ಹಲಗೇಗೌಡ	ಕಾಂಗ್ರೆಸ್
1978	ಕೆ.ಆರ್.ರಾಜಗೋಪಾಲ್	ಜನತಾ ಪಕ್ಷ
1983	ಕೆ.ಕೆಂಪೇಗೌಡ	ಜನತಾ ಪಕ್ಷ
1985	ಕೆ.ಕೆಂಪೇಗೌಡ	ಪಕ್ಷೇತರ
1989	ಡಿ.ಹಲಗೇಗೌಡ	ಕಾಂಗ್ರೆಸ್
1994	ಕೆ.ಎಸ್.ಪುಟ್ಟಣ್ಣಯ್ಯ	ರೈತಸಂಘ
1999	ಕೆ.ಕೆಂಪೇಗೌಡ	ಕಾಂಗ್ರೆಸ್
2004	ಸಿ.ಎಸ್.ಪುಟ್ಟರಾಜು	ಜೆಡಿಎಸ್
2008	ಸಿ.ಎಸ್.ಪುಟ್ಟರಾಜು	ಜೆಡಿಎಸ್
2013	ಕೆ.ಎಸ್.ಪುಟ್ಟಣ್ಣಯ್ಯ	ರೈತಸಂಘ
2018	ಸಿ.ಎಸ್.ಪುಟ್ಟರಾಜು	ಜೆಡಿಎಸ್

ಮಿಂಚಿ ಮರೆಯಾದ ಬಿ.ರೇವಣ್ಣ



2018ರ ಚುನಾವಣೆಯ ಕಾಂಗ್ರೆಸ್‌ನ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಸಮಾಜ ಸೇವಕ ಬಿ.ರೇವಣ್ಣ, ಚುನಾವಣೆ ಬಳಿಕವೂ ಕ್ಷೇತ್ರದಲ್ಲಿ ಅಬ್ಬರಿಸಿದ್ದರೂ, 2023ರ ಚುನಾವಣೆಯಲ್ಲಿ ನಾನೇ ಅಭ್ಯರ್ಥಿ ಎಂದು ಸಹ ಘೋಷಿಸಿಕೊಂಡಿದ್ದರು. ಆದರೆ ಪ್ರಸ್ತುತ ಕ್ಷೇತ್ರದಿಂದ ಮರೆಯಾಗಿದ್ದಾರೆ. 2018ರ ಚುನಾವಣೆ ಒಂದು ವರ್ಷ ಇರುವಾಗಲೇ ಕಬಡ್ಡಿ ಪಂದ್ಯ ಆಯೋಜನೆ ಸೇರಿದಂತೆ ಕ್ಷೇತ್ರದಲ್ಲಿ ಸಮಾಜ ಸೇವೆ ಮಾಡುತ್ತಾ ಓಡಾಡುತ್ತಿದ್ದ ಅವರಿಗೆ, ಕಾಂಗ್ರೆಸ್ ಟಿಕೆಟ್ ನೀಡದೇ ರೈತ ಸಂಘದ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಿತ್ತು. ಇದರಿಂದ ಮುನಿಸಿಕೊಂಡು ಚುನಾವಣೆಯಲ್ಲಿ ತಟಸ್ಥವಾಗಿದ್ದ ಅವರು, ಚುನಾವಣೆ ಮುಗಿದ ಬಳಿಕ ಕ್ಷೇತ್ರದಲ್ಲಿ ಮತ್ತೆ ಕ್ರಿಯಾಶೀಲರಾಗಿದ್ದರು. ಕೊರೊನಾ ಸಂದರ್ಭ ಕ್ಷೇತ್ರವ್ಯಾಪ್ತಿ ಫುಡ್‌ಕಿಟ್, ಹೆಲ್ತ್ ಕಿಟ್ ಹಂಚಿ, ರೋಗಿಗಳಿಗಾಗಿ ಉಚಿತ ಆಂಬುಲೆನ್ಸ್ ಸಹ ನೀಡಿದ್ದರು. ಬಳಿಕ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ನಾನೇ ಅಭ್ಯರ್ಥಿ ಎಂದು ಹೇಳುತ್ತಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಅವರನ್ನು ಕರೆಸಿ, ಬೃಹತ್ ಸಮಾವೇಶ ಮಾಡಿದ್ದ ಅವರು, ಇದುವರೆಗೂ ಕ್ಷೇತ್ರದಲ್ಲಿ ಮತ್ತೆ ಕಾಣಿಸಿಕೊಂಡಿಲ್ಲ. ಅಲ್ಲದೇ ಕಾಂಗ್ರೆಸ್ ಟಿಕೆಟ್‌ಗೂ ಅರ್ಜಿ ಸಲ್ಲಿಸಿಲ್ಲ.

ನಾಗಮಂಗಲದಲ್ಲಿ ಶ್ರೀಗಂಧ ಕಳ್ಳರಿಗೆ ಗುಂಡೇಟು

ಮಂಡ್ಯ, ಡಿ.1– ನಾಗಮಂಗಲ ತಾಲೂಕಿನ ಹೆಚ್.ಎನ್. ಕಾವಲ್ ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿ ಶ್ರೀಗಂಧ ಮರಗಳನ್ನು ಕಡಿಯುತ್ತಿದ್ದವರ ಮೇಲೆ ಅರಣ್ಯಾಧಿಕಾರಿಗಳು ಗುಂಡೇಟಿನ ದಾಳಿ ನಡೆಸಿದ್ದಾರೆ.

ಅಪ್ಪ– ಮಕ್ಕಳೇ ಶ್ರೀಗಂಧ ಕಳವಿಗೆ ಯತ್ನಿಸಿ ಅಪ್ಪ ಅರಣ್ಯಾಧಿಕಾರಿಗಳ ಗುಂಡೇಟಿಗೆ ಒಳಗಾಗಿ ತೀವ್ರ ಗಾಯಗೊಂಡರೆ, ಆತನ ಇಬ್ಬರು ಮಕ್ಕಳು ಸೆರೆಯಾಗಿದ್ದಾರೆ. ಇವರೊಂದಿಗೆ ಬಂದಿದ್ದ ಮತ್ತಿಬ್ಬರು ಪರಾರಿಯಾಗಿದ್ದಾರೆ. ಹಾಸನ ಜಿಲ್ಲೆ ಬೇಲೂರು ತಾಲೂಕಿನ ಗೆಂಡೆಹಳ್ಳಿಯ ಗೋವಿಂದಪ್ಪ ಗುಂಡೇಟಿನಿಂದ ತೀವ್ರವಾಗಿ ಗಾಯಗೊಂಡಿದ್ದು, ಅವನ ಸ್ಥಿತಿ ಗಂಭೀರವಾಗಿದೆ. ಗೋವಿಂದಪ್ಪನ ಮಕ್ಕಳಾದ ಶಂಕರ್ ಮತ್ತು ಕುಮಾರ್ ಬಂಧಿತ ಆರೋಪಿಗಳಾಗಿದ್ದು, ಗುಂಡೇಟಿಗೆ ಒಳಗಾಗಿರುವ ಗೋವಿಂದಪ್ಪನನ್ನು ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವರ: ತಾಲೂಕಿನ ಹೆಚ್.ಎನ್.ಕಾವಲ್ ಅರಣ್ಯ ಪ್ರದೇಶವನ್ನು ಬುಧವಾರ ಸಂಜೆ ಅತಿಕ್ರಮವಾಗಿ ಪ್ರವೇಶಿಸಿದ ಗೋವಿಂದಪ್ಪ ಶಂಕರ, ಕುಮಾರ ಹಾಗೂ ಇನ್ನಿತರರು ಶ್ರೀಗಂಧ ಮರ ಕಡಿಯುವುದರಲ್ಲಿ ನಿರತರಾಗಿದ್ದರು ಎನ್ನಲಾಗಿದೆ ಈ ಬಗ್ಗೆ ಮಾಹಿತಿ ತಿಳಿದು ನಾಗಮಂಗಲ ಉಪ ವಲಯ ಅರಣ್ಯಾಧಿಕಾರಿ ಮಂಜು ನೇತೃತ್ವದಲ್ಲಿ 10 ಮಂದಿ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದ್ದಾರೆ. ಅರಣ್ಯಾಧಿಕಾರಿಗಳು ದಾಳಿ ನಡೆಸಿದ ವೇಳೆ ಬೆಚ್ಚಿಬಿದ್ದ ಆರೋಪಿಗಳು ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದು, ಈ ಸಮಯದಲ್ಲಿ ಅವರು ತಪ್ಪಿಸಿಕೊಳ್ಳದಂತೆ ಅರಣ್ಯ ಇಲಾಖೆಯವರು ಸುತ್ತುವರಿದು ಶರಣಾಗುವಂತೆ ಆರೋಪಿಗಳಿಗೆ ಸೂಚಿಸಿದ್ದರು ಎನ್ನಲಾಗಿದೆ. ಅರಣ್ಯಾಧಿಕಾರಿಗಳ ಮಾತಿಗೆ ಮಣಿಯದ ಆರೋಪಿಗಳು ತಪ್ಪಿಸಿಕೊಳ್ಳುವ ಸಲುವಾಗಿ ಅರಣ್ಯ ಇಲಾಖೆ ಗಾರ್ಡ್ ಸಾಕಯ್ಯ ಎಂಬಾತನ ಮೇಲೆ ಗೋವಿಂದಪ್ಪ ಮಚ್ಚನ್ನು ಬೀಸಿದ್ದಾನೆ. ಈ ದಾಳಿಯಲ್ಲಿ ಸಾಕಯ್ಯ ಗಾಯಗೊಂಡಿದ್ದು, ಈ ವೇಳೆ ಉಪ ವಲಯ ಅರಣ್ಯಾಧಿಕಾರಿ ಮಂಜು ಹಾರಿಸಿದ ಗುಂಡು ಗೋವಿಂದಪ್ಪನಿಗೆ ತಗುಲಿ ಅಲ್ಲೇ ಕುಸಿದು ಬಿದ್ದಿದ್ದಾನೆ. ಅಪ್ಪನಿಗೆ ಗುಂಡೇಟು ಬಿದ್ದಿದ್ದರಿಂದ ಭಯಭೀತರಾದ ಮಕ್ಕಳಾದ ಶಂಕರ ಮತ್ತು ಕುಮಾರ ಅಪ್ಪನ ರಕ್ಷಣೆಗೆ ಧಾವಿಸಿದ ವೇಳೆ ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ. ಇವರೊಂದಿಗೆ ಬಂದಿದ್ದ ಉಳಿದ ಆರೋಪಿಗಳು ಪರಾರಿಯಾಗಿದ್ದು, ಅವರಿಗಾಗಿ ಅರಣ್ಯಾಧಿಕಾರಿಗಳು ಶೋಧ ಕಾರ್ಯ ನಡೆಸುತ್ತಿದ್ದಾರೆ. ಅರಣ್ಯ ಇಲಾಖೆ ಪ್ರಕರಣ ದಾಖಲಿಸಿಕೊಂಡಿದೆ.

ಕ್ರೆಡಲ್ ಅಧಿಕಾರಿ ನಿಗೂಢ ಸಾವಿನ ಪ್ರಕರಣ

ಮಕ್ಕಳ ಕಲ್ಯಾಣ ಸಮಿತಿಯಿಂದ ಪುತ್ರನೊಂದಿಗೆ ಸಮಾಲೋಚನೆ



ಮೈಸೂರು, ಡಿ.1(ಆರ್‌ಕೆ)–ಕ್ರೆಡಲ್ ಅಧಿಕಾರಿ ಡಿ.ಕೆ.ದಿನೇಶ್ ಕುಮಾರ್ ಸಂಶಯಾಸ್ಪದ ಸಾವಿನ ಪ್ರಕರಣ ಸಂಬಂಧ ತನಿಖೆ ಮುಂದುವರಿಸಿರುವ ಸರಸ್ವತಿಪುರಂ ಠಾಣೆ ಪೊಲೀಸರು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ(CWC) ಸದಸ್ಯರಿಂದ ಆಸ್ಪತ್ರೆಯಲ್ಲಿರುವ ಪುತ್ರ ಧನುಷ್‌ನೊಂದಿಗೆ ಆಪ್ತ ಸಮಾಲೋಚನೆ ನಡೆಸಿದರು.

ಘಟನೆ ಬೆಳಕಿಗೆ ಬಂದ ದಿನದಿಂದಲೂ ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ದಿನೇಶ್ ಕುಮಾರ್ ಪತ್ನಿ ಆಶಾ ಮತ್ತು ಪುತ್ರ ಧನುಷ್, ಪ್ರಕರಣ ಕುರಿತು ಪೊಲೀಸರಿಗೆ ನೀಡಿರುವ ಹೇಳಿಕೆಗಳು ತಾಳೆಯಾಗದಿರುವುದರಿಂದ ಪೊಲೀಸರು ಸಂಬಂಧಪಟ್ಟ ತಜ್ಞರಿಂದ ಆಪ್ತ ಸಮಾಲೋಚನೆ ಮೂಲಕ ನಿಜ ಸಂಗತಿ ತಿಳಿಯಲು ಯತ್ನಿಸುತ್ತಿದ್ದಾರೆ. ಇಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಿಂದ ಆಸ್ಪತ್ರೆಯಲ್ಲಿ ಧನುಷ್‌ನನ್ನು ಆಪ್ತ ಸಮಾಲೋಚನೆ ಮಾಡಿಸಲಾಯಿತಾದರೂ, ಮೊದಲ ದಿನ ನೀಡಿದ ಹೇಳಿಕೆ ಬಿಟ್ಟು ಆತ ಬೇರೆ ಏನನ್ನೂ ಹೇಳುತ್ತಿಲ್ಲ ಎನ್ನಲಾಗಿದೆ. ನಾಳೆ(ಡಿ.2) ಕೆ.ಆರ್.ಆಸ್ಪತ್ರೆಯ ಮಾನಸಿಕ ತಜ್ಞ ವೈದ್ಯರಿಂದ (ಸೈಕಿಯಾಟ್ರಿ) ಆಶಾರನ್ನು ಆಪ್ತ ಸಮಾಲೋಚನೆಗೊಳಪಡಿಸಿ ಅಗತ್ಯ ಮಾಹಿತಿ ಕಲೆ ಹಾಕಲು ಪೊಲೀಸರು ಪ್ರಯತ್ನಿಸುತ್ತಿದ್ದಾರೆ. ಮರಣೋತ್ತರ ಪರೀಕ್ಷೆ ಮತ್ತು ಎಫ್‌ಎಸ್‌ಎಲ್ ರಿಪೋರ್ಟ್ ಬರಲು ಇನ್ನೂ ಎರಡು ದಿನ ಬೇಕಾಗಬಹುದು. ಅಲ್ಲಿಯವರೆಗೆ ಆಶಾ ಮತ್ತು ಧನುಷ್‌ರಿಂದ ಸಾಧ್ಯವಾದಷ್ಟು ಮಾಹಿತಿ ಸಂಗ್ರಹಿಸಿ, ತನಿಖೆಗೆ ಪೂರಕ ಸಾಕ್ಷ್ಯಗಳನ್ನು ಸಂಗ್ರಹಿಸಲು ಪೊಲೀಸರು ಮುಂದಾಗಿದ್ದಾರೆ.

ದಿನೇಶ್ ಕುಮಾರ್ ಸಾವನ್ನಪ್ಪಿರುವುದು ಸೋಮವಾರ ಬೆಳಕಿಗೆ ಬಂದಾಗ ಮೃತದೇಹ ಕೊಳೆತ ಸ್ಥಿತಿಯಲ್ಲಿದ್ದರಿಂದ ಅವರು ಒಂದೂವರೆ ದಿನದ ಹಿಂದೆಯೇ ಮೃತಪಟ್ಟಿರಬಹುದೆಂದು ಶಂಕಿಸಲಾಗಿತ್ತು. ಆದರೆ, ಪತ್ನಿ–ಪುತ್ರ ಹೇಳಿಕೆಯಲ್ಲಿ ಭಾನುವಾರ ರಾತ್ರಿ ಊಟ ಮಾಡಿ ಮಲಗಿದ್ದರು. ಬೆಳಗ್ಗೆ ನೋಡಿದಾಗ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರಿಂದ ಆಸ್ಪತ್ರೆಗೆ ಕರೆದೊಯ್ದೆವು ಎಂದು ತಿಳಿಸಿರುವುದು ಸಂಶಯಕ್ಕೆ ಕಾರಣವಾಗಿದೆ.

ದಿನೇಶ್ ಕುಮಾರ್ ಮೃತದೇಹದ ಸ್ಥಿತಿ ನೋಡಿದಾಗ ಭಾನುವಾರ ಮುಂಜಾನೆಯೇ ಸಾವನ್ನಪ್ಪಿರುವ ಹಾಗೆ ಕಾಣಿಸುತ್ತದೆ. ಆದರೆ ಪತ್ನಿ, ಪುತ್ರ ಒಂದೂವರೆ ದಿನ ಏಕೆ ಮಾಹಿತಿ ತಿಳಿಸಿಲ್ಲ ಎಂಬ ಅನುಮಾನ ಮೂಡತೊಡಗಿದೆ. ದೇಹದ ಮೇಲೆ ಯಾವುದೇ ಗಾಯಗಳಿಲ್ಲದಿದ್ದುದು ಮತ್ತಷ್ಟು ಅನುಮಾನಕ್ಕೆ ಕಾರಣವಾಗಿದೆ.

ಉದ್ಯೋಗಾಕಾಂಕ್ಷಿಗಳು, ಉದ್ಯೋಗದಾತರಿಗೆ ಸಂಪರ್ಕ ಸೇತುವೆ ಸ್ಕಿಲ್ ಕನೆಕ್ಟ್ ಪೋರ್ಟಲ್‌ಗೆ ಚಾಲನೆ



ಬೆಂಗಳೂರು, ಡಿ.1(ಕೆಎಂಶಿ)–ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರನ್ನು ಬೆಸೆಯುವ ಸ್ಕಿಲ್ ಕನೆಕ್ಟ್ ಪೋರ್ಟಲ್‌ಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ.

ಚಾಲನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಾಹಿತಿ ತಂತ್ರಜ್ಞಾನ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ, 'ಸುಶಾಸನ' ಎನ್ನುವುದು ಹೊಸ ರಾಜಕೀಯ ಸಂಸ್ಕೃತಿಯಾಗಿದೆ. ಇದು ಕೇವಲ ಒಂದು ದಿನಕ್ಕೆ ಸೀಮಿತವಾಗದೆ ನಿರಂತರವಾಗಿ ನಡೆಯಬೇಕು. ಇದು ಸಾರ್ವಜನಿಕ ಸೇವೆಗಳನ್ನು ಜನರ ಮನೆ ಬಾಗಿಲಿಗೇ ಕೊಂಡೊಯ್ಯುವ ಪ್ರಾಮಾಣಿಕ ಪ್ರಯತ್ನವಾಗಿದೆ. ಇದರಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಒತ್ತು ಕೊಡಲಾಗಿದೆ ಎಂದರು.

ಸುಶಾಸನ ಬರಬೇಕೆಂದರೆ ಗುಣಮಟ್ಟದ ಶಿಕ್ಷಣ ಅತ್ಯಗತ್ಯವಾಗಿದೆ. ಹೀಗಾಗಿ ಎನ್‌ಇಪಿ ಅನುಷ್ಠಾನದ ಮೂಲಕ ಉನ್ನತ ಶಿಕ್ಷಣದಲ್ಲಿ ಸುಧಾರಣೆ ತರಲಾಗುತ್ತಿದೆ. ಇದರ ಜತೆಗೆ ಈಗ ಸುಶಾಸನವೂ ಸೇರಿಕೊಂಡಿದೆ. ಇದರ ಭಾಗವಾಗಿ ಡಿಗ್ರಿ ಕಾಲೇಜು, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರಣಿ ನೇರ ಸಂವಾದಗಳನ್ನು ನಡೆಸಲಾಗುವುದು ಎಂದರು.

ಇದಲ್ಲದೆ ವಿ.ವಿ.ಗಳಲ್ಲಿ ಆನ್‌ಲೈನ್ ಡಿಜಿಟಲ್ ಕಲಿಕೆ ಮತ್ತು ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ಇದರಂತೆ, 2023ರ ಮಾರ್ಚ್ ವೇಳೆಗೆ ಪ್ರತಿ ವಿ.ವಿ.ಯಲ್ಲೂ ಕನಿಷ್ಠಪಕ್ಷ ಒಂದು ಡಿಗ್ರಿ ಕೋರ್ಸಾದರೂ ಆನ್‌ಲೈನ್ ರೂಪದಲ್ಲಿ ಆರಂಭವಾಗಲಿದೆ. ಹಾಗೆಯೇ, ಈ ತಿಂಗಳ ಕೊನೆಯ ವೇಳೆಗೆ ಪ್ರತಿ ವಿವಿಯೂ ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ತಮ್ಮನ್ನು ನೋಂದಾಯಿಸಿಕೊಳ್ಳಬೇಕು. ಜತೆಗೆ 3 ತಿಂಗಳಲ್ಲಿ ಕನಿಷ್ಠ ಪಕ್ಷ 5 ಉದ್ಯಮ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಅವರು ವಿವರಿಸಿದರು. ಆಧುನಿಕ ಜಗತ್ತಿನಲ್ಲಿ ಯುವಜನರಲ್ಲಿ ಕೌಶಲ್ಯ ಕಲಿಕೆ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯ ಸ್ಕಿಲ್ ಕನೆಕ್ಟ್ ಪೋರ್ಟಲ್‌ಗೆ ಹೊಸ ರೂಪ ಕೊಡಲಾಗಿದೆ. ಇದರಿಂದ ಉದ್ಯೋಗಾಕಾಂಕ್ಷಿ ಮತ್ತು ಉದ್ಯೋಗದಾತರ ನಡುವೆ ಸಕ್ರಿಯ ಸಂಬಂಧ ಉಂಟಾಗಲಿದೆ. ಇನ್ನೊಂದೆಡೆಯಲ್ಲಿ, ಐಟಿಐ ಅಂಕಪಟ್ಟಿಗಳ ಡಿಜಿಟಲೀಕರಣ ಮತ್ತು ಅವುಗಳನ್ನು ರಾಷ್ಟ್ರೀಯ ಶೈಕ್ಷಣಿಕ ಕೋಠಿಗೆ ಅಪ್‌ಲೋಡ್ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ. ಒಟ್ಟು 60 ಸಾವಿರ ಐಟಿಐ ವಿದ್ಯಾರ್ಥಿಗಳಿಗೆ ಮೈಕ್ರೋಸಾಫ್ಟ್ ಕಂಪನಿಯ ವತಿಯಿಂದ ಉತ್ಕೃಷ್ಟ ತರಬೇತಿ ಕೊಡಿಸಲಾಗುವುದು ಎಂದು ಅಶ್ವತ್ಥನಾರಾಯಣ ವಿವರಿಸಿದರು. ಇದರಡಿಯಲ್ಲಿ ಇಂಗ್ಲಿಷ್ ಕಲಿಕೆ ಲ್ಯಾಬ್‌ಗಳ ಸ್ಥಾಪನೆ, ಜಪಾನಿನಲ್ಲಿ ಉದ್ಯೋಗಾವಕಾಶ ದೊರಕಿಸಿ ಕೊಡಲು ಜಪಾನಿ ಭಾಷೆಯ ಕಲಿಕೆಗೆ ವ್ಯವಸ್ಥೆ, ಲೋಕೋಸ್ ತಂತ್ರಾಂಶದ ಮೂಲಕ ಸ್ವಸಹಾಯ ಸಂಘಗಳ ಮಾಹಿತಿ ಮತ್ತು ಹಣಕಾಸು ವ್ಯವಹಾರಗಳಲ್ಲಿ ಪಾರದರ್ಶಕತೆ ತರಲಾಗುವುದು. ಜತೆಗೆ ಬೀದಿಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಮಿಗಿಲಾಗಿ 13,500 ಮಹಿಳಾ ಉದ್ಯಮಿಗಳಿಗೆ ಸಿ–ಡಾಕ್ ಮೂಲಕ ಪ್ರೇರಣಾ ಶಿಬಿರಗಳನ್ನು ಆಯೋಜಿಸಲಾಗುವುದು. ಒಟ್ಟಿನಲ್ಲಿ 10 ಸಾವಿರ ಜನರಿಗೆ ಏಕಕಾಲದಲ್ಲಿ ನೇಮಕಾತಿ ಪತ್ರಗಳನ್ನು ನೀಡಲಾಗುವುದು ಎಂದು ಅವರು ನುಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಬಾಗಲಕೋಟೆ, ಕೊಪ್ಪಳ, ದಾವಣಗೆರೆಗಳಲ್ಲಿ ನಿರ್ಮಿಸುತ್ತಿರುವ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಗದಗಿನ ಮಿನಿ ತಾರಾಲಯವನ್ನು ಸದ್ಯದಲ್ಲೇ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವುದು.

ಇಂದು ಜೆಕೆ ಟೈರ್ (ವಿಕ್ರಾಂತ್) ಬೆಳ್ಳಿಹಬ್ಬ

ಮೈಸೂರು, ಡಿ.1(ಎಂಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜೆಕೆ ಟೈರ್ (ವಿಕ್ರಾಂತ್) ಆವರಣದಲ್ಲಿ ನಾಳೆ (ಡಿ.2) ಬೆಳ್ಳಿಹಬ್ಬ ಸಂಭ್ರಮ ಏರ್ಪಡಿ ಸಿದ್ದು, ರಾಜ್ಯಪಾಲ ತಾವರಚಂದ್ ಗೆಹ್ಲೋಟ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಸಂಜೆ 4 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಜೆಕೆ ಟೈರ್ ಅಧ್ಯಕ್ಷ ಹಾಗೂ ನಿರ್ವಹಣೆ ನಿರ್ದೇಶಕ ಡಾ.ರಘುಪತಿ ಸಿಂಘಾನಿಯಾ ಉಪಸ್ಥಿತರಿರಲಿದ್ದು, ಸಂಜೆ 5.15ರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ಸಿಲಿಕಾನ್ ಸಿಟಿಯಲ್ಲಿ ಚಿರತೆ ಪ್ರತ್ಯಕ್ಷ: ಹೆಚ್ಚಿದ ಆತಂಕ!

ಬೆಂಗಳೂರು, ಡಿ.1– ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಜನರಲ್ಲಿ ಆತಂಕ ಹೆಚ್ಚಾಗಿದೆ. ತುರಹಳ್ಳಿ ಅರಣ್ಯ ಪ್ರದೇಶ ಮತ್ತು ದೇವನಹಳ್ಳಿ ಸುತ್ತಮುತ್ತ ಚಿರತೆ ಪ್ರತ್ಯಕ್ಷವಾಗಿರುವುದು ಜನರಲ್ಲಿ ಭೀತಿಯನ್ನು ಮೂಡಿಸಿದೆ.

ನಾಲ್ಕು ಚಿರತೆಗಳು ಓಡಾಡುತ್ತಿರುವುದು ಸಿಸಿಟಿವಿಗಳಲ್ಲಿ ಪತ್ತೆಯಾಗಿದೆ ಎಂದು ಸ್ಥಳೀಯ ನಿವಾಸಿಗಳು ಹೇಳುತ್ತಿದ್ದಾರೆ. ತುರಹಳ್ಳಿ ಅರಣ್ಯ ಪ್ರದೇಶದಲ್ಲಿ ಬೋನ್ ಇಡುವ ಮೂಲಕ ಚಿರತೆ ಸೆರೆಗೆ ಅರಣ್ಯ ಅಧಿಕಾರಿಗಳು ಮುಂದಾಗಿದ್ದಾರೆ.

ಬೋನ್‌ನಲ್ಲಿ ನಾಯಿಮರಿ ಕಟ್ಟಿಹಾಕಿ ಚಿರತೆ ಸೆರೆಗೆ ಪ್ರಯತ್ನಿಸಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಬಳಿ ಖಾಸಗಿ ಕಾರ್ಖಾನೆ ಬಳಿ ಕೂಡ 2 ದಿನದಿಂದ ಚಿರತೆ ಓಡಾಟ ನಡೆಸಿರುವುದು ಪತ್ತೆಯಾಗಿದೆ. ಈ ಪ್ರದೇಶಗಳ ನಿವಾಸಿಗಳು ಎಚ್ಚರಿಕೆಯಿಂದ ಓಡಾಡುವಂತೆ ಅರಣ್ಯ ಇಲಾಖೆ ತಿಳಿಸಿದೆ.

ರೌಡಿಗಳಿಗೆ ಬಿಜೆಪಿ ಮಣೆ ಹಾಕಲ್ಲ

● ಮುಖ್ಯಮಂತ್ರಿ ಬೊಮ್ಮಾಯಿ ಸ್ಪಷ್ಟನೆ ● ಗಡಿ ನಿಲುವಿನಲ್ಲಿ ಬದಲಾವಣೆ ಇಲ್ಲ



ಬೆಂಗಳೂರು, ಡಿ.1(ಕೆಎಂಶಿ)–ಭೂಗತ ದೊರೆಗಳು ಮತ್ತು ರೌಡಿಗಳಿಗೆ ಪಕ್ಷ ಮಣೆ ಹಾಕುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ. ವಿಧಾನಸೌಧದ ನಿರ್ಮಾತೃ ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೌಡಿಗಳನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಂತಹವರಿಗೆ ಟಿಕೆಟ್ ನೀಡುವ ಪ್ರಸ್ತಾವವೂ ಇಲ್ಲ ಎಂದು ತಿಳಿಸಿದ್ದಾರೆ.


ಇತ್ತೀಚೆಗೆ ರೌಡಿ ಶೀಟರ್‌ನಲ್ಲಿರುವ ಸೈಲೆಂಟ್ ಸುನೀಲ ಸೇರಿದಂತೆ 28 ಮಂದಿ ಯನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲು ಸಿದ್ಧತೆ ನಡೆದಿತ್ತು. ಸುನೀಲ್ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಬಿಜೆಪಿ ಸಂಸದರು, ಶಾಸಕರು, ಸಚಿವರು ಭಾಗಿಯಾಗಿದ್ದರು. ಇದನ್ನು ಪ್ರಶ್ನೆ ಮಾಡಿದಾಗ ಮುಖ್ಯಮಂತ್ರಿಯವರು ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದರು. ಸಾರ್ವ ಜನಿಕ ವಲಯದಲ್ಲಿ ಈ ವಿಷಯ ಭಾರೀ ಚರ್ಚೆಗೆ ಎಡೆಮಾಡಿ ಕೊಡುತ್ತಿದ್ದಂತೆ ತಮ್ಮ ನಿಲುವನ್ನು ಬದಲಿಸಿಕೊಂಡ ಮುಖ್ಯಮಂತ್ರಿಯವರು ರೌಡಿಗಳಿಗೆ ಪಕ್ಷದಲ್ಲಿ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು. ರೌಡಿಗಳ ಸಹವಾಸದಲ್ಲಿ ಕೆಲವು ನಾಯಕರಿದ್ದಾರೆ ಎಂಬ ವಿಚಾರದ ಬಗ್ಗೆ ಮುಖ್ಯಮಂತ್ರಿಯವರು ಹೆಚ್ಚಿಗೆ ಮಾತನಾಡಲು ಹೋಗದೇ ರೌಡಿ ಶೀಟರ್‌ಗಳ ಬಗ್ಗೆ ಪಕ್ಷ ಈ ಹಿಂದೆ ಯಾವ ನಿಲುವನ್ನು ಹೊಂದಿತ್ತೋ ಅದೇ ನಿಲುವನ್ನು ಈಗಲೂ ಮುಂದುವರೆಸಲಿದೆ. ಸಮಾಜಘಾತುಕರಿಗೆ ನಮ್ಮಲ್ಲಿ ಅವಕಾಶವಿಲ್ಲ ಎಂದರು.

ಗಡಿ ನಿಲುವು ಸ್ಪಷ್ಟ: ಸುಪ್ರೀಂಕೋರ್ಟ್‌ನಲ್ಲಿ ಗಡಿ ವಿವಾದದ ಪ್ರಕರಣ ವಿಚಾರಣೆಗೆ ಬರಲಿದ್ದು, ಕರ್ನಾಟಕದ ನಿಲುವು ಸ್ಪಷ್ಟವಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಮಹಾರಾಷ್ಟ್ರದ ಅರ್ಜಿ ಮೈಂಟೆನಬಲ್ ಅಲ್ಲ ಎನ್ನುವುದು ನಮ್ಮ ನಿಲುವು. ಅದನ್ನೇ ನಮ್ಮ ವಕೀಲರು ವಾದ ಮಂಡಿಸಿದ್ದಾರೆ. ನಮ್ಮ ನಿಲುವು ಸಂವಿಧಾನಬದ್ಧ ಹಾಗೂ ಕಾನೂನಾತ್ಮಕವಾಗಿದೆ. ಎಲ್ಲಾ ಅಂಶಗಳ ಬಗ್ಗೆ ವಕೀಲರು ವಾದ ಮಾಡಲಿದ್ದಾರೆ ಎಂದರು.

ವಕ್ಫ್ ಮಂಡಳಿ ಅಧ್ಯಕ್ಷರು ಮುಸ್ಲಿಂ ಮಹಿಳೆಯರಿಗೆ ಪ್ರತ್ಯೇಕವಾಗಿ ಕಾಲೇಜು ತೆರೆಯಲಿದ್ದು ಹಿಜಾಬ್ ಧರಿಸಲು ಅನುಮತಿ ನೀಡುವುದಾಗಿ ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಈ ಬಗ್ಗೆ ಸರ್ಕಾರದಲ್ಲಿ ಚರ್ಚೆಯಾಗಿಲ್ಲ. ಇದು ಅವರ ವೈಯಕ್ತಿಕ ಅಭಿಪ್ರಾಯವಿರಬಹುದು. ಇದು ನಮ್ಮ ಸರ್ಕಾರದ ನಿಲುವಲ್ಲ. ವಕ್ಫ್ ಮಂಡಳಿ ಅಧ್ಯಕ್ಷರು ಈ ಬಗ್ಗೆ ಸರ್ಕಾರದೊಂದಿಗೆ ಚರ್ಚೆ ಮಾಡಬೇಕು ಎಂದರು.

ಇಂದು, ನಾಳೆ ಶಾಲೆಗಳಲ್ಲಿ ಪ್ರಖ್ಯಾತ ವಿಜ್ಞಾನಿಗಳಿಂದ 'ರಸಾಯನಶಾಸ್ತ್ರ ಪ್ರಯೋಗ' ಕಾರ್ಯಾಗಾರ


ಸಮಿತಾ ಮೈತ್ರಾ


ಉದಯ್ ಮೈತ್ರಾ

ಮೈಸೂರು, ಡಿ.1(ಎಂಕೆ)– ವೈಟಿ ಹಾಗೂ ಮಾಧುರಿ ತಥಾಚಾರಿ ಅವರ ಭ್ರಮರ ಟ್ರಸ್ಟ್ ವತಿಯಿಂದ ಡಿ.2 ಮತ್ತು 3ರಂದು ಪ್ರತಿಷ್ಠಿತ ವಿಜ್ಞಾನಿಗಳಾದ ಪ್ರೊ.ಸಮಿತಾ ಮೈತ್ರಾ ಮತ್ತು ಪ್ರೊ.ಉದಯ್ ಮೈತ್ರಾ ಅವರಿಂದ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಆಸಕ್ತಿಯನ್ನು ಹುಟ್ಟುಹಾಕಲು ಪ್ರಮುಖ ನಾಲ್ಕು ವಿದ್ಯಾಸಂಸ್ಥೆಗಳಲ್ಲಿ 'ರಸಾಯನಶಾಸ್ತ್ರ ಪ್ರಯೋಗ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ನಾಳೆ(ಡಿ.2) ಬೆಳಗ್ಗೆ 9 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಚಾ.ನಗರದ ಜೆಎಸ್‌ಎಸ್ ಪಿಯು ಕಾಲೇಜಿನಲ್ಲಿ ಡೆಮೊ ನಡೆಯಲಿದೆ. ಡಿ.3ರಂದು ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಮಾನಸ ಸರೋವರ ಪುಷ್ಕರಿಣಿ ವಿದ್ಯಾಶ್ರಮ ಹಾಗೂ ಬೆಳಗ್ಗೆ 11 ಗಂಟೆಗೆ ಕುವೆಂಪುನಗರದಲ್ಲಿರುವ ವಿಜಯವಿಠಲ ಪ್ರೌಢಶಾಲೆ ಮತ್ತು ಪಿಯು ಕಾಲೇಜಿನಲ್ಲಿ ಕಾರ್ಯಕ್ರಮ ನಡೆಯಲಿದೆ.

ಎಲ್ಲಾ ಧರ್ಮಗಳು ಒಳ್ಳೆಯವೆ; ಆದರೆ ಆಚರಣೆ ಸರಿ ಇಲ್ಲ

ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮೀ ಮುಕ್ತಿದಾನಂದಜೀ ಮಹಾರಾಜ್ ವಿಷಾದ



ಮೈಸೂರು, ಡಿ.1(ಜಿಎ)– ಎಲ್ಲಾ ಧರ್ಮದಲ್ಲಿಯೂ ಒಳ್ಳೆಯ ಸಂಪ್ರದಾಯಗಳಿವೆ. ಆದರೆ ಮನುಷ್ಯನಿಗೆ ಅದನ್ನು ಆಚರಿಸಲು ಬರುತ್ತಿಲ್ಲ ಎಂದು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾ ರಾಜ್ ವಿಷಾಧ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ವಿದ್ಯಾವರ್ಧಕ ಸಂಘದ ವತಿಯಿಂದ ನಗರದ ಗೋಕುಲಂನಲ್ಲಿರುವ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಉಪನಿಷತ್ ಸಂದೇಶ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತಿನ ಸತ್ಯ, ಧರ್ಮ, ಆಚಾರ, ವೈಚಾರಿಕತೆ ಬಗ್ಗೆ ಏನಾದರೂ ಅನುಮಾನವಿದ್ದರೆ, ಉಪನಿಷತ್ ಓದಿದರೆ ಎಲ್ಲದಕ್ಕೂ ಉತ್ತರ ದೊರೆಯುತ್ತದೆ ಎಂದು ವಿವೇಕಾನಂದರು ಹೇಳಿದ್ದಾರೆ. ವಿದ್ಯಾವರ್ಧಕ ಸಂಸ್ಥೆಯು ಸನಾತನ ಸಂಸ್ಕೃತಿ ಸಾರವನ್ನು ಕಲಿಸುವ ಕೆಲಸಕ್ಕೆ ಮುಂದಾಗಿರುವುದು ಉತ್ತಮ ಬೆಳವಣಿಗೆ ಎಲ್ಲಾ ಕಾಲೇಜುಗಳಲ್ಲಿ ಉಪನಿಷತ್ ಬೋಧಿಸುವಂತಾಗಬೇಕು ಎಂದು ಸಲಹೆ ನೀಡಿದರು. ಶಿಕ್ಷಣ ಕ್ಷೇತ್ರದಲ್ಲಿ ಉಪನಿಷತ್ ಒಂದು ಹೊಸ ಅಧ್ಯಾಯವಾಗಿದೆ. ಬ್ರಿಟಿಷರು ನಮಗೆ ನೀಡಿದ ಶಿಕ್ಷಣ ಯಾವ ರೀತಿಯಲ್ಲಿದೆ ಎಂದರೆ ಭಾರತೀಯ ಸಂಸ್ಕೃತಿಯಲ್ಲಿನ ಸಾವಿರಾರು ಚಿಂತನ–ಮಂಥನ, ಸಂಶೋಧನೆಯಿಂದ ಅಮೃತ ಪಾಕವನ್ನು ನಮ್ಮ ಜನರಿಗೆ ನೀಡಿದ್ದಾರೆ. ಅದರ ಬಗ್ಗೆ ನಮಗೆ ತಿಳಿಯದಂತೆ ಮಾಡಿದ್ದಾರೆ. ನಮ್ಮ ಮೂಲ ಬೇರು ಹಾಳಾಗಬೇಕು ಎಂಬುದು ಅವರ ಉದ್ದೇಶವಾಗಿದೆ. ಆದರೆ, ನಾವು ಆ ಬೇರನ್ನು ಇನ್ನೂ ಗಟ್ಟಿಗೊಳಿಸಬೇಕಿದ್ದು, ಅದಕ್ಕೆ ಉಪನಿಷತ್ ಸಹಕಾರಿಯಾಗಲಿದೆ ಎಂದರು.

ಉಪನಿಷತ್ ಎಂಬುದು ಪ್ರಶ್ನೋತ್ತರವಾದ ನಿಷತ್ ಆಗಿದ್ದು, ಮನುಷ್ಯ ನಾನು ಯಾರು ಎಂಬುದರ ಮೂಲಕ ಹುಟ್ಟು–ಸಾವಿನ ಬಗ್ಗೆಯೂ ಪ್ರಶ್ನಿಸುತ್ತದೆ. ಇಂತಹ ವೈಚಾರಿಕತೆಯುಳ್ಳ ಗ್ರಂಥಗಳನ್ನು ಇತ್ತೀಚೆಗೆ ಸುಳಿವಿಲ್ಲದಂತೆ ಪರಿಸ್ಥಿತಿ ನಿರ್ಮಾಣವಾಗಿದೆ. ಅದು ಮತ್ತೆ ಮರುಕಳಿಸುವಂತೆ ಮಾಡಬೇಕು. ನಮ್ಮ ದೇಶದ ಎಲ್ಲಾ ಸಂಸ್ಕೃತಿ, ಧರ್ಮದಲ್ಲಿಯೂ ಒಳ್ಳೆಯ ಸಂಪ್ರದಾಯಗಳಿವೆ. ಅದನ್ನು ಆಚರಿಸಲು ನಮಗೆ ಬರುತ್ತಿಲ್ಲ. ಉಪನಿಷತ್ ಬಗ್ಗೆ ಆಯೋಜಿಸಿರುವ ಕಾರ್ಯಕ್ರಮ ಬಹಳ ಅಪರೂಪವಾಗಿದ್ದು, ಯಾರು ಈ ಅವಕಾಶವನ್ನು ಕಳೆದುಕೊಳ್ಳಬೇಡಿ ಎಂದರು ತಿಳಿಸಿದರು.

ಸಂಸ್ಕೃತ ವಿದ್ವಾಂಸರಾದ ಹೆಚ್.ವಿ. ನಾಗರಾಜ ರಾವ್ ಅವರು ಉಪನಿಷತ್ ಸಂದೇಶದ ಪ್ರವಚನ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ. ಸದಾಶಿವೇಗೌಡ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 2 ಡಿಸೆಂಬರ್ 2022

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಂಗನವಾಡಿ ನೌಕರರ ಪ್ರತಿಭಟನೆ

ಮೈಸೂರು,ಡಿ.1(ಆರ್‌ಕೆಬಿ)-ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ (ಸಿಐಟಿಯು ಸಂಯೋಜಿತ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ನೂರಾರು ಅಂಗನವಾಡಿ ಕಾರ್ಯಕರ್ತೆಯರು ಗುರುವಾರ ರಾಮಸ್ವಾಮಿ ವೃತ್ತದಿಂದ ಡಿಸಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಬಳಿಕ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿದರು.

ಗ್ರಾಚ್ಯುಯಿಟಿ ಪಾವತಿ, ಅಂಗನವಾಡಿ ಕೇಂದ್ರಗಳನ್ನು ಅಕ್ಷರ ಕೇಂದ್ರವಾಗಿ ಮೇಲ್ದರ್ಜೆಗೇರಿಸಬೇಕು. ಅಂಗನವಾಡಿ ಕೇಂದ್ರ ವೇಳಾಪಟ್ಟಿ ಬದಲಾಗಬೇಕು. ದಾಖಲು ಮಾಡುವ ವಿಧಾನ ಬದಲಾಗಬೇಕು. ಅಂಗನವಾಡಿ ನೌಕರರ ಮೇಲೆ ಹೆಚ್ಚುತ್ತಿರುವ ಶಿಸ್ತು ಕ್ರಮ ನಿಲ್ಲಬೇಕು. ಉಚಿತ ಕೆಲಸ ನಿಲ್ಲಿಸಿ, ಸಮಯಕ್ಕೆ ಸರಿಯಾಗಿ ವೇತನ ಪಾವತಿಸಬೇಕು. ನ್ಯಾಯಯುತ ಮುಂಬಡ್ತಿಗಳನ್ನು ಕೊಡಲು ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಇತ್ಯಾದಿ ಬೇಡಿಕೆಗಳ ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.



1972ರ ಗ್ರಾಚ್ಯುಯಿಟಿ ಕಾಯ್ದೆಯಂತೆ ಅಂಗನವಾಡಿ ನೌಕರರು ಗ್ರಾಚ್ಯುಯಿಟಿ ಪಡೆಯಲು ಅರ್ಹರು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಂತೆ ರಾಜ್ಯಾದ್ಯಂತ ಸಾವಿರಾರು ನಿವೃತ್ತಿ ನೌಕರರು ವೈಯಕ್ತಿಕವಾಗಿ ಹಾಗೂ ಅಂಚೆ ಮೂಲಕ ಅರ್ಜಿ ಸಲ್ಲಿಸಿದ್ದಾರೆ. ಗ್ರಾಚ್ಯುಯಿಟಿಗೆ ಸಲ್ಲಿಸಿರುವ ಅರ್ಜಿದಾರರಿಗೆ ಪರಿಹಾರ ನೀಡಲು ಸಚಿವ ಸಂಪುಟ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು. ಸಂಘದ ಜಿಲ್ಲಾ ಕಾರ್ಯಾಧ್ಯಕ್ಷೆ ಲೀಲಾವತಿ, ಪ್ರಧಾನ ಕಾರ್ಯದರ್ಶಿ ಪುಷ್ಪಲತಾ, ಲತಾ, ಲಕ್ಷ್ಮಮ್ಮ, ಜಯಂತಿ, ಹೇಮಾ, ಚಂದ್ರಿಕಾ, ವಸಂತ, ನೀಲಮ್ಮ, ಕಮಲಾಕ್ಷಿ ಪ್ರತಿಭಟನೆಯಲ್ಲಿದ್ದರು.

ಸನ್‌ಪ್ಯೂರ್‌ನಿಂದ ಆನ್‌ಲೈನ್ ಖರೀದಿಗೆ ಪ್ರಪ್ರಥಮ ಇ-ಕಾಮರ್ಸ್ ವೇದಿಕೆಗೆ ಚಾಲನೆ

- ಮೈಸೂರಿನಲ್ಲಿ ಪ್ರಪ್ರಥಮ ಬಾರಿಗೆ ದಕ್ಷಿಣ ಭಾರತದ ಅತೀದೊಡ್ಡ ಅಡುಗೆ ಎಣ್ಣೆ ಬ್ರಾಂಡ್ ಸನ್‌ಪ್ಯೂರ್ ವ್ಯಾಪಕವಾಗಿ ತನ್ನ ಉತ್ಪನ್ನಗಳನ್ನು ಆನ್‌ಲೈನ್ ಖರೀದಿ ಮತ್ತು ಹೋಮ್ ಡೆಲಿವರಿ ಸೇವೆ ಮೂಲಕ ಸುಲಭವಾಗಿ ಗ್ರಾಹಕರಿಗೆ ಒದಗಿಸುತ್ತಿದೆ
- ಆನ್‌ಲೈನ್ ಖರೀದಿಯಲ್ಲಿ ಮೂರು ಗಂಟೆಗಳೊಳಗೆ ತಾಜಾ ಉತ್ಪನ್ನಗಳ ಗ್ಯಾರಂಟಿ ವಿತರಣೆ, ಸನ್‌ಪ್ಯೂರ್‌ನ ಹೊಸ ಇ-ಕಾಮರ್ಸ್ ವೆಬ್‌ಸೈಟ್ ಮೂಲಕ ಖರೀದಿಗಳಿಗೆ ಮಾತ್ರ 'ಪ್ರಾಡಕ್ಟ್ ಕಾಂಬೋ ಆಫರ್' ಲಭ್ಯವಿದೆ.



ಮೈಸೂರು, ಡಿ. 1-ಸನ್‌ಪ್ಯೂರ್, ದಕ್ಷಿಣ ಭಾರತದ ಅತೀದೊಡ್ಡ ಬ್ರಾಂಡೆಡ್ ಅಡುಗೆ ಎಣ್ಣೆಯಾಗಿದ್ದು, ತನ್ನ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಗ್ರಾಹಕರಿಗೆ ಸುಲಭವಾಗಿ ಪೂರೈಸಲು ಪ್ರಪ್ರಥಮವಾಗಿ ಇ-ಕಾಮರ್ಸ್ ವೆಬ್‌ಸೈಟ್ www.mysunpure.inಗೆ ಚಾಲನೆ ನೀಡಿದೆ. ಪ್ರಸ್ತುತ, ಆನ್‌ಲೈನ್ ಖರೀದಿ ಮತ್ತು ಹೋಮ್ ಡೆಲಿವರಿ ಸೇವೆಯು ಮೈಸೂರಿನಲ್ಲಿ ಲಭ್ಯವಿದ್ದು, 2023ರಲ್ಲಿ ಕರ್ನಾಟಕದಾದ್ಯಂತ ಎಲ್ಲಾ ಮಾರುಕಟ್ಟೆಗಳಿಗೆ ಸನ್‌ಪ್ಯೂರ್‌ನ ಆನ್‌ಲೈನ್ ಸೇವೆಗಳನ್ನು ವಿಸ್ತರಿಸುವ ಯೋಜನೆ ಹೊಂದಿದೆ.

ಅಡುಗೆ ಎಣ್ಣೆ ಮತ್ತು ಭಾರತದ ಆಹಾರ ಕಂಪನಿಯ ಇತಿಹಾಸದಲ್ಲೇ ಪ್ರಪ್ರಥಮವಾಗಿ ನೇರ ಖರೀದಿಗೆ ಹಾಗೂ ಅದರ ಉತ್ಪನ್ನಗಳನ್ನು ಗ್ರಾಹಕರ ಮನೆಗಳಿಗೆ ತಲುಪಿಸುವ ವ್ಯವಸ್ಥೆ ಮಾಡಿದೆ. ಇ-ಕಾಮರ್ಸ್‌ನ ಮತ್ತೊಂದು ವಿಶಿಷ್ಟ ಮಾರಾಟದ ಪ್ರಸ್ತಾವನೆ (USP)ಯ ಉಪಕ್ರಮವು ಆನ್‌ಲೈನ್ ಖರೀದಿಗೆ ಮೂರು ಗಂಟೆಯೊಳಗೆ ತಾಜಾ ಉತ್ಪನ್ನಗಳ ವಿತರಣೆ ಖಾತರಿ ಹೊಂದಿದೆ.

ವಿಶೇಷವಾಗಿ, ಸನ್‌ಪ್ಯೂರ್‌ನ ಹೊಸ ಇ-ಕಾಮರ್ಸ್ ವೆಬ್‌ಸೈಟ್ ಮೂಲಕ ಖರೀದಿಗಳಿಗೆ ಮಾತ್ರ 'ಪ್ರಾಡಕ್ಟ್ ಕಾಂಬೋ ಆಫರ್' ಲಭ್ಯವಿದೆ. ಸನ್‌ಪ್ಯೂರ್ ಸನ್‌ಫ್ಲವರ್ ಆಯಿಲ್, ಸನ್‌ಪ್ಯೂರ್ ಫಿಲ್ಟರ್ಡ್ ಗ್ರೌಂಡ್‌ನೆಟ್ ಆಯಿಲ್, ಸನ್‌ಪ್ಯೂರ್ ರೈಸ್ ಬ್ರಾನ್ ಹೆಲ್ತ್, ಸನ್‌ಪ್ಯೂರ್ ಪಾಂಪುರ್ (ಸಂಸ್ಕರಿಸಿದ ಪಾಮೋಲಿನ್ ಆಯಿಲ್), ಸನ್‌ಪ್ಯೂರ್ ಸುಗರ್ (ಸಲ್ಫರ್-ಮುಕ್ತ ಪ್ರಕ್ರಿಯೆ ಮೂಲಕ ಸಂಸ್ಕರಿಸಿದ ಆಯಿಲ್) ಮತ್ತು ಸನ್‌ಪ್ಯೂರ್ ಸ್ವಾದ್ (ಸ್ವಿಸ್ ತಂತ್ರಜ್ಞಾನದ ಮೂಲಕ ಸಂಪೂರ್ಣ ಗೋಧಿ ಅಟ್ಟಾದಿಂದ ತಯಾರಿಸಿದ ಉತ್ಪನ್ನ)ಗಳ ಮೇಲೆ ನಡೆಸುವ ವ್ಯವಹಾರಕ್ಕೆ ಸನ್‌ಪ್ಯೂರ್ ಹಿಂದೆಂದೂ ನೀಡದಂತಹ ಕೊಡುಗೆಗಳನ್ನು ನೀಡುತ್ತಿದೆ.

ಹೊಸದಾಗಿ ಇ-ಕಾಮರ್ಸ್ ವೇದಿಕೆಗೆ ಚಾಲನೆ ನೀಡಿದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡ ಎಂ.ಕೆ.ಅಗ್ರೋಟೆಕ್ (ಸೇಲ್ಸ್ ಮತ್ತು ಆಪರೇಷನ್ಸ್) ಜನರಲ್ ಮ್ಯಾನೇಜರ್ ಗೋಕರಣ್, ಭಾರತದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಸಂಸ್ಕರಿಸಿದ ಸೂರ್ಯಕಾಂತಿ ಎಣ್ಣೆ ತಯಾರಕರಾದ ನಾವು ಕಳೆದ 2 ದಶಕಗಳಿಂದಲೂ ನಮ್ಮ ಗ್ರಾಹಕರಿಂದ ಅಗಾಧ ಪ್ರೀತಿಗೆ ಸಾಕ್ಷಿಯಾಗಿದ್ದೇವೆ. ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ಮತ್ತು ವಿಕಸನಗೊಳ್ಳುತ್ತಿರುವ ಗ್ರಾಹಕರ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಸನ್ ಪ್ಯೂರ್‌ನ ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗೆ ಚಾಲನೆ ನೀಡಿದ್ದೇವೆ.

ಸನ್‌ಪ್ಯೂರ್ ಇ-ಕಾಮರ್ಸ್ ಪ್ಲಾಟ್‌ಫಾರಂನಿಂದ ಗ್ರಾಹಕರೊಂದಿಗೆ ಸಂಬಂಧ ಹೆಚ್ಚಿಸುವ ಮೂಲಕ ತಂತ್ರಜ್ಞಾನ ಮತ್ತು ಸಂಪ್ರದಾಯವನ್ನು ಒಟ್ಟಿಗೆ ಕೊಂಡೊಯ್ಯುವ ಉದ್ದೇಶವನ್ನು ಹೊಂದಿದೆ. ಭವಿಷ್ಯವು ಅತ್ಯಾಕರ್ಷಕವಾಗಿ ಕಾಣುತ್ತದೆ ಎಂದರು.

ಸನ್‌ಪ್ಯೂರ್ ಇತರೆ ಕಂಪನಿಗಳ ಎಣ್ಣೆಗಳಿಗಿಂತ ವ್ಯತ್ಯಾಸವನ್ನು ಹೊಂದಿದೆ. ಭಾರತದ ಏಕೈಕ ರಾಸಾಯನಿಕ ಮುಕ್ತ ಎಣ್ಣೆಯಾಗಿದ್ದು, ಸುಧಾರಿತ ಪ್ಯಾಟೆಂಟೆಡ್ ತಂತ್ರಜ್ಞಾನದೊಂದಿಗೆ ಭೌತಿಕವಾಗಿ ಸಂಸ್ಕರಿಸಿದ ಎಣ್ಣೆಯಾಗಿದೆ. ಸನ್‌ಪ್ಯೂರ್ ಹಾನಿಕಾರಕ ಸಂರಕ್ಷಕಗಳಿಂದ ಮುಕ್ತ ಹೊಂದಿದೆ. ಅಲ್ಲದೆ, ಸಾಮಾನ್ಯವಾಗಿ ಆಹಾರ ಪದಾರ್ಥದಲ್ಲಿ ಉಪಯೋಗಿಸಲಾಗುವ ಟರ್ಟಿಯರಿ ಬ್ಯುಟೈಲ್ಹೈಡ್ರೋಕ್ವಿನೋನ್ (TBHQ) ಹೊಂದಿದ್ದು, ಇದು ಸಮೃದ್ಧವಾಗಿ ವಿಟಮಿನ್ ಎ, ಡಿ ಮತ್ತು ಇ ಹೊಂದಿದೆ.

ಸನ್‌ಪ್ಯೂರ್ ಶುದ್ಧೀಕರಣ ಪ್ರಕ್ರಿಯೆಗಾಗಿ ಆರ್‌ಓ ಪರೀಕ್ಷೆಗೊಳಗಾದ ನೀರನ್ನು ಬಳಸುತ್ತದೆ. ವಿಂಡ್‌ಮಿಲ್ಸ್‌ಗಳಿಂದ ಉತ್ಪಾದಿಸಲಾದ ಶೇ.100 ಹಸಿರು ವಿದ್ಯುತ್ ಬಳಸುತ್ತದೆ. ತಾನು ಉಪಯೋಗಿಸುವುದಕ್ಕಿಂತ ಎಂಟು ಪಟ್ಟು ಹೆಚ್ಚು ಶಕ್ತಿಯನ್ನು ಉತ್ಪಾದಿಸುತ್ತದೆ.

ಕಳೆದ ವರ್ಷ, ಸನ್‌ಪ್ಯೂರ್, ಬಾಲಿವುಡ್ ನಟ ಹಾಗೂ ದಾನಿ ಸೋನು ಸೂದ್ ಅವರನ್ನು ತನ್ನ ರಾಯಭಾರಿಯನ್ನಾಗಿ ನೇಮಕ ಮಾಡಿಕೊಂಡಿತ್ತು. ಬ್ರಾಂಡ್ಸ್ ಮಾರ್ಕೆಟಿಂಗ್ ಅಭಿಯಾನಗಳು ಅದರ ಶುದ್ಧತೆಯ ಮುಖ್ಯ ಮೌಲ್ಯಗಳಾದ ನಂಬಿಕೆ ಕಾಳಜಿ ಮತ್ತು ಪ್ರಾಮಾಣಿಕತೆಯನ್ನು ಸತತವಾಗಿ ಪುನರುಚ್ಚರಿಸುತ್ತಿದೆ.

ಪ್ರಸ್ತುತ ಸನ್‌ಪ್ಯೂರ್ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ವ್ಯಾಪಕವಾಗಿ ಮಾರಾಟವಾಗುತ್ತಿದೆ.

ಕೆಆರ್ ಕ್ಷೇತ್ರದಿಂದ ಗುರುಪಾದಸ್ವಾಮಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ



ಐವರಿಂದ ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ

ಮೈಸೂರು,ಡಿ.1(ಪಿಎಂ)-ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಮೈಸೂರಿನ ಕೆಆರ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಆಕಾಂಕ್ಷಿಯಾಗಿರುವುದಾಗಿ ತಿಳಿಸಿದ ಕಾಂಗ್ರೆಸ್ ಮುಖಂಡ ಗುರುಪಾದಸ್ವಾಮಿ, ಈ ಹಿನ್ನೆಲೆಯಲ್ಲಿ ಕೆಪಿಸಿಸಿ ನಿಯಮದಂತೆ ಅರ್ಜಿ ಸಲ್ಲಿಸಿದ್ದು, ತಮಗೊಂದು ಅವಕಾಶ ನೀಡಬೇಕೆಂದು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ಕ್ಷೇತ್ರ ಹೊರತುಪಡಿಸಿದರೆ ಮೈಸೂರು ವಿಭಾಗದ ಯಾವುದೇ ಕ್ಷೇತ್ರದಲ್ಲಿ ಸದ್ಯ ವೀರಶೈವ ಲಿಂಗಾಯತ ಸಮುದಾಯದವರಿಗೆ ಪಕ್ಷದ ಪ್ರಾತಿನಿಧ್ಯ ದೊರೆತಿಲ್ಲ. ಹೀಗಾಗಿ ಸಮುದಾಯದವರ ಒತ್ತಾಯದ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯನವರು ತಮಗೆ ಟಿಕೆಟ್ ನೀಡಬೇಕೆಂದು ಕೋರಿದರು.

ಮೂಲತಃ ನಂಜನಗೂಡು ತಾಲೂಕು ಹದಿನಾರು ಗ್ರಾಮದ ನಾನು, ಮೈಸೂರಿನ ಕೆಆರ್ ಕ್ಷೇತ್ರದ 54ನೇ ವಾರ್ಡ್ ವ್ಯಾಪ್ತಿಯ ಗೌರಿಶಂಕರನಗರ ನಿವಾಸಿಯಾಗಿದ್ದೇನೆ. 40 ವರ್ಷಗಳಿಂದ ರಾಜಕಾರಣದಲ್ಲಿದ್ದು, ಪಕ್ಷ ನೀಡಿದ ಎಲ್ಲಾ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿಭಾಯಿಸಿದ್ದೇನೆ. ಸದ್ಯ ವರುಣ ಕ್ಷೇತ್ರ ರಾಜಕಾರಣದಲ್ಲಿ ಹೆಚ್ಚು ತೊಡಗಿಕೊಂಡಿದ್ದೇನೆ. ಕೆಆರ್ ಕ್ಷೇತ್ರದಲ್ಲಿ 50ರಿಂದ 60 ಸಾವಿರ ವೀರಶೈವ ಲಿಂಗಾಯತ ಸಮುದಾಯದ ಮತದಾರರು ಇದ್ದಾರೆ ಎಂದರು.

ಕೆಆರ್ ಕ್ಷೇತ್ರಕ್ಕೆ ಐವರಿಂದ ಅರ್ಜಿ: ಕೆಆರ್ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿ ಐವರು ಅರ್ಜಿ ಸಲ್ಲಿಸಿದ್ದೇವೆ. ಕುರುಬ ಸಮುದಾಯದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಬ್ರಾಹ್ಮಣ ಸಮುದಾಯದ ಎನ್.ಎಂ.ನವೀನ್‌ಕುಮಾರ್, ವೀರಶೈವ ಲಿಂಗಾಯತ ಸಮುದಾಯದ ಎಂ.ಪ್ರದೀಪ್‌ಕುಮಾರ್, ಪರಿಶಿಷ್ಟ ಜಾತಿ ಸಮುದಾಯದ ಭಾಸ್ಕರ್ ಮತ್ತು ನಾನು ಸೇರಿದಂತೆ ಐದು ಮಂದಿ ಅರ್ಜಿ ಸಲ್ಲಿಸಿದ್ದೇವೆ. ನಮ್ಮ ಐದು ಮಂದಿಯಲ್ಲಿ ವರಿಷ್ಠರು ಯಾರಿಗೆ ಟಿಕೆಟ್ ನೀಡಿದರೂ ಪಕ್ಷ ನಿಷ್ಠೆಯಿಂದ ಕೆಲಸ ಮಾಡುತ್ತೇವೆ ಎಂದು ಗುರುಪಾದಸ್ವಾಮಿ ಪ್ರಶ್ನೆಗಳಿಗೆ ಉತ್ತರಿಸಿದರು.

ಕೆಆರ್ ಕ್ಷೇತ್ರದ ಮತ್ತೊಬ್ಬ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಭಾಸ್ಕರ್ ಮಾತನಾಡಿ, ಪಕ್ಷದಲ್ಲಿನ ಸೇವೆ ಪರಿಗಣಿಸಿ ಟಿಕೆಟ್ ನೀಡುವಂತೆ ಕೋರಿದ್ದೇವೆ. ಅಂತಿಮವಾಗಿ ಯಾರಿಗೇ ಟಿಕೆಟ್ ಸಿಕ್ಕರೂ ಪಕ್ಷನಿಷ್ಠೆಯಿಂದ ಅವರ ಪರವಾಗಿ ಕೆಲಸ ಮಾಡಲಿದ್ದೇವೆ ಎಂದರು. ಮುಖಂಡರಾದ ಮೊಹಮ್ಮದ್ ಅಕ್ಬರ್ ಅಲಿ, ತಾಪಂ ಮಾಜಿ ಸದಸ್ಯ ಸುರೇಶ್ ಕುಮಾರ್, ಬೆಳವಾಡಿ ಪ್ರಭಾಕರ್, ಚಂದ್ರು, ಬಿ.ವಿ.ಬಸವರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಳೆ 'ಗೀತಾ ಜಯಂತಿ'

ಮೈಸೂರು, ಡಿ.1- ನಗರದ ಯಾದವಗಿರಿ 2ನೇ ಮುಖ್ಯ ರಸ್ತೆಯಲ್ಲಿರುವ 'ಜ್ಞಾನ ಪ್ರಕಾಶ ಭವನ' ದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಸ್ಥೆ ವತಿಯಿಂದ ಡಿ.3ರಂದು ಶನಿವಾರ ಸಂಜೆ 6 ಗಂಟೆಗೆ 'ಗೀತಾ ಜಯಂತಿ' ಪ್ರಯುಕ್ತ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದ್ದು, 'ಇಂದಿನ ಸಮಾಜಕ್ಕೆ ಭಗವದ್ಗೀತೆಯ ಪ್ರಸ್ತುತತೆ' ಎಂಬ ವಿಷಯದ ಕುರಿತು ಚರ್ಚಿಸಲಾಗುವುದು. ಅಂದಿನ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ಮಹಿಪಾಲಾ ನಂದಜಿಯವರು ಆಶೀರ್ವಚನ ನೀಡಲಿದ್ದಾರೆ. ಸಾಹಿತಿ ಡಾ.ಕೆ.ಅನಂತರಾಮು ಶೇಷ ಉಪನ್ಯಾಸ ನೀಡಲಿದ್ದು, ದಿವ್ಯ ಸಾನ್ನಿಧ್ಯವನ್ನು ಈವಿವಿ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿಯವರು ವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ 0821-2512227 ಸಂಪರ್ಕಿಸಬಹುದು.



ಚುರುಮುರಿ ರಾಮಣ್ಣನವರ 19ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಲಕ್ಷ್ಮೀಪುರಂ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಬಟ್ಟೆಗಳನ್ನು ವಿತರಿಸಿದರು. ಚಿತ್ರದಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಶಾಲೆ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಗೀತಾ, ಶ್ರೀಮತಿ ಪುಷ್ಪ, ದಿವಂಗತ ರಾಮಣ್ಣ ಅವರ ಪುತ್ರ ರಾ.ಪರಮೇಶ್‌ಗೌಡ, ಉಮೇಶ್, ಸುರೇಂದ್ರ, ಕಿರಣ್, ಜಯರಾಮ್ ಇದ್ದಾರೆ.

ಡಿ.4ರಿಂದ 7ರವರೆಗೆ ಶ್ರೀ ಹನುಮ ಜಯಂತಿ

ಮೈಸೂರು, ಡಿ.1 (ಆರ್‌ಕೆಬಿ)- ಮೈಸೂರಿನ ಬನ್ನಿಮಂಟಪ ಬಡಾವಣೆಯ ಹನುಮಂತನಗರದ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಡಿ.4ರಿಂದ 7ರವರೆಗೆ ಹನುಮ ಜಯಂತಿ ಮಹೋತ್ಸವ ಆಯೋಜಿಸಲಾಗಿದೆ. ಡಿ.4ರಂದು ಸಂಜೆ 6.30ಕ್ಕೆ ಪುಣ್ಯಾವಾಚನ, ರಕ್ಷಾಬಂಧನ, ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, ರಾತ್ರಿ 9.30ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ರಾತ್ರಿ 10 ಗಂಟೆಯ ಬಳಿಕ ದೇವಸ್ಥಾನದ ಭಜನಾ ಮಂಡಲಿಯಿಂದ ಅಖಂಡ ಭಜನೆ ಏರ್ಪಡಿಸಲಾಗಿದೆ.



ಡಿ.5ರಂದು ಬ್ರಾಹ್ಮೀ ಮುಹೂರ್ತದಲ್ಲಿ ಆಂಜನೇಯಸ್ವಾಮಿಗೆ ಚತುಷ್ಟಾರ್ಚನೆ, ಪಂಚಾಮೃತ ಅಭಿಷೇಕ, ಬೆಳಗ್ಗೆ 9ಕ್ಕೆ ಶ್ರೀರಾಮತಾರಕ ಹೋಮ, ಆಂಜನೇಯ ಸಹಸ್ರನಾಮ, 10ಕ್ಕೆ ದೇವರನಾಮ, ಮಧ್ಯಾಹ್ನ 12ಕ್ಕೆ ದೇವರ ಉತ್ಸವ, ಮಧ್ಯಾಹ್ನ 1.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 6.30ಕ್ಕೆ ಸುಗಮ ಸಂಗೀತ, ಡಿ.6ರಂದು ದೇವರಿಗೆ ವಿಶೇಷ ಅಲಂಕಾರ, ಸಂಜೆ 6ಕ್ಕೆ ವಿದ್ವಾನ್ ಎ.ಡಿ.ದತ್ತಾತ್ರೇಯ ಶಿಷ್ಯವೃಂದದಿಂದ ಮ್ಯಾಂಡೋಲಿನ್ ವಾದನ. ಡಿ.7ರಂದು ಬೆಳಗ್ಗೆ 10ಕ್ಕೆ ಸತ್ಯನಾರಾಯಣಸ್ವಾಮಿ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ ನಡೆಯಲಿದೆ. ಭಕ್ತರು ಭಾಗವಹಿಸುವಂತೆ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಆರ್.ಅಶ್ವಥ್‌ನಾರಾಯಣ್ ತಿಳಿಸಿದ್ದಾರೆ.

ನಾಳೆ ಸರ್ಪ ಸಂಸ್ಕಾರ; ನಾಡಿದ್ದು ಆಶ್ಲೇಷಾ ಬಲಿ

ಮೈಸೂರು, ಡಿ.1- ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಡಿ.3ರಂದು ಶನಿವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ಡಿ.4ರಂದು ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ ಪೂಜೆ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಜಾತಕ ವಿಮರ್ಶಕ ಮೈ ಕುಮಾರ್ ಅವರನ್ನು ಮೊ.9845183399, 9342183392 ಸಂಪರ್ಕಿಸಬಹುದು.

ಮೂರನೇ ಪುಟದಿಂದ

ಈಗ ವಿದ್ಯಾರ್ಥಿನಿ ಚಿರತೆಗೆ ಬಲಿ

ದಾಳಿಯಿಂದ ಯುವಕ ಸಾವನ್ನಪ್ಪಿದ್ದು, ಈಗ ಯುವತಿಯನ್ನು ಬಲಿ ಪಡೆದಿದೆ. ತಾಲೂಕಿನಾದ್ಯಂತ ಚಿರತೆಗಳ ದಾಳಿ ನಿರಂತರವಾಗಿ ನಡೆಯುತ್ತಿದ್ದರೂ, ಚಿರತೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಮತ್ತು ತಾಲೂಕು ಆಡಳಿತ ವಿಫಲವಾಗಿದೆ ಎಂದು ಆಕ್ರೋಶಗೊಂಡ ಗ್ರಾಮಸ್ಥರು ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶಾಸಕ ಅಶ್ವಿನ್ ಕುಮಾರ್ ಘಟನೆ ಕುರಿತು ಮಾಹಿತಿ ಪಡೆದರು. ಹಾಗೂ ಯುವತಿ ದುರಂತ ಸಾವಿಗೆ ಸಂತಾಪ ಸೂಚಿಸಿದರು. ಅಲ್ಲದೇ ಪ್ರತಿಭಟನಾನಿರತರ ಜೊತೆ ಧರಣಿಗೆ ಕುಳಿತ ಶಾಸಕರು, ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಅರಣ್ಯಾಧಿಕಾರಿಗಳು ಭೇಟಿ ನೀಡಬೇಕು ಎಂದು ಪಟ್ಟು ಹಿಡಿದರು. ಸ್ಥಳದಲ್ಲಿ ಡಿವೈಎಸ್ಪಿ ಗೋವಿಂದರಾಜು, ಎಸ್‌ಐ ತಿರುಮಲ್ಲೇಶ್, ಡಾ.ಭಾರತಿ, ಡಾ.ರೇವಣ್ಣ ಇತರರಿದ್ದರು. ಚಿರತೆ ಸೆರೆಗೆ ತಜ್ಞರ ತಂಡ: ಇಂದು ರಾತ್ರಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕನ್ಸರ್ವೇಟರ್ ಆಫ್ ಫಾರೆಸ್ಟ್ ಕಮಲಾ ಕರಿಕಾಳನ್, ಡಿಸಿಎಫ್ ಮಾಲತಿ ಅವರುಗಳು ಪ್ರತಿಭಟನಾಕಾರರೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕೂಡ ತಮ್ಮ ಸಲಹೆಗಳನ್ನು ಮುಂದಿಟ್ಟರು. ನಂತರ ಮಾತನಾಡಿದ ಕಮಲಾ ಕರಿಕಾಳನ್, ತಿ.ನರಸೀಪುರ ವ್ಯಾಪ್ತಿಯ ಆರ್‌ಎಫ್‌ಓ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಿ, ಅವರ ವಿರುದ್ಧ ಇಲಾಖಾ ತನಿಖೆ ನಡೆಸಲಾಗುವುದು. ಅಲ್ಲದೇ ಚಿರತೆಗಳನ್ನು ಸೆರೆ ಹಿಡಿಯಲು 15 ತಜ್ಞರ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಲಾಗುವುದು. ಅತ್ಯಾವಶ್ಯವಾದರೆ ಚಿರತೆಯನ್ನು ಗುಂಡಿಟ್ಟು ಕೊಲ್ಲಲಾಗುವುದು. ಸಂತ್ರಸ್ತ ಕುಟುಂಬಕ್ಕೆ ಒಟ್ಟು 7.5 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ ಎಂದು ತಿಳಿಸಿದ ಅವರು ಸ್ಥಳದಲ್ಲೇ 5 ಲಕ್ಷ ರೂ. ಪರಿಹಾರದ ಚೆಕ್ ಅನ್ನು ವಿತರಿಸಿ ಮರಣೋತ್ತರ ಪರಿಕ್ಷೆ ನಂತರ ಉಳಿದ 2.5 ಲಕ್ಷ ರೂ. ಪರಿಹಾರ ನೀಡಲಾಗುವುದು.

ನಾಳೆ ಉರ್ಜವರಣ್ ಸಮ್ಮೇಳನ

ಮೈಸೂರು,ಡಿ.1(ಪಿಎಂ)-ಇಂಡಿಯನ್ ಸೊಸೈಟಿ ಆಫ್ ಹೀಟಿಂಗ್, ರೆಫ್ರಿಜರೇಟಿಂಗ್ ಅಂಡ್ ಏರ್‌ಕಂಡೀಷನಿಂಗ್ ಇಂಜಿನಿಯರ್ಸ್ (ಇಶ್ರೆ) ಮೈಸೂರು ಘಟಕದ ವತಿಯಿಂದ ಡಿ.3ರಂದು 'ಉರ್ಜವರಣ್' ಶೀರ್ಷಿಕೆಯಡಿ ಒಂದು ದಿನ ಸಮ್ಮೇಳನ ಆಯೋಜಿಸಲಾಗಿದೆ ಎಂದು ಇಶ್ರೆ ಮೈಸೂರು ಘಟಕದ ಅಧ್ಯಕ್ಷ ಅನಿಲ್‌ಕುಮಾರ್ ನಾಡಿಗೇರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಟ್ಟಡಗಳ ಇಂಜಿನಿಯರಿಂಗ್ ಸೇವೆ ಕೇಂದ್ರೀಕರಿಸಿ ಈ ಸಮ್ಮೇಳನ ನಡೆಯಲಿದೆ. ಮೈಸೂರಿನ ಲೇ ರುಚಿ ಹೋಟೆಲ್‌ನಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸಮ್ಮೇಳನ ನಡೆಯಲಿದೆ. ಬೆಳಗ್ಗೆ 9.30ಕ್ಕೆ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಜೀಕೆ ಎಂಟರ್‌ಪ್ರೈಸಸ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಜಿ.ಕೆ.ಬಾಲಕೃಷ್ಣನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ರಂಗ್‌ಸನ್ಸ್ ನಿರ್ದೇಶಕ ವಿಷ್ಣುರಂಗ ಅತಿಥಿಯಾಗಿ ಆಗಮಿಸಲಿದ್ದಾರೆ ಎಂದರು.

ಇಶ್ರೆ ದೇಶದಲ್ಲಿ ಮೈಸೂರು ಸೇರಿದಂತೆ 44 ಘಟಕಗಳನ್ನು ಹೊಂದಿದೆ. ಇಂಧನ ಮತ್ತು ಪರಿಸರದಲ್ಲಿ ಸುಸ್ಥಿರತೆ ಸಾಧಿಸುವ ಉದ್ದೇಶದೊಂದಿಗೆ ಸಮ್ಮೇಳನ ನಡೆಯಲಿದೆ. ಇತ್ತೀಚಿನ ತಂತ್ರಜ್ಞಾನ ಮತ್ತು ಉತ್ಪನ್ನಗಳ ಬಗ್ಗೆ ವಿಚಾರ ವಿನಿಮಯ ನಡೆಯಲಿದೆ. ಉತ್ಪಾದಕರು ಮತ್ತು ಸರಬರಾಜುದಾರರು ಇತ್ತೀಚೆಗೆ ಬಿಡುಗಡೆಗೊಂಡು ಉತ್ಪನ್ನಗಳ ಪ್ರದರ್ಶನ ನೀಡಲಿದ್ದಾರೆ ಎಂದರು.



ಇದು ರಾಷ್ಟ್ರಮಟ್ಟದ ಸಮ್ಮೇಳನವಾಗಿದ್ದು, ಇಂಧನ ಮತ್ತು ಪರಿಸರ ಕುರಿತಂತೆ ಉಪನ್ಯಾಸ ಮತ್ತು ಚರ್ಚೆ ನಡೆಯಲಿವೆ. ಉದ್ಘಾಟನೆ ಬಳಿಕ 2 ಗಂಟೆ ಕಾಲ ತಾಂತ್ರಿಕ ಉಪನ್ಯಾಸ ಜರುಗಲಿದೆ. ಬಳಿಕ ಮಧ್ಯಾಹ್ನ ಸಂವಾದ ನಡೆಯಲಿದ್ದು, ಸಂಜೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಂವಾದ ಕಾರ್ಯಕ್ರಮಕ್ಕೆ ಸಾರ್ವಜನಿಕರು ಉಚಿತವಾಗಿ ಪಾಲ್ಗೊಳ್ಳಬಹುದು. ಉಳಿದಂತೆ ಕೈಗಾರಿಕಾ ಪ್ರತಿನಿಧಿಗಳು ಸೇರಿದಂತೆ ವೃತ್ತಿಪರರಿಗೆ ನೋಂದಣಿ ಶುಲ್ಕ ನಿಗದಿ ಮಾಡಿದ್ದು, ಈಗಾಗಲೇ 110 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟು 125 ಮಂದಿ ಭಾಗವಹಿಸಲು ಅವಕಾಶವಿದ್ದು, ವಿವರಗಳಿಗೆ ಮೊ.ಸಂ. 94498 37309 ಅನ್ನು ಸಂಪರ್ಕಿಸಬಹುದು ಎಂದರು. ಇಶ್ರೆ ಮೈಸೂರು ಘಟಕದ ಚುನಾಯಿತ ಅಧ್ಯಕ್ಷ ಡಾ.ಎಸ್.ಎ. ಮೋಹನ್ ಕೃಷ್ಣ, ಇಂಜಿನಿಯರ್ ಎ.ಶ್ರೀನಿವಾಸ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ಬನ್ನಿಮಂಟಪದ ಶ್ರೀನಿವಾಸ ಟಾಕೀಸ್ ಸಮೀಪದ ವಿನಾಯಕ ಸುಬ್ರಮಣ್ಯ ದೇವಾಲಯದ ಬಳಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಕಾರ್ಪೋರೇಟರ್ ಅಕ್ಮಲ್ ಪಾಷಾ, ಹನುಮಂತನಗರ ಬಾಲು, ಶೇಖರ್, ಗಣೇಶ್, ಸ್ವಾಮಿನಾಥ, ಶ್ರೀನಿವಾಸ್, ಕೃಷ್ಣವೇಣಿ ಮತ್ತಿತರರಿದ್ದರು.


ಕೊಡವ ಸಮಾಜದಲ್ಲಿ ಪುತ್ತರಿ ನಮ್ಮೆ ಆಚರಣೆ

ಮೈಸೂರು, ಡಿ. 1- ಈ ಬಾರಿ ಪುತ್ತರಿ ನಮ್ಮೆ ಕಾರ್ಯಕ್ರಮವನ್ನು ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಏರ್ಪಡಿಸಲಾಗಿದೆ. ಇಲ್ಲಿಯವರೆಗೆ, ಪುತ್ತರಿ ನಮ್ಮೆ ಕಾರ್ಯಕ್ರಮವನ್ನು ಕುವೆಂಪುನಗರದ ಶ್ರೀ ಕಾವೇರಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಆಯೋಜಿಸಲಾಗುತ್ತಿತ್ತು. ಕೊಡವರ ಎಲ್ಲಾ ಸಾಂಪ್ರದಾಯಿಕ ನೃತ್ಯಗಳನ್ನು ಪುತ್ತರಿ ನಮ್ಮೆ ಕಾರ್ಯಕ್ರಮದ ಸಂದರ್ಭದಲ್ಲಿ ಪ್ರದರ್ಶಿಸಲಾಗುವುದು. ಇದೇ ವೇಳೆ ಸ್ವಯಂ ಸೇವಕರು ತಯಾರಿಸಿರುವ ಕದ್ ವಿತರಿಸಲಾಗುವುದು. ಈ ವರ್ಷ ತಂಬಿಟ್ಟು, ಪ್ರಸಾದ ವಿತರಣೆ ಇರುವುದಿಲ್ಲ. ಪುತ್ತರಿ ನಮ್ಮೆ ಅಂಗವಾಗಿ 5 ದಿನಗಳ ಈಡು ಕಾರ್ಯಕ್ರಮವನ್ನು ಡಿ.1ರಿಂದ 5ರವರೆಗೆ ಪ್ರತಿದಿನ ಸಂಜೆ 6 ಗಂಟೆ ನಂತರ ವಿಜಯನಗರದ 1ನೇ ಹಂತದಲ್ಲಿರುವ ಕೊಡವ ಸಮಾಜದ ಆವರಣದಲ್ಲಿ ಏರ್ಪಡಿಸಲಾಗಿದೆ. ಡಿ.7ರಂದು ನಡೆಯುವ ಪುತ್ತರಿ ನಮ್ಮೆ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೊಡವ ಸಮಾಜದ ಗೌರವ ಕಾರ್ಯದರ್ಶಿ ಮುಕ್ಕಾಟೀರ ಬಿ.ಜೀವನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾಜಿ ಕಾರ್ಪೋರೇಟರ್ ಸಿ.ಮಹದೇಶ್ ಹುಟ್ಟುಹಬ್ಬದ ಅಂಗವಾಗಿ ಸಿ.ಮಾದೇಶ್ ಅಭಿಮಾನಿ ಬಳಗದಿಂದ ವಿನಾಯಕನಗರದ ಸರ್ಕಾರಿ ಶಾಲೆ ಮಕ್ಕಳಿಗೆ ಪುಸ್ತಕ ವಿತರಿಸಲಾಯಿತು. ಇದೇ ವೇಳೆ ಹಿರಿಯ ನಾಗರಿಕರಿಗೆ ಪಿಂಚಣಿ ಪ್ರಮಾಣ ಪತ್ರ ವಿತರಿಸಲಾಯಿತು. ಈ ಸಂದರ್ಭ ಕಾರ್ಪೋರೇಟರ್ ಶ್ರೀಮತಿ ಭಾಗ್ಯ ಸಿ.ಮಾದೇಶ್, ರಾಜಣ್ಣ ಪ್ರೆಸ್, ಮೈಸೂರು-ಚಾಮರಾಜನಗರ ಒಕ್ಕಲಿಗ ಸಂಘದ ಅಧ್ಯಕ್ಷ ಮರಿಸ್ವಾಮಿ, ಪಡುವಾರಹಳ್ಳಿ ಪಾಪಣ್ಣ, ರಮೇಶ, ಕೃಷ್ಣ, ಮದನ್ ಮಾದೇಶ್, ಮಹೇಶ್, ಸುನಿಲ್, ಸತೀಶ್, ಭರತ್, ಶಿವು, ಶಿವರಾಜು, ವೇಣು ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.12.2022 ಶುಕ್ರವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ನವಮೀ, ನಕ್ಷತ್ರ : ಪೂಭಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ- ಡಾ. ಮೈಸೂರು ಉಮೇಶ್, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ- ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ಶಿಕ್ಷಣ ಸಂಚಲನ', 9.30 ಗಾಂಧೀ ಸ್ಮೃತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ-ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ-ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ-ಜಿ.ಕೆ.ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ- ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ-ಗೀತಾ ರಮಾನಂದ್, 4.00 ಮಹಿಳಾರಂಗ, ಜೀವನ್ಮುಖಿ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ-ಕಿಸಾನ್ ವಾಣಿ, 7.45 ಮತದಾತಾ ಜಂಕ್ಷನ್-ಭಾರತ ಚುನಾವಣಾ ಆಯೋಗದ ಪ್ರಾಯೋಜಿತ ಕಾರ್ಯಕ್ರಮ, 9.00 ವಿಜ್ಞಾನ ಭಾರತಿ, 10.00 ವಾದ್ಯವೃಂದ 10.30 ಸವಿನೆನಪು

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.
- **ಶ್ರೀ ಸದ್ಗುರು ಸೇವಾ ಮಂಡಲ:** 52ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ, ಬೆಳಗ್ಗೆ 7ಕ್ಕೆ ರುದ್ರಾಭಿಷೇಕ, ಸರ್ವಾಲಂಕಾರ, ಶ್ರೀ ಗುರುಚರಿತ್ರೆ ಪಾರಾಯಣ, 11ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ಗುರುಚರಿತ್ರೆ ಉಪನ್ಯಾಸ, ದತ್ತ ಭಜನೆ ಮತ್ತು ಪ್ರಸಾದ ವಿನಿಯೋಗ
- **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಪ್ರಾದೇಶಿಕ ಕೇಂದ್ರ:** ಮೈಸೂರು, ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗ ಮಟ್ಟದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಹಾಗೂ ಮಹಿಳೆಯರ ಚೆಸ್ ಪಂದ್ಯಾವಳಿ, ಸ್ಥಳ: ವಿವಿಯ ಆವರಣ, ಸಾತಗಳ್ಳಿ, ಬೆಳಗ್ಗೆ 9 ಗಂಟೆಗೆ.
- **ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಶರ್, ಸುಜೋಕ್, ಆಕ್ಯೂ ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಪ್ರಸನ್ನ ಗಣಪತಿ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಬೆಳಗ್ಗೆ 10.30ರಿಂದ.
- **ಕನ್ನಡ ಚಳವಳಿ ಕೇಂದ್ರ ಸಮಿತಿ :** ಕನ್ನಡ ರಾಜ್ಯೋತ್ಸವ ಸಮಾರಂಭ, ಪುಷ್ಪಾರ್ಚನೆ : ಮೈಲ್ಯಾಕ್ ಅಧ್ಯಕ್ಷ ಆರ್. ರಘು, ಪೊಲೀಸ್ ಆಯುಕ್ತ ಬಿ. ರಮೇಶ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಸಾಹಿತಿ ನಾಗವಾರ ಕಾಳೇಗೌಡ, ಸಮಾಜ ಸೇವಕ ಜೆ. ಪುಟ್ಟಸ್ವಾಮಿ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.
- **ಜೆ.ಕೆ. ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್:** ಬೆಳ್ಳಿಹಬ್ಬ ಆಚರಣೆ, ಮುಖ್ಯ ಅತಿಥಿಗಳು: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸ್ಥಳ: ವಿಕ್ರಾಂತ್ ಟೈರ್ ಪ್ಲಾಂಟ್, ಮೇಟಗಳ್ಳಿ, ಕೆಆರ್‌ಎಸ್ ರಸ್ತೆ, ಸಂಜೆ 4ಕ್ಕೆ
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ರಘೋತ್ತಮಚಾರ್ ನಾಗಸಂಪಿಗೆ ಬಾಗಲಕೋಟೆ ಅವರಿಂದ ಭಗವದ್ಗೀತೆಯ 2ನೇ ಅಧ್ಯಾಯದ ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಸಂಜೆ 5 ಗಂಟೆಗೆ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ, 27ನೇ ಸಂಗೀತ ಸಮ್ಮೇಳನ, ಸಂಜೆ 5.30ಕ್ಕೆ ಸಮ್ಮೇಳನಾಧ್ಯಕ್ಷರನ್ನು ಜೆಎಸ್‌ಎಸ್ ಮಹಿಳಾ ಕಾಲೇಜು ಪ್ರಮುಖ ದ್ವಾರದಿಂದ ಮೆರವಣಿಗೆಯೊಂದಿಗೆ ಸ್ವಾಗತ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮೇಳನಾಧ್ಯಕ್ಷ: ವಿದ್ವಾನ್ ವಿ. ನಂಜುಂಡಸ್ವಾಮಿ, ಉದ್ಘಾಟನೆ : ಶಾಸಕ ಎಸ್.ಎ. ರಾಮದಾಸ್, ಮುಖ್ಯ ಅತಿಥಿಗಳು : ಮಹಾಪೋಷಕ ಡಾ. ಸಿ.ಜಿ. ನರಸಿಂಹನ್, ಅಧ್ಯಕ್ಷತೆ : ಸಂಗೀತ ವಿದ್ಯಾನಿಧಿ ಮೈಸೂರು ಎಂ. ನಾಗರಾಜ್, ಸಂಜೆ 7ಕ್ಕೆ ಮೈಸೂರು ಎ. ಚಂದನ್‌ಕುಮಾರ್ ಅವರಿಂದ ಕೊಳಲು ವಾದನ, ಮೈಸೂರು ಎಂ. ಸುಮಂತ್-ವಯೋಲಿನ್, ಕೆ.ಯು. ಜಯಚಂದ್ರರಾವ್-ಮೃದಂಗ, ತುಮಕೂರು ಬಿ. ಶಶಿಶಂಕರ್-ಘಟ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.
- **ಶ್ರೀ ಉತ್ತರಾಧಿ ಮಠ:** ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ ಬಾಗಲಕೋಟೆ ಅವರಿಂದ ಶ್ರೀ ಭಗವದ್ಗೀತಾ ಅಭಿಮಾನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.
- **ಜೈ ಮಾರುತಿ ಗ್ರೂಪ್ಸ್, ಮೇಟಗಳ್ಳಿ :** 15ನೇ ವರ್ಷದ ಹನುಮ ಜಯಂತ್ಯೋತ್ಸವ ಸಮಾರಂಭ, ಸಂಜೆ 4 ಗಂಟೆಗೆ ವಾದ್ಯ ತಂಡ ಮತ್ತು ಕಲಾ ತಂಡಗಳೊಂದಿಗೆ ಶ್ರೀ ಹನುಮ ದೇವರ ರಥೋತ್ಸವ ಮೆರವಣಿಗೆ, ಸಂಜೆ 7ಕ್ಕೆ ಶ್ರೀ ನಾಡಪ್ರಭು ಕೆಂಪೇಗೌಡರ 10 ಜನಗಳ ಗರಡಿ ಮೇಟಗಳ್ಳಿ ಉದ್ಘಾಟನಾ ಸಮಾರಂಭ, ಸ್ಥಳ: ಮೇಟಗಳ್ಳಿ.

ವಿಶ್ವ ಏಡ್ಸ್ ದಿನದ ಅಂಗವಾಗಿ ಜಾಗೃತಿ ಜಾಥಾ, ಬೀದಿ ನಾಟಕ



ಮಡಿಕೇರಿ, ಡಿ.1– 70–80ರ ದಶಕದಲ್ಲಿ ಎಚ್‌ಐವಿ/ಏಡ್ಸ್ ಎಂಬ ವೈರಾಣುವಿಗೆ ಹೆದರುತ್ತಿದ್ದರು. ಅದೇ ರೀತಿ ಕೋವಿಡ್–19 ಸಂದರ್ಭದಲ್ಲೇ ಮುಂದೆ ಹೇಗೆ ಎಂದು ಯೋಚಿಸುತ್ತಿದ್ದರು. ಆದರೆ ಬರುತ್ತಾ ಇವನ್ನೆಲ್ಲಾ ಎದುರಿಸಿ ಮುಂದೆ ಸಾಗುತ್ತಿದ್ದು, ಯಾವುದೇ ರೀತಿಯ ರೋಗ ನಿಯಂತ್ರಣ ಸಂಬಂಧಮುನ್ನೆಚ್ಚರ ವಹಿಸುವುದು ಅತ್ಯಗತ್ಯ ಎಂದು ಡಿಸಿ ಡಾ.ಬಿ.ಸಿ.ಸತೀಶ ಅವರು ಪ್ರತಿಪಾದಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಫೀಲ್ಡ್ ಕೆ.ಎಂ. ಕಾರ್ಯಪ್ಪ ಸಭಾಂಗಣದಲ್ಲಿ 'ವಿಶ್ವ ಏಡ್ಸ್ ದಿನದ' ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇದೇ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಆವರಣದಲ್ಲಿ ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಎಂ.ಭೃಂಗೇಶ್ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ(ಪ್ರಭಾರ) ಮುನಿರತ್ನಮ್ಮ ಜಾಥಾಗೆ ಚಾಲನೆ ನೀಡಿದರು.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲಿ ಮಂಡ್ಯದ ಚಿಂತನ ಸಾಂಸ್ಕೃತಿಕ ಕಲಾತಂಡದಿಂದ ಎಚ್‌ಐವಿ ಏಡ್ಸ್‌ನಿಂದ ದೂರವಿರುವ ಬಗ್ಗೆ ಬೀದಿನಾಟಕ ಮೂಲಕ ಅರಿವು ಮೂಡಿಸಲಾಯಿತು.

ಕೊಳೆತು ನಾರುತ್ತಿದೆ ಶ್ರೀ ಓಂಕಾರೇಶ್ವರ ದೇಗುಲದ ಪುಷ್ಕರಣಿ



ಪಾಚಿಗಟ್ಟಿ ಹಸಿರು ಬಣ್ಣಕ್ಕೆ ತಿರುಗಿರುವ ನೀರು; ಆಮೆಗಳ ಸಾವು

ಮಡಿಕೇರಿ, ಡಿ.1– ಧಾರ್ಮಿಕ ಶ್ರದ್ಧಾ ಕೇಂದ್ರವಾಗಿರುವ ಮಡಿಕೇರಿಯ ಪುರಾತನ ಶ್ರೀ ಓಂಕಾರೇಶ್ವರ ದೇಗುಲದ ಪುಷ್ಕರಣಿಯ ನೀರು ಪಾಚಿ ಗಟ್ಟಿ ಹಸಿರು ಬಣ್ಣಕ್ಕೆ ತಿರುಗಿದ್ದು, ಆಮೆಗಳು ಸತ್ತು ನೀರಿನಲ್ಲಿ ತೇಲುತ್ತಿವೆ. ಪುಷ್ಕರಣಿ ಯೋಗ್ಯ ನಿರ್ವಹಣೆ ಇಲ್ಲದೆ ಗಬ್ಬೆದ್ದು ಕೊಳೆತು ನಾರುತ್ತಿದ್ದು, ಮುಜರಾಯಿ ಇಲಾಖೆಯ ಕಾರ್ಯವೈಖರಿಯನ್ನು ಅಣಕಿಸುತ್ತಿದೆ.

ಶ್ರೀ ಓಂಕಾರೇಶ್ವರ ದೇಗುಲದ ಮುಂಭಾಗದಲ್ಲಿರುವ ಪುಷ್ಕರಣಿಯಲ್ಲಿ ಅಗತ್ಯ ನೀರಿನ ಹರಿವಿಲ್ಲದೆ, ನೀರಿನ ಮಟ್ಟ ಕುಸಿತ ಕಂಡಿದೆ. ಈ ಪುಷ್ಕರಣಿಗೆ ಶುದ್ಧ ನೀರಿನ ಲಭ್ಯತೆ ಇಲ್ಲದಿರುವುದರಿಂದ ಇರುವ ನೀರು ಪಾಚಿಯಿಂದ ಹಸಿರು ಬಣ್ಣಕ್ಕೆ ತಿರುಗಿದೆ. ಪುಷ್ಕರಣಿಯ ಅಂಚಿನಲ್ಲಿ ಎರಡು ಆಮೆಗಳು ಸತ್ತು ತೇಲುತ್ತಿದ್ದು, ದೇಗುಲಕ್ಕೆ ಭೇಟಿ ನೀಡುವ ಭಕ್ತಾದಿಗಳು ಗಮನಿಸಿ ಮರುಕಪಟ್ಟಿದ್ದಾರೆ. ಆದರೆ ಸಂಬಂಧಪಟ್ಟವರು ಮಾತ್ರ ಅದರತ್ತ ಇನ್ನೂ ಗಮನ ಹರಿಸಿಲ್ಲ.

ಪುಷ್ಕರಣಿಯಲ್ಲಿನ ನೀರಿನ ಮಟ್ಟ ಸುಮಾರು 8 ಮೆಟ್ಟಿಲುಗಳಷ್ಟು ಕುಸಿತವಾಗಿದ್ದು, ಮುಂಬರುವ ಬೇಸಿಗೆಯಲ್ಲಿ ಮತ್ತಷ್ಟು ಕೆಳಕ್ಕಿಳಿಯುವ ಸಾಧ್ಯತೆ ಇದೆ. ಗಬ್ಬೆದ್ದು ನಾರುತ್ತಿರುವ ನೀರಿನಲ್ಲಿ ಆಕ್ಸಿಜನ್ ಪ್ರಮಾಣವೂ ಇಳಿಕೆಯಾದಂತೆ ಕಂಡು ಬರುತ್ತಿದ್ದು, ಮುಂದಿನ ದಿನಗಳಲ್ಲಿ ಮೀನುಗಳು ದಾರುಣವಾಗಿ ಸಾವಿಗೀಡಾಗುವ ಸಾಧ್ಯತೆಗಳಿವೆ. ತಕ್ಷಣ ಮುಜರಾಯಿ ಇಲಾಖೆ ಪುಷ್ಕರಣಿಯ ನಿರ್ವಹಣೆಯೊಂದಿಗೆ ಅದರಲ್ಲಿರುವ ಆಮೆಗಳು, ಮೀನುಗಳ ಜೀವದ ಬಗ್ಗೆಯೂ ಕಾಳಜಿ ವಹಿಸುವ ಅಗತ್ಯವಿದೆ.



ಕೆಲವು ಭಕ್ತರಿಂದ ಎಡವಟ್ಟು: ಪುಷ್ಕರಣಿಯ ನೀರು ಕಲುಷಿತಗೊಂಡಿರುವುದು ಕಂಡು ಬರುತ್ತಿದೆಯಾದರು, ಅಲ್ಲಿಗೆ ಆಗಮಿಸುವ ಭಕ್ತಾದಿಗಳು ಮೀನುಗಳಿಗೆ ಆಹಾರ ನೀಡುವ' ದೃಷ್ಟಿಯಿಂದ ಮರಿಗಳನ್ನು ಹಾಕುತ್ತಿದ್ದಾರೆ. ಮೀನುಗಳು ಇವುಗಳನ್ನು ಸೇವಿಸುವುದು ಸಹಜವಾಗಿದ್ದರೂ, ಮತ್ತೆ ಕೆಲವು ಭಕ್ತರು ವಿವಿಧ ಬಗೆಯ ಬಿಸ್ಕೆಟ್‌ಗಳನ್ನು, ಪ್ಲಾಸಿಕ್ ಕವರ್‌ನಲ್ಲಿ ಗಾಳಿ ತುಂಬಿಕೊಂಡಿರುವ ಚಿಪ್ಸ್‌ಗಳನ್ನು ಜಲಚರಗಳಿರುವ ನೀರಿಗೆ ಹಾಕುವ ಮೂಲಕ ಪುಷ್ಕರಣಿಯನ್ನು ಮತ್ತಷ್ಟು ಹದಗೆಡಿಸುತ್ತಿರುವುದು ಕಳವಳಕಾರಿ ವಿಚಾರವಾಗಿದೆ. ಪುಷ್ಕರಣಿಯ ನೀರು ಮತ್ತಷ್ಟು ಬತ್ತುವ ಮೂಲಕ ಜಲಚರಗಳು ಸಂಕಷ್ಟಕ್ಕೆ ಸಿಲುಕುವುದಕ್ಕೆ ಮುನ್ನ ಸಂಬಂಧಪಟ್ಟವರು, ಪುಷ್ಕರಣಿಯಲ್ಲಿ ಸ್ವಚ್ಛ ನೀರು ತುಂಬುವುದಕ್ಕೆ ಅಗತ್ಯ ವ್ಯವಸ್ಥೆಗಳನ್ನು ಕಂಡುಕೊಳ್ಳುವುದು ಅವಶ್ಯಕವಾಗಿದೆ.

ಮಳೆಗಾಲದ ಅವಧಿಯಲ್ಲಿ ಪುಷ್ಕರಣಿಯ ಒಂದು ಪಾರ್ಶ್ವದಿಂದ ಜಲದ ನೀರು ಬಂದು ಸೇರುತ್ತದೆ. ಆದರೆ ಮಳೆ ನಿಂತ ಕೂಡಲೆ ಅದರ ಹರಿವು ಸಂಪೂರ್ಣ ಕ್ಷೀಣಿಸಿ ಇರುವ ನಿರು ಬತ್ತಲಾರಂಭಿಸುವುದು ಸಮಸ್ಯೆಗೆ ಮೂಲ ಕಾರಣವಾಗಿದೆ. ಕನಿಷ್ಟ ಪುಷ್ಕರಣಿಯಲ್ಲಿ ನಿರ್ದಿಷ್ಟ ಮಟ್ಟದಲ್ಲಿ ಸ್ವಚ್ಛವಾದ ನೀರು ಇರುವಂತೆ ನೋಡಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ.

ದಲಿತರಿಗೆ ಮೂಲಭೂತ ಸೌಲಭ್ಯ ಕಲ್ಪಿಸದಿದ್ದರೆ ಪ್ರತಿಭಟನೆ

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಎಚ್ಚರಿಕೆ



ವಿರಾಜಪೇಟೆ, ಡಿ.1– ದಲಿತ ಕುಟುಂಬಗಳಿಗೆ ಸರ್ಕಾರದ ಸೌಲಭ್ಯಗಳು ಸರಿಯಾಗಿ ದೊರಕುತಿಲ್ಲ. ಪರಿಶಿಷ್ಟ ಜಾತಿ, ಪಂಗಡಗಳಿಗೆ ಮೀಸಲಿಟ್ಟಿರುವ ಅನುದಾನವನ್ನು ಗ್ರಾಮ ಪಂಚಾಯಿತಿ ಮೂಲಕ ದಲಿತ ಕುಟುಂಬಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದಲ್ಲಿ ತಾಲೂಕಿನ ಎಲ್ಲಾ ದಲಿತ ಸಮಿತಿಗಳು ಸೇರಿ ಪಂಚಾಯಿತಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಅಧ್ಯಕ್ಷ ಹೆಚ್.ಆರ್.ಶಿವಣ್ಣ ಎಚ್ಚರಿಸಿದ್ದಾರೆ.

ವಿರಾಜಪೇಟೆ ತಾಲೂಕಿನ ಚೆಂಬೆ ಬೆಳ್ಳೂರು ಗ್ರಾಮ ಪಂಚಾಯಿತಿ ವಾಪ್ತಿಯ ದೇವಣಗೇರಿಯ ಚಿರಾಣೆ ಕಾಲೋನಿಯಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನೂತನ ಸಮಿತಿ ರಚನೆ ಕಾರ್ಯ ಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಅನೇಕ ವರ್ಷ ಗಳಿಂದಲೂ ಈ ಕಾಲೋನಿಯ ಜನರು ಯಾವುದೇ ಸೌಲಭ್ಯ ಗಳಿಲ್ಲದೆ ಜೀವನ ನಡೆಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳು ಚುನಾವಣೆ ಸಂದರ್ಭ ಮಾತ್ರ ಬರುತ್ತಾರೆ. ನಂತರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ಆದ್ದರಿಂದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹೋರಾಟ ನಡೆಸುವುದಾಗಿ ಹೇಳಿದರು.

ದಲಿತ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಹೆಚ್.ಜಿ.ಗೋಪಾಲ್ ಮಾತನಾಡಿ, ದಲಿತರು ದಲಿತರಾಗಿಯೇ ಉಳಿಯದೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರನ್ನು ಸಮಾಜದ ಉತ್ತಮ ಪ್ರಜೆಗಳಾಗಿ ಮಾಡಬೇಕು ಎಂದರು. ತಾಲೂಕು ಸಮಿತಿಯ ಸಂಚಾಲಕ ಹೆಚ್.ಪಿ.ಲವ ಮಾತನಾಡಿ, ಸರಕಾರ ಪಂಚಾಯಿತಿ ಮೂಲಕ ಪ.ಜಾತಿ ಕುಟುಂಬಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು ಎಂದರು. ಜಿಲ್ಲಾ ಸಮಿತಿಯ ಹೆಚ್.ಕೆ.ವಿದ್ಯಾಧರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ನೂತನ ಸಮಿತಿಗೆ ಪದಾಧಿಕಾರಿಗಳ ಆಯ್ಕೆ ನಡೆದು ಗ್ರಾಮ ಸಂಚಾಲಕರಾಗಿ ಹೆಚ್.ಜೆ ಬೋಜ, ಉಪ ಸಂಚಾಲಕನಾಗಿ ಹೆಚ್.ಬಿ. ಬಿಫೀನ್, ಖಜಾಂಚಿಯಾಗಿ ಹೆಚ್.ಎಂ.ಗೋಪಿ ಹಾಗೂ ಅನೇಕ ಸದಸ್ಯರುಗಳು ನೂತನ ಸಮಿತಿಗೆ ಆಯ್ಕೆಗೊಂಡರು. ವೇದಿಕೆಯಲ್ಲಿ ತಿತಿಮತಿಯ ರೇಣುಕ, ಮಧು ಮತ್ತು ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಮೂರ್ನಾಡು ಕೊಡವ ಸಮಾಜದ ಹಾಕಿ ತಂಡ ಅಮಾನತಿಗೆ ಖಂಡನೆ

ಕಾನೂನು ಹೋರಾಟಕ್ಕೆ ಮುಂದಾದ ಕೊಡವ ಸಮಾಜ



ಮಡಿಕೇರಿ, ಡಿ.1– ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ಇತ್ತೀಚೆಗೆ ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾಹಬ್ಬದಲ್ಲಿ ಮೂರ್ನಾಡು ಕೊಡವ ಸಮಾಜದ ಹಾಕಿ ತಂಡವನ್ನು ಹಾಕಿ ಕೂರ್ಗ್ ಸಂಸ್ಥೆ ಅಮಾನತುಗೊಳಿಸಿರುವುದು ಖಂಡನೀಯವೆಂದು ತಿಳಿಸಿರುವ ಮೂರ್ನಾಡು ಕೊಡವ ಸಮಾಜದ ಅಧ್ಯಕ್ಷ ನೆರವಂಡ ಅನೂಪ್ ಉತ್ತಯ್ಯ, ಈ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಬಾಳುಗೋಡುವಿನಲ್ಲಿ ನ.17ರಿಂದ 20ರವರೆಗೆ 8ನೇ ವರ್ಷದ ಕೊಡವ ನಮ್ಮೆಯ ಪ್ರಯುಕ್ತ ನಡೆದ ಅಂತರ ಕೊಡವ ಸಮಾಜಗಳ ಹಾಕಿ ಪಂದ್ಯಾವಳಿಯಲ್ಲಿ ಮೂರ್ನಾಡು ಕೊಡವ ಸಮಾಜದ 10 ಆಟಗಾರರು ಸೇರಿದಂತೆ 14 ಮಂದಿಯನ್ನು ಮತ್ತು ಶ್ರೀ ಮಂಗಲ ತಂಡವನ್ನು ಹಾಕಿ ಕೂರ್ಗ್ ಸಂಸ್ಥೆ ಯಾವುದೇ ಮಾಹಿತಿ ನೀಡದೆ 1 ವರ್ಷ ಅಮಾನತು ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಟಗಾರರಿಗೆ ಯಾವುದೇ ನೋಟಿಸ್ ನೀಡದೆ ಏಕಾಏಕಿ ಅಮಾನತು ಮಾಡಿರುವುದು ಖಂಡನೀಯ. ಹಾಕಿ ಕೂರ್ಗ್ ಸಂಸ್ಥೆ ಆಸಕ್ತ ಕ್ರೀಡಾಪಟುಗಳ ಕ್ರೀಡಾ ಬೆಳವಣಿಗೆಗೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕೆ ಹೊರತು ವ್ಯತಿರಿಕ್ತವಾಗಿ ನಡೆದುಕೊಳ್ಳಬಾರದು. ತಮ್ಮ ಸ್ವಪ್ರತಿಷ್ಠೆ ಮತ್ತು ಸ್ವಾರ್ಥಕ್ಕಾಗಿ ಸಂಸ್ಥೆಯನ್ನು ಬಳಸಿಕೊಳ್ಳಬಾರದು ಎಂದು ತಿಳಿಸಿದ ಅನೂಪ್ ಉತ್ತಯ್ಯ, ತಿಳಿಯದೆ ಆದ ತಪ್ಪಿಗೆ ಲಿಖಿತ ರೂಪದಲ್ಲಿ ತಾವು ಕ್ಷಮೆ ಕೋರಿದ್ದರೂ ಅಮಾನತುಗೊಳಿಸುವಂತಹ ಕಠಿಣ ಕ್ರಮ ಕೈಗೊಂಡಿರುವುದು ಯಾವ ಸಾಧನೆಗಾಗಿ ಎಂದು ಪ್ರಶ್ನಿಸಿದರು.

ಬಾಳುಗೋಡು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಹಾಕಿ ಕೂರ್ಗ್ ಸಂಸ್ಥೆಯಿಂದ ಅನುಮತಿ ಪಡೆದಿಲ್ಲ ಎನ್ನುವ ಸಣ್ಣ ಕಾರಣಕ್ಕಾಗಿ ಅಮಾನತು ಕ್ರಮ ಕೈಗೊಳ್ಳುವ ಮೂಲಕ ಅಮಾಯಕ ಆಟಗಾರರಿಗೆ ಅನ್ಯಾಯ ಮಾಡಲಾಗಿದೆ. ಕ್ರೀಡೆ ಎಂಬುವುದು ಬಾಂಧವ್ಯವನ್ನು ಬೆಸೆಯಲು ಇರುವ ಕ್ಷೇತ್ರವೇ ಹೊರತು ಸ್ವಾರ್ಥ ಸಾಧನೆಗಾಗಿ ಅಲ್ಲ. ಹಾಕಿ ಕೂರ್ಗ್ ಎಂಬ ಸಂಸ್ಥೆ ಕೊಡಗಿನ ಎಲ್ಲಾ ಹಾಕಿ ಆಟಗಾರರನ್ನು ತನ್ನ ಅಧೀನದಲ್ಲಿ ನೋಂದಾಯಿಸಿಕೊಂಡು ಇಲ್ಲದ ನೀತಿ ನಿಯಮಗಳನ್ನು ಆಟಗಾರರ ಮೇಲೆ ಹೇರಿ ಕ್ರೀಡಾ ಭವಿಷ್ಯವನ್ನು ಹಾಳು ಮಾಡುತ್ತಿದೆ ಎಂದು ಆರೋಪಿಸಿದರು.

ಆಟಗಾರರ ಭವಿಷ್ಯದ ದೃಷ್ಟಿಯಿಂದ ಅಮಾನತುಗೊಂಡವರ ಪರವಾಗಿ ಹೈಕೋರ್ಟ್ ವಕೀಲ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರ ಮೂಲಕ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಅಮಾನತಿಗೆ ತಡೆಯಾಜ್ಞೆ ದೊರೆತ್ತಿದೆ. ಇದಕ್ಕೆ ವಕೀಲ ಅಚ್ಚಪಂಡ ಗಿರಿ ಉತ್ತಪ್ಪ ಸಹಕರಿಸಿದ್ದಾರೆ ಎಂದರು. ಕೊಡಗು ಹೆಚ್ಚಿನ ಆಟಗಾರರನ್ನು ಭಾರತ ತಂಡಕ್ಕೆ ನೀಡಿರುವ ಪುಟ್ಟ ಜಿಲ್ಲೆ. ಇಲ್ಲಿನ ಬಾಲಕ, ಬಾಲಕಿಯರು ತಮ್ಮ ಪ್ರಾಥಮಿಕ ಶಿಕ್ಷಣದಲ್ಲೇ ಹಾಕಿ ಪಂದ್ಯಾವಳಿಯನ್ನು ಜೀವನದ ಒಂದು ಭಾಗವಾಗಿ ಪರಿಗಣಿಸಿ ಹೆಚ್ಚಿನ ಸಮಯವನ್ನು ಕ್ರೀಡಾಕೂಟಕ್ಕಾಗಿ ಮುಡುಪಾಗಿಟ್ಟಿದ್ದಾರೆ. ಹಿಂದಿನಿಂದಲೂ ಹಿರಿಯರು ಎಲ್ಲಾ ಬಾಲಕ, ಬಾಲಕಿಯರನ್ನು ಪಂದ್ಯಾವಳಿಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರಣೆ ನೀಡಿ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಅಲ್ಲದೆ ಅಗತ್ಯ ಸಹಕಾರವನ್ನು ನೀಡಿದ್ದಾರೆ. ಹಾಕಿ ಆಟಗಾರರ ಕ್ರೀಡಾ ಬೆಳವಣಿಗೆಗಾಗಿ ಹಾಕಿ ಕೂರ್ಗ್ ಸಂಸ್ಥೆ ರಚನೆಗೊಂಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಆಟಗಾರರ ಭವಿಷ್ಯವನ್ನು ಹಾಳುಮಾಡುವ ಕಾರ್ಯ ನಡೆಯುತ್ತಿದೆ ಎನ್ನುವ ಸಂಶಯ ಮೂಡುತ್ತಿದೆ ಎಂದು ಅನೂಪ್ ಉತ್ತಯ್ಯ ಆರೋಪಿಸಿದರು.

ಹಾಕಿಪಟು ಚೌರೀರ ನಿರನ್ ಮಂದಣ್ಣ ಮಾತನಾಡಿ, ಹಾಕಿ ಕೂರ್ಗ್ ಸಂಸ್ಥೆ ಜಾರಿಗೆ ತಂದಿರುವ ನಿಯಮಗಳನ್ನು ಆಟಗಾರರಿಗೆ ಮನವರಿಕೆ ಮಾಡಿಕೊಟ್ಟಿದೆಯೇ, ಜಿಲ್ಲೆಯ ಹಾಕಿ ಪಟುಗಳ ಬೆಳವಣಿಗೆಗೆ ಈ ಸಂಸ್ಥೆ ಏನು ಕೊಡುಗೆ ನೀಡಿದೆ ಎಂದು ಪ್ರಶ್ನಿಸಿದರು.

ಗೋಷ್ಠಿಯಲ್ಲಿ ಕಂಬೀರಂಡ ಗೌತಮ್, ಸದಸ್ಯ ಚೌರೀರ ಸೋಮಣ್ಣ, ಚೌರೀರ ಶ್ಯಾಂ ಗಣಪತಿ ಉಪಸ್ಥಿತರಿದ್ದರು.

ನಾಳೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಚಾಮರಾಜನಗರ, ಡಿ.1– ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ ಡಿ.3 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಮಧ್ಯಾಹ್ನ 12 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಜಾವಾಣಿ ಹಾಗೂ ಕರ್ನಾಟಕ ಗಡಿ ಪ್ರದೇಶದ ಸಹಯೋಗದಲ್ಲಿ ಜಿಲ್ಲೆಯಲ್ಲಿ ಗಡಿ ಉತ್ಸವ ಹಾಗೂ ಗಡಿಭಾಗದ ಸಮಸ್ಯೆಗಳ ಬಗ್ಗೆ ವಿಚಾರ ಸಂಕಿರಣ ಆಯೋಜಿಸುವ ಕುರಿತು ಪೂರ್ವಭಾವಿ ಸಭೆಯಲ್ಲಿ ಭಾಗವಹಿಸುವರು.

ಮಧ್ಯಾಹ್ನ 2 ಗಂಟೆಗೆ ಗಡಿ ಪ್ರಾಧಿಕಾರದ ಅನುದಾನದ ಅಡಿಯಲ್ಲಿ ನಿರ್ಮಿತವಾದ ಶಾಲಾ, ಕಾಲೇಜು, ಸಂಘ–ಸಂಸ್ಥೆಗಳಿಗೆ ಭೇಟಿ ನೀಡಿ ಅವಲೋಕನ ನಡೆಸುವರು. ಸಂಜೆ 6 ಗಂಟೆಗೆ ಜಿಲ್ಲೆಯಲ್ಲಿ ಮುದ್ದುರಾಮ ಟ್ರಸ್ಟ್ ವತಿಯಿಂದ ಪ್ರೊ. ಕೆ.ಸಿ. ಶಿವಪ್ಪ ಅವರಿಗೆ ನೀಡಲಾಗುವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಭಾಗವಹಿಸುವರು. ರಾತ್ರಿ 8 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಅಂಗನವಾಡಿ ನೌಕರರ ಪ್ರತಿಭಟನೆ

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಡಿಸಿಗೆ ಮನವಿ



ಚಾಮರಾಜನಗರ, ಡಿ.1– ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಸಂಘದ ಜಿಲ್ಲಾಧ್ಯಕ್ಷೆ ಕೆ.ಸುಜಾತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷೆ ಕೆ.ಸುಜಾತ ಮಾತನಾಡಿ, ಗ್ರಾಜ್ಯುಯಿಟಿ ಪಾವತಿಸಲು ಕೂಡಲೇ ಸರ್ಕಾರ ನಿರ್ದೇಶನ ನೀಡಬೇಕು, ಅಂಗನವಾಡಿ ಕೇಂದ್ರಗಳಲ್ಲಿಯೇ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಬೇಕು, ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕಿಯರನ್ನಾಗಿ ಪರಿಗಣಿಸಬೇಕು. ಅನ್ನದೊಟ್ಟಿಗೆ ಅಕ್ಷರ ಕೇಂದ್ರವಾಗಿ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸಿ, ಬಲಿಷ್ಠಪಡಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗರತ್ನ ಮಾತನಾಡಿ, ನಿವೃತ್ತಿಯಾಗಿರುವ ಅಂಗನವಾಡಿ ನೌಕರರಿಗೆ ಗ್ರಾಜ್ಯುಯಿಟಿ ನೀಡಬೇಕು. ಅಂಗನವಾಡಿಯಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಮೊಬೈಲ್‌ನಲ್ಲಿ 3 ಬಾರಿ, ಲಿಖಿತ ರೂಪದಲ್ಲಿ ಪ್ರತಿ ನಿತ್ಯ 2 ಬಾರಿ ಹಾಜರಾತಿ ಪುಸ್ತಕಗಳನ್ನು ಕಾರ್ಯಕರ್ತೆ ಬರೆಯಬೇಕು ಎನ್ನುವುದೇ ಮುಖ್ಯ ಕೆಲಸವಾಗಬಾರದು. ಆದ್ದರಿಂದ ಮೊಬೈಲ್ ಅಥವಾ ಪುಸ್ತಕ ಯಾವುದಾದರೊಂದರಲ್ಲಿ ಬರೆಯುವುದನ್ನು ನಿರ್ಧರಿಸಬೇಕು. ಮೊಬೈಲ್‌ನಲ್ಲಿ ಮಾಡಬೇಕಾದರೆ ಮೊಬೈಲ್ ಕೊಟ್ಟು 4 ವರ್ಷಗಳು ಕಳೆದಿದೆ ಮೊಬೈಲ್ ಹಳೆಯದಾಗಿದ್ದು, ಅದು ಕೆಲಸ ಮಾಡುತ್ತಿಲ್ಲ. ಆಗಾಗಿ ಮೊಬೈಲ್ ಮೂಲಕ ದಾಖಲಾತಿ ಬರೆಯಬೇಕಾದರೆ ಹೊಸ ಮೊಬೈಲ್ ಕೊಡಬೇಕು. ಕಳೆದ 9 ತಿಂಗಳನಿಂದ ಮೊಟ್ಟೆ ಕೊಟ್ಟಿಲ್ಲ. ತಕ್ಷಣದಲ್ಲಿ ಮೊಟ್ಟೆ ಕೊಡಬೇಕು. ಮುಂಗಡ ಹಣ ಕಟ್ಟಬೇಕು. ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಜಿಲ್ಲಾ ಖಜಾಂಚಿ ಜೆ.ಭಾಗ್ಯ, ಚಾಮರಾಜನಗರ ತಾಲೂಕು ಕಾರ್ಯದರ್ಶಿ ಶಾಹಿದಾಬಾನು, ಖಜಾಂಚಿ ಎನ್.ಎಸ್.ಗುರುಲಿಂಗಯ್ಯ, ಯಳಂದೂರು ತಾಲೂಕು ಅಧ್ಯಕ್ಷೆ ಮಿನಾಕ್ಷಿ, ಕಾರ್ಯದರ್ಶಿ ಭಾಗ್ಯ, ಖಜಾಂಚಿ ಕೆಂಪಮ್ಮ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷೆ ಸುಜಿಯಾ, ಕಾರ್ಯದರ್ಶಿ ಗುರುಮಲ್ಲಮ್ಮ, ಖಜಾಂಚಿ ಸುಮಿತ್ರ, ಸಂತೇಮರಹಳ್ಳಿ ಅಧ್ಯಕ್ಷೆ ಪಾರ್ವತಮ್ಮ, ಕಾರ್ಯದರ್ಶಿ ತುಳಸಮ್ಮ, ಖಜಾಂಚಿ ಜಯಮಾಲ, ಸದಸ್ಯರಾದ ರೇವಮ್ಮ ಅನುಸೂಯ, ಪುಷ್ಪ, ರಾಜಮ್ಮ ಸರೋಜ, ಸುನೀತರಾಣಿ, ಕಾಂಚನಾ, ಸುಧಾ, ಭಾಗ್ಯಲಕ್ಷ್ಮಿ, ಅನಿತ, ದೇವಮ್ಮ, ಮಂಜಮ್ಮ, ನಿರ್ಮಲ, ರೋಜಕುಮಾರಿ, ಮಹದೇವಮ್ಮ, ಮಂಜುಳ, ಪ್ರೇಮಲತಾ, ಪುಟ್ಟಮ್ಮ, ತುಳಸಮ್ಮ, ನೀಲಾಂಬಿಕೆ, ಸವಿತಾ, ಮೀನಾ ಇತರರಿದ್ದರು.

ಸಿಎಂ ಭೇಟಿ ಹಿನ್ನೆಲೆ: ಡಿಸಿ ಸಿದ್ಧತೆ ಪರಿಶೀಲನೆ

ಚಾಮರಾಜನಗರ, ಡಿ.1– ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡುವುದು ಖಚಿತವಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅಧಿಕಾರಿಗಳೊಂದಿಗೆ ಪೂರ್ವ ಸಿದ್ದತಾ ಸಭೆ ನಡೆಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮುಖ್ಯಮಂತ್ರಿಯವರಿಂದ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಬೇಕಿರುವ ಅಭಿವೃದ್ಧಿ ಕಾಮಗಾರಿಗಳ ವಿವರ, ಇದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಿರುವ ಸಿದ್ದತಾ ಕ್ರಮಗಳಿಗೆ ತ್ವರಿತವಾಗಿ ಮುಂದಾಗುವಂತೆ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾಮರಾಜನಗರ ಹಾಗೂ ಹನೂರಿನಲ್ಲಿ ಮುಖ್ಯಮಂತ್ರಿಯವರು ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ, ನೆರವೇರಿಸಿ, ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲಿದ್ದಾರೆ. ಮಲೆಮಹದೇಶ್ವರ ಬೆಟ್ಟಕ್ಕೂ ಭೇಟಿ ನೀಡಲಿದ್ದಾರೆ. ಹೀಗಾಗಿ ಈ ಎಲ್ಲಾ ಕಾರ್ಯಕ್ರಮಗಳಿಗೆ ಪ್ರತ್ಯೇಕ ಅಧಿಕಾರಿಗಳ ತಂಡ ಸಿಬ್ಬಂದಿ ನಿಯೋಜನೆಯಾಗಬೇಕು. ಈ ನಿಟ್ಟಿನಲ್ಲಿ ಜವಾಬ್ದಾರಿಗಳು ನಿಗದಿಪಡಿಸಿ ಕೂಡಲೇ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಟ್ಟಿ ಸಿದ್ದಪಡಿಸಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಚಾಮರಾಜನಗರ ಪಟ್ಟಣ ಹಾಗೂ ಹನೂರಿನಲ್ಲಿ ಕಾರ್ಯಕ್ರಮ ನಡೆಯಲಿರುವುದರಿಂದ ಸಾರ್ವಜನಿಕರಿಗೆ ಕುಳಿತುಕೊಳ್ಳುವ ಆಸನ, ಗಣ್ಯರ ವೇದಿಕೆ, ಫಲಾನುಭವಿಗಳಿಗೆ ಪ್ರತ್ಯೇಕ ಸ್ಥಳ ಸೇರಿದಂತೆ ಇತರೆ ವ್ಯವಸ್ಥೆಗಳು ಸಮರ್ಪಕವಾಗಿರಬೇಕು. ತಾತ್ಕಾಲಿಕ ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ವಾಹನ ನಿಲುಗಡೆ ಇನ್ನಿತರ ಸೌಲಭ್ಯಗಳು ಇರುವಂತೆ ಕ್ರಮವಹಿಸಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ, ಉಪವಿಭಾಗಾಧಿಕಾರಿ ಗೀತಾ ಹುಡೇದ, ಎಲ್ಲಾ ತಾಲೂಕುಗಳ ತಹಶೀಲ್ದಾರರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕಸಮುಕ್ತ ಚಾಮರಾಜನಗರ ಮಾಡಲು ಎಲ್ಲರ ಸಹಕಾರ ಅಗತ್ಯ: ಜಿಲ್ಲಾಧಿಕಾರಿ

ಗೋಡೆಬರಹ ಮೂಲಕ ಸ್ವಚ್ಛತಾ ಅರಿವು ಕಾರ್ಯಕ್ರಮ



ಚಾಮರಾಜನಗರ, ಡಿ.1– ಕಸಮುಕ್ತ ಚಾಮರಾಜನಗರ ಮಾಡಲು ಎಲ್ಲರ ಸಹಕಾರ ಅಗತ್ಯ ಎಂದು ಜಿಲ್ಲಾ ಧಿಕಾರಿ ಡಿ.ಎಸ್.ರಮೇಶ್ ಮನವಿ ಮಾಡಿದರು.

ನಗರದ 12ನೇ ವಾರ್ಡ್ ನ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದ ಪಕ್ಕದಲ್ಲಿ ನಗರಸಭೆ ಹಾಗೂ ಯೂತ್ ಫಾರ್ ಸೇವಾ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಸ್ವಚ್ಛತಾ ಅರಿವು ಕಾರ್ಯಕ್ರಮಕ್ಕೆ ಸ್ವತಹ ಜಿಲ್ಲಾಧಿಕಾರಿಗಳೇ ಗೋಡೆಯ ಮೇಲೆ ಕುಂಚದಿಂದ ಚಿಟ್ಟೆ ಬಿಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ನಗರಸಭೆ, ಯೂತ್‌ಫಾರ್ ಸೇವಾ ಸಂಸ್ಥೆ ಹಮ್ಮಿಕೊಂಡಿರುವ ಗೋಡೆ ಬರಹ ಸ್ವಚ್ಛತಾ ಅರಿವು ಕಾರ್ಯಕ್ರಮ ಒಂದು ಒಳ್ಳೆಯ ಕಾರ್ಯಕ್ರಮವಾಗಿದ್ದು, ಸಮುದಾಯಕ್ಕೆ ಸ್ವಚ್ಛತೆ ಬಗ್ಗೆ ಅರಿವು ಉಂಟು ಮಾಡಲು ಸಹಕಾರಿಯಾಗಿದೆ. ರಾಶಿ ರಾಶಿ ಬಿದ್ದಿದ್ದ ಕಸವನ್ನು ತೆರವುಗೊಳಿಸಿ ಗೋಡೆಗೆ ಬಣ್ಣಹಚ್ಚಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ವಿವಿಧ ಚಿತ್ರಗಳನ್ನು ಬಿಡಿಸುವ ಮೂಲಕ ಸುಂದರವಾಗಿ ಕಾಣುವಂತೆ ಮಾಡಿದ್ದಾರೆ. ಇದನ್ನು ಶಾಲಾ ಮಕ್ಕಳು ನೋಡಿದರೆ ಖುಷಿಯಾಗುತ್ತದೆ. ಜನರು ಕೂಡ ಇದೆ ರೀತಿ ಇಟ್ಟುಕೊಳ್ಳುವಂತೆ ಸಂದೇಶ ಹೋಗಬೇಕು ಎಂದರು.

ಪ್ರತಿ ತಿಂಗಳು ಬೆಸ್ಟ್ ವಾರ್ಡ್‌ಗೆ ಸನ್ಮಾನ: ಇದು ನಗರದ 31 ವಾರ್ಡ್‌ಗಳಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಾಡಲಾಗುವುದು. ಮನೆಗಳಲ್ಲಿ ಬರುವ ಒಣಕಸ, ಹಸಿಕಸವನ್ನು ಪ್ರತ್ಯೇಕ ಮಾಡಿ ಕೊಡಬೇಕೆಂದು ಮನೆಮನೆಗೆ ಹೋಗಿ ಒಂದು ವಾರಗಳ ಕಾಲ ಅರಿವು ಮೂಡಿಸಬೇಕು. ಆ ಮೇಲೆ ಕೂಡ ಒಣಕಸ, ಹಸಿಕಸ ಒಟ್ಟಿಗೆ ಕೊಡುವ ಮನೆಗಳಿಂದ ಕಸವನ್ನೇ ತೆಗೆದುಕೊಳ್ಳಬೇಡಿ. ಈ ಸಂಬಂಧ ನಗರಸಭಾ ಸದಸ್ಯರು, ಅಧಿಕಾರಿಗಳು ಸಹಕರಿಸುತ್ತಿದ್ದಾರೆ. ಒಣಕಸ, ಹಸಿಕಸ ಪ್ರತ್ಯೇಕ ಮಾಡಿ ಕೊಡುವ ವಾರ್ಡುಗಳಿಗೆ ಪ್ರತಿ ತಿಂಗಳು ಬೆಸ್ಟ್ ವಾರ್ಡ್ ಎಂದು ಸನ್ಮಾನ ಮಾಡಲು ತೀರ್ಮಾನ ಮಾಡಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ವಾರ್ಡ್‌ನ ಸದಸ್ಯ ಅಬ್ರಾರ್‌ಅಹಮದ್, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜು, ಸುಷ್ಮಾ, ಸಹಾಯಕ ಕಾರ್ಯಪಾಲಕ ಅಭಿಯಂತರಾದ (ಪರಿಸರ)ಗಿರಿಜಮ್ಮ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ಯೂತ್ ಫಾರ್ ಸೇವಾ ಸಂಸ್ಥೆ ಸಂಯೋಜಕ ವಿಷ್ಣು ಹಾಗೂ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯುವ ಜನತೆಗೆ ನಾಟಕ, ರಂಗಭೂಮಿಯತ್ತ ಆಸಕ್ತಿ ಅಗತ್ಯ



ಚಾಮರಾಜನಗರ, ಡಿ.1– ಇಂದಿನ ಯುವ ಜನತೆ ನಾಟಕ, ರಂಗಭೂಮಿಯತ್ತ ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಶಾಂತಲಾ ಕಲಾವಿದರ ತಂಡದ ಅಧ್ಯಕ್ಷ ಅಬ್ರಹಾಂ ಡಿ.ಸಿಲ್ವ ನೀಡಿದರು.

ನಗರದ ಜೆಎಸ್‌ಎಸ್ ಬಾಲಿಕಾ ಪ್ರೌಢ ಶಾಲೆಯ ಆವರಣದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದಿಂದ ಆಯೋಜಿಸಿದ್ದ ಮೂರು ದಿನಗಳ ರಂಗೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್, ಟಿವಿಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಅವರನ್ನು ಇದರಿಂದ ಹೊರ ತರಲು ರಂಗಭೂಮಿ ಸೂಕ್ತ ವೇದಿಕೆಯಾಗಿದೆ. ಅಲ್ಲದೇ ಮಕ್ಕಳಲ್ಲಿ ಶಿಕ್ಷಣದ ನ್ಯೂನತೆ, ದೈಹಿಕ ನ್ಯೂನತೆಯನ್ನು ಈ ಕಲೆಯಿಂದ ದೂರ ಮಾಡಬಹುದು. ಇದಕ್ಕೆ ಹಲವು ನಿದರ್ಶನಗಳಿವೆ ಎಂದು ತಿಳಿಸಿದರು.

ಜೆಎಸ್‌ಎಸ್ ಸಂಸ್ಥೆಯಲ್ಲಿ ಆಯೋಜಿಸಿರುವ ರಂಗೋತ್ಸವವನ್ನು ವಿದ್ಯಾರ್ಥಿನಿಯರು ಉತ್ಸವದ ರೀತಿಯಲ್ಲಿ ಆಚರಿಸಬೇಕು. ನಾಟಕ, ಸಿನಿಮಾಗಳಿಂದ ಭವಿಷ್ಯವಿಲ್ಲ ಎಂಬ ಕೀಳರಿಮೆಯನ್ನು ಬಿಡಬೇಕು. ರಂಗಭೂಮಿಯಲ್ಲಿ ಪಳಗಿದ ನೂರಾರು ಕಲಾವಿದರು ಇಂದು ಉನ್ನತ ಸ್ಥಾನದಲ್ಲಿದ್ದಾರೆ ಎಂದು ಕಿವಿ ಮಾತು ಹೇಳಿದರು.

ನಂತರ ಕಿರುತೆರೆ ಕಲಾವಿದ ಲೋಕೇಶ್ ಬಸವಟ್ಟಿ ಮಾತನಾಡಿ, ನಮ್ಮ ಜೀವನ ಶೈಲಿಯಲ್ಲಿ ಅತಿಮುಖ್ಯವಾದ ಪಾತ್ರವನ್ನು ರಂಗಶಿಕ್ಷಣ ನೀಡುತ್ತಿದೆ. ಇಂತಹ ಶಿಕ್ಷಣವನ್ನು ಜೆಎಸ್‌ಎಸ್ ಸಂಸ್ಥೆ ಮಕ್ಕಳಿಗೆ ನೀಡುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಇದೇ ವೇಳೆ 'ಶ್ರೀಮಾನ್ ಶ್ರೀಮತಿ' ಧಾರಾವಾಹಿಯ ಕೆಲವು ಹಾಸ್ಯ ತುಣುಕುಗಳನ್ನು ಹೇಳುವ ಮೂಲಕ ನೆರೆದಿದ್ದ ವಿದ್ಯಾರ್ಥಿಗಳನ್ನು ರಂಜಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ಜೆಎಸ್‌ಎಸ್ ಸಂಸ್ಥೆಯಿಂದ 9 ವರ್ಷಗಳ ರಂಗೋತ್ಸವ ಕಾರ್ಯಕ್ರಮ ನಡೆಸಲಾಯಿತು. ಆದರೆ, ಕಳೆದೆರಡು ವರ್ಷಗಳಿಂದ ಕೊರೊನಾದಿಂದ ಕಾರ್ಯಕ್ರಮ ಸ್ಥಗಿತಗೊಳಿಸಲಾಗಿತ್ತು. ಈ ಬಾರಿ ಮತ್ತೆ ಚಾಮರಾಜನಗರ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಂಗೋತ್ಸವ ಕಾರ್ಯಕ್ರಮದ ಸಂಚಾಲಕ ಚಂದ್ರಶೇಖರಾಚಾರ್ ಹೆಗ್ಗೊಠಾರ, ಜೆಎಸ್‌ಎಸ್ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ.ಸ್ವಾಮಿ, ಪ್ರಾಚಾರ್ಯ ಸಿದ್ದರಾಜು ಹಾಜರಿದರು.

ವೇದಿಕೆ ಕಾರ್ಯಕ್ರಮದ ನಂತರ 'ಹಲಗಲಿ ಬೇಡರು' ನಾಟಕ ಪ್ರದರ್ಶನ ನಡೆಯಿತು.



ಗುಂಡ್ಲುಪೇಟೆ ತಾಲೂಕಿನ ಹಸಗೂಲಿ ಎಚ್.ಎಸ್. ಗಂಗಾಧರಪ್ಪ ತಮ್ಮ ಬೆಂಬಲಿಗರೊಂದಿಗೆ ಶಾಸಕ ಸಿಎಸ್.ನಿರಂಜನ ಕುಮಾರ್ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಮೂರನೇ ಪುಟದಿಂದ



ಮೈಸೂರು ರಿಂಗ್ ರಸ್ತೆ ಈಗ ಎಲ್‌ಇಡಿ ದೀಪದ ವ್ಯವಸ್ಥೆಗೆ ಸಂಸದ ಪ್ರತಾಪ್‌ಸಿಂಹ, ಶಾಸಕ ತನ್ವೀರ್ ಸೇಠ್ ಗುರುವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಡಾ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ಎಲ್‌ಇಡಿ ಬೆಳಕಲ್ಲಿ ಈಗ ಕಂಗೊಳಿಸುತ್ತಿದೆ

ಕಗ್ಗತ್ತಲಲ್ಲಿ ಮುಳುಗಿರುತ್ತಿತ್ತು. ಕತ್ತಲೆಯನ್ನೇ ಬಳಸಿಕೊಂಡು ದುಷ್ಕರ್ಮಿಗಳು ಪದೇ ಪದೆ ರಿಂಗ್ ರಸ್ತೆಯಲ್ಲಿ ಸಂಚರಿಸುವ ವಾಹನಗಳ ತಡೆದು, ಚಾಲಕರನ್ನು ಸುಲಿಗೆ ಮಾಡುತ್ತಿದ್ದರು. ರಿಂಗ್ ರಸ್ತೆಯ ಕೆಲವೆಡೆ ಕತ್ತಲೆಯಲ್ಲಿ ಕುಡುಕರು ಪಾನಗೋಷ್ಠಿ ನಡೆಸುತ್ತಿದ್ದರು. ಈ ರಸ್ತೆಯಲ್ಲಿ ಸಂಚರಿಸಲು ಪ್ರಮುಖವಾಗಿ ದ್ವಿಚಕ್ರ ವಾಹನ ಸವಾರರು ಹೆದರುವಂತಹ ಪರಿಸ್ಥಿತಿ ಇತ್ತು. ಇದನ್ನು ಮನಗಂಡ ಸಂಸದ ಪ್ರತಾಪ್ ಸಿಂಹ ರಿಂಗ್ ರಸ್ತೆಯಲ್ಲಿ ಶಾಶ್ವತವಾಗಿ ವರ್ಷವಿಡೀ ಎಲ್‌ಇಡಿ ಬಲ್ಬ್‌ಗಳು ಪ್ರಜ್ವಲಿಸುವ ಮೂಲಕ ವಾಹನ ಸವಾರರ ಭಯದ ವಾತಾವರಣವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಮುಡಾ ಮತ್ತು ನಗರ ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಿ, ದಸರಾಗೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ರಿಂಗ್ ರಸ್ತೆಯಲ್ಲಿ ಅಂಡರ್ ಗ್ರೌಂಡ್ ಕೇಬಲ್ ಲೈನ್ ಮತ್ತು ಎಲ್‌ಇಡಿ ಬಲ್ಬ್ ಅಳವಡಿಕೆ ಕಾಮಗಾರಿಗೆ ಚಾಲನೆ ಕೊಡಿಸಿದ್ದರು.

ಈ ಕಾಮಗಾರಿಗೆ ತಗಲುವ ವೆಚ್ಚ 12 ಕೋಟಿ ರೂ.ಗಳನ್ನು ಮುಡಾದಿಂದ ಭರಿಸುವುದು ಹಾಗೂ ವಿದ್ಯುದ್ದೀಪಗಳ ನಿರ್ವಹಣೆಯ ಹೊಣೆಯನ್ನು ನಗರ ಪಾಲಿಕೆ ವಹಿಸಿಕೊಳ್ಳುವುದು ಎಂದು ನಿರ್ಧಾರವಾಗಿತ್ತು. ಅದರಂತೆ ಇದೀಗ ರಿಂಗ್ ರಸ್ತೆಯ ಶೇ.50ರಷ್ಟು ಭಾಗದಲ್ಲಿ ಎಲ್‌ಇಡಿ ಬಲ್ಬ್‌ಗಳು ಇಂದು ರಾತ್ರಿಯಿಂದ ಬೆಳಗುತ್ತಿವೆ. ಇನ್ನುಳಿದಂತೆ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಕೆಆರ್‌ಎಸ್ ರಸ್ತೆ, ಹಿನಕಲ್ ಜಂಕ್ಷನ್, ಬೋಗಾದಿ, ದಟ್ಟಗಳ್ಳಿ ಹಾಗೂ ಹೆಚ್.ಡಿ.ಕೋಟೆ ಜಂಕ್ಷನ್ ಮೂಲಕ ನಂಜನಗೂಡು ಜಂಕ್ಷನ್‌ವರೆಗಿನ ಎಲ್‌ಇಡಿ ಬಲ್ಬ್‌ಗಳು ಡಿಸೆಂಬರ್ 10ರೊಳಗೆ ಬೆಳಗಲಿವೆ ಎಂದು ನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ. ಒಟ್ಟು 42.5 ಕಿ.ಮೀ. ಉದ್ದದ ಮೈಸೂರು ರಿಂಗ್ ರಸ್ತೆಯಲ್ಲಿ 20 ಹೈಮಾಸ್ಟ್ ಲೈಟ್‌ಗಳನ್ನು ಅಳವಡಿಸಲಾಗುತ್ತಿದೆ. ಶಿಥಿಲಾವಸ್ಥೆಯಲ್ಲಿದ್ದ 87 ವಿದ್ಯುತ್ ಕಂಬಗಳನ್ನು ಬದಲಿಸಲಾಗಿದೆ. ಹಾಗೂ ಕಂಟ್ರೋಲ್ ಯೂನಿಟ್ ಅಳವಡಿಸುವ ಕಾರ್ಯವೂ ಪ್ರಗತಿಯಲ್ಲಿದ್ದು, ಡಿಸೆಂಬರ್ 10ರೊಳಗೆ ಅದು ಪೂರ್ಣಗೊಳ್ಳಲಿದೆ ಎಂದು ಇಂದು ಬೆಳಗ್ಗೆ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ನಗರ ಪಾಲಿಕೆ ಕಚೇರಿಯಲ್ಲಿ ನಡೆದ ಪಾಲಿಕೆಯ ವಿದ್ಯುತ್ ವಿಭಾಗದ ಅಧಿಕಾರಿಗಳ ಸಭೆಯ ಬಳಿಕ ಪಾಲಿಕೆ ಆಯುಕ್ತರು ತಿಳಿಸಿದರು.

“ರಿಂಗ್ ರಸ್ತೆಗೆ ವರ್ಷವಿಡೀ ಬೆಳಗುವ ಬೀದಿ ದೀಪಗಳ ಅವಶ್ಯಕತೆ ಇತ್ತು. ಈ ಹಿಂದೆಯೇ ರಿಂಗ್ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲಾಗಿತ್ತಾದರೂ, ಕಿಡಿಗೇಡಿಗಳು ವಿದ್ಯುತ್ ವೈರ್‌ಗಳನ್ನು ಕಳವು ಮಾಡುತ್ತಿದ್ದರಿಂದ ಈ ರಸ್ತೆ ಕತ್ತಲೆಯಲ್ಲಿ ಮುಳುಗಿತ್ತು. ಬೆಂಗಳೂರಿನಿಂದ ಮೈಸೂರಿಗೆ ಬರುವ ಪ್ರವಾಸಿಗರು ಈ ರಸ್ತೆಯನ್ನು ಹೆಚ್ಚಾಗಿ ಬಳಸುತ್ತಾರೆ. ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಹಂಚ್ಯಾ–ಸಾತಗಳ್ಳಿ ಮೂಲಕ ನಂಜನಗೂಡು ಜಂಕ್ಷನ್‌ವರೆಗೆ ಮೊದಲು ವಿದ್ಯುದ್ದೀಪಗಳ ಅಳವಡಿಕೆ ಶಾಶ್ವತವಾಗಿ ಆಗಬೇಕು ಎಂದು ಒತ್ತಾಯಿಸಿದ್ದೆ. ಅದರಂತೆ ಇಂದು ಈ ರಸ್ತೆಯಲ್ಲಿ ದೀಪಗಳು ಬೆಳಗುತ್ತಿವೆ. ಇದರಿಂದ ಸಾರ್ವಜನಿಕರಿಗೆ ಅತೀ ಹೆಚ್ಚು ಅನುಕೂಲವಾಗಲಿದೆ.

– ತನ್ವೀರ್ ಸೇಠ್, ಎನ್.ಆರ್.ಕ್ಷೇತ್ರದ ಶಾಸಕರು.

“ಮೈಸೂರು ರಿಂಗ್ ರಸ್ತೆಯಲ್ಲಿ ವೈನ್ ಶಾಪ್‌ಗಳು ಹೆಚ್ಚಾಗಿವೆ. ಈ ರಸ್ತೆಯಲ್ಲಿ ಕುಡಿದು ಬಾಟಲಿಗಳನ್ನು ಕಂಡ–ಕಂಡಲ್ಲಿ ಬಿಸಾಡುವುದು, ಗಲಾಟೆ ಮಾಡುವುದು ಸರ್ವೇಸಾಮಾನ್ಯವಾಗಿದೆ. ಇದರಿಂದ ಭಯಭೀತರಾದ ಜನರು ಆಗಾಗ ದೂರು ನೀಡುತ್ತಿದ್ದರು. ರಾತ್ರಿ ವೇಳೆ ಕುಡುಕರ ಹಾವಳಿ ಹಾಗೂ ಇನ್ನಿತರೆ ಅಪರಾಧಗಳು ನಡೆಯುತ್ತಿದ್ದ ಹಿನ್ನೆಲೆಯಲ್ಲಿ ರಿಂಗ್ ರಸ್ತೆಯಲ್ಲಿ ಬೆಳಕು ಹರಿಸುವಂತೆ ಮನವಿ ಮಾಡುತ್ತಿದ್ದರು. ಇಂದಿನಿಂದ ಒಂದು ಹಂತದಲ್ಲಿ ರಿಂಗ್ ರಸ್ತೆಯಲ್ಲಿ ಎಲ್‌ಇಡಿ ಬಲ್ಬ್‌ಗಳು ಬೆಳಗಲಿದ್ದು, ಸದ್ಯದಲ್ಲೇ ಪೂರ್ಣ ಪ್ರಮಾಣದಲ್ಲಿ ಎಲ್‌ಇಡಿ ಬಲ್ಬ್‌ಗಳು ಬೆಳಗಲಿವೆ.

ಸಂವಿಧಾನದಲ್ಲೇ ಅವಕಾಶವಿಲ್ಲ

ಹಿತೈಷಿಗಳ ಸಲಹೆ ಮೇರೆಗೆ ಶ್ರೀಕಂಠೇಶ್ವರ ಸನ್ನಿಧಿಯಲ್ಲಿ ನೀಡುವ ಮೃತ್ತಿಕೆಯನ್ನು ಕಿವಿಗೆ ಹಚ್ಚಿದರೆ ಸಮಸ್ಯೆ ಬಗೆಹರಿಯಲಿದೆ. ಭಕ್ತಿಯಿಂದ ಪ್ರಾರ್ಥನೆ ಮಾಡಿದರೆ ಫಲ ಕೊಡುತ್ತಾನೆ ಎಂದರು. ಅದರಂತೆ ಮಾಡಿದಾಗ ನೋವು ನಿವಾರಣೆ ಆಯಿತು ಎಂದು ಶ್ರೀಕಂಠೇಶ್ವರನ ದರ್ಶನಕ್ಕೆ ತಾವು ಬಂದಿರುವ ವಿಚಾರ ಪ್ರಸ್ತಾಪಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಇನ್ನಿತರರು ಇದ್ದರು.

ಕೆಆರ್‌ಎಸ್ ಬೃಂದಾವನ ಪ್ರವಾಸಿಗರಿಗೆ ಮುಕ್ತ

ಹಿತದೃಷ್ಟಿಯಿಂದ ಕೆಆರ್‌ಎಸ್‌ಗೆ ಪ್ರವಾಸಿಗರಿಗೆ ನಿಷೇಧ ಹೇರಲಾಗಿತ್ತು. ಅಲ್ಲದೇ ಪದೇ ಪದೆ ಚಿರತೆ ಅಣೆಕಟ್ಟೆಯಲ್ಲಿ ಕಾಣಿಸಿಕೊಂಡು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ತಲೆಬಿಸಿ ತಂದಿತ್ತು. ಈ ಹಿನ್ನಲೆಯಲ್ಲಿ ಅರಣ್ಯ ಇಲಾಖೆ ಚಿರತೆ ಸೆರೆಗೆ ಬೋನಿಟ್ಟಿತ್ತಾದರೂ, ಪ್ರಯತ್ನ ಫಲಿಸಿರಲಿಲ್ಲ. ಅಲ್ಲದೇ ಮತ್ತೊಮ್ಮೆ ಚಿರತೆ ಅಣೆಕಟ್ಟೆಯ ಉತ್ತರ ದ್ವಾರದ ಬಳಿ ಮುಳ್ಳುಹಂದಿಯೊಂದಿಗೆ ಸೆಣಸಾಡುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿತ್ತು. ಆದರೆ ಕಳೆದ 20 ದಿನಗಳಿಂದ ಚಿರತೆ ಪತ್ತೆಯಾಗದ ಕಾರಣ ಮಂಡ್ಯ ಜಿಲ್ಲಾಡಳಿತದ ಸೂಚನೆ ಮೇರೆಗೆ ಸಾಕಷ್ಟು ಮುಂಜಾಗ್ರತಾ ಕ್ರಮ ಕೈಗೊಂಡು ಬೃಂದಾವನವನ್ನು ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ.

8ನೇ ಸ್ಥಾನದಲ್ಲಿ ಮೈಸೂರು ಜಿಲ್ಲೆ

ಬಗ್ಗೆ ಎಚ್ಚರಿಕೆ ವಹಿಸಬೇಕು. ಅದರಲ್ಲೂ ಯುವಜನಾಂಗ ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು. ಏಡ್ಸ್ ಪೀಡಿತರನ್ನು ಕೀಳಾಗಿ ಕಾಣುವ ಮನೋಭಾವ ಹೋಗಬೇಕು. ನೈತಿಕವಾಗಿ ಅವರನ್ನು ಬೆಂಬಲಿಸಬೇಕು ಎಂದು ಜನರಲ್ಲಿ ಮನವಿ ಮಾಡಿದ ಜಿಲ್ಲಾಧಿಕಾರಿಗಳು, ಹೆಚ್‌ಐವಿ ಸೋಂಕಿತರಾಗಿದ್ದರೆ ಆತಂಕಪಡುವ ಅಗತ್ಯವಿಲ್ಲ. ಅದಕ್ಕೆ ಅಗತ್ಯ ಔಷಧೋಪಚಾರ, ಚಿಕಿತ್ಸೆ ಪಡೆಯಲು ಅವಕಾಶವಿದೆ ಎಂದು ಧೈರ್ಯ ತುಂಬಿದರು. ಡಿಹೆಚ್‌ಓ ಡಾ.ಕೆಹೆಚ್.ಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪರೀಕ್ಷಾ ನಿಯಂತ್ರಕ ಡಾ.ಸುಧೀಂದ್ರ ಭಟ್ ಅಧ್ಯಕ್ಷತೆ ವಹಿಸಿದ್ದರು.

13 ಗರ್ಭಿಣಿಯರಿಗೆ ಹೆಚ್‌ಐವಿ ಸೋಂಕು

50,103 ಗರ್ಭಿಣಿಯರ ಪೈಕಿ 24 (ಶೇ.0.4) ಮಂದಿಗೆ ಹೆಚ್‌ಐವಿ ಸೋಂಕು ಪತ್ತೆ ಹಚ್ಚಲಾಯಿತು. 2022–23ರ ಅಕ್ಟೋಬರ್‌ವರೆಗೆ ಪರೀಕ್ಷೆ ಮಾಡಲಾದ 1,03,676 ಮಂದಿ ಪೈಕಿ 440 (ಶೇ.0.42) ಮಂದಿಗೆ ಹಾಗೂ 32,683 ಗರ್ಭಿಣಿಯರ ಪೈಕಿ 13 (ಶೇ.0.03) ಮಂದಿಗೆ ಹೆಚ್‌ಐವಿ ಇರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ವಿವರಿಸಿದರು.

ಮೈಸೂರಲ್ಲಿ ಒಟ್ಟು 25 ಐಸಿಟಿಸಿ ಕೇಂದ್ರಗಳು, ಒಂದು ಮೊಬೈಲ್ ಐಸಿಟಿಸಿ ಕೇಂದ್ರವಿದ್ದು, ಹೆಚ್‌ಐವಿ ಆಪ್ತಸಮಾಲೋಚನೆ ಮತ್ತು ಪರೀಕ್ಷಾ ಸೇವೆಯನ್ನು ಒದಗಿಸುತ್ತಿದೆ. ಜಿಲ್ಲೆಯಲ್ಲಿ 3 (ಕೆ.ಆರ್.ಆಸ್ಪತ್ರೆ, ಜೆಎಸ್‌ಎಸ್ ಹಾಗೂ ಆಶಾಕಿರಣ ಆಸ್ಪತ್ರೆ) ಎಆರ್‌ಟಿ ಚಿಕಿತ್ಸಾ ಕೇಂದ್ರಗಳಿವೆ. ಸೋಂಕಿತರಿಗೆ ಚಿಕಿತ್ಸಾ ಸೌಲಭ್ಯ ಒದಗಿಸುತ್ತಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಐಸಿಟಿಸಿ ಸೇವೆ ಒದಗಿಸುವ ನಿಟ್ಟಿನಲ್ಲಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಫ್‌ಐಸಿಟಿಸಿ ಸೇವೆ ನೀಡಲಾಗುತ್ತಿದೆ. 22 ಖಾಸಗಿ ಆಸ್ಪತ್ರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಎಫ್‌ಐಸಿಟಿಸಿ ಸೇವೆ ಒದಗಿಸಲಾಗುತ್ತಿದೆ ಎಂದರು.

204 ಮೇ ತಿಂಗಳಲ್ಲಿ ಎಆರ್‌ಟಿ ಕೇಂದ್ರ ಕೆ.ಆರ್.ಆಸ್ಪತ್ರೆಯಲ್ಲಿ ಪ್ರಾರಂಭವಾಗಿ ಇದುವರೆಗೆ 16,710 ಹೆಚ್‌ಐವಿ ಸೋಂಕಿತರು ನೋಂದಾಯಿಸಲ್ಪಟ್ಟಿದ್ದಾರೆ. ಆಶಾಕಿರಣ ಆಸ್ಪತ್ರೆಯ ಎಆರ್‌ಟಿ ಕೇಂದ್ರ ಏಪ್ರಿಲ್ 2010ರಿಂದ ಪ್ರಾರಂಭವಾಗಿದ್ದು, ಇದುವರೆಗೆ 3121, ಜೆಎಸ್‌ಎಸ್ ಎಆರ್‌ಟಿ ಕೇಂದ್ರದಲ್ಲಿ 1198 ಮಂದಿ ಸೇರಿದಂತೆ ಒಟ್ಟು 21029 ಸೋಂಕಿತರು ಎಆರ್‌ಟಿ ಕೇಂದ್ರಗಳಲ್ಲಿ ನೋಂದಣಿಯಾಗಿದ್ದಾರೆ.

ಮೂವರು ಮಕ್ಕಳೊಂದಿಗೆ ಆತ್ಮಹತ್ಯೆ

ಕಾರು ಮೆಕ್ಯಾನಿಕ್ ಆಗಿದ್ದು, ಸುಮಾರು ಒಂದು ವರ್ಷದಿಂದ ಈ ದಂಪತಿ ನಡುವೆ ಕಲಹ ಉಂಟಾಗಿತ್ತು ಎಂದು ಹೇಳಲಾಗಿದೆ. ಇದರಿಂದ ಬೇಸತ್ತ ಉಸ್ಮಾ ಕೌಸರ್ ಇಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ಮೂವರು ಮಕ್ಕಳಿಗೂ ವಿಷ ಉಣಿಸಿ, ಅವರು ಮೃತಪಟ್ಟಿರುವುದನ್ನು ಖಚಿತಪಡಿಸಿಕೊಂಡ ನಂತರ ತಾನೂ ನೇಣಿಗೆ ಶರಣಾದರು ಎಂದು ಹೇಳಲಾಗಿದೆ. ರಾತ್ರಿ ಮನೆಯವರು ಹಿಂತಿರುಗಿದಾಗ ಈ ಘಟನೆ ಬೆಳಕಿಗೆ ಬಂದಿದೆ. ವಿಷಯ ತಿಳಿದ ತಕ್ಷಣ ಮದ್ದೂರು ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಮೃತದೇಹಗಳನ್ನು ವಶಕ್ಕೆ ಪಡೆದು ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟಿರುವ ಆರೋಪ

ಅನಗತ್ಯವಾಗಿ ಯಾರ ಹೆಸರೂ ಕೈಬಿಟ್ಟಿಲ್ಲ: ಡಿಸಿ ಸ್ಪಷ್ಟನೆ

ಮೈಸೂರು,ಡಿ.1(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಉದ್ದೇಶ ಪೂರ್ವಕವಾಗಿ 1.45 ಲಕ್ಷ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದು ಆರೋಪಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ನಿಯೋಗ ಬುಧವಾರ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ, ಮತದಾರರ ಪಟ್ಟಿಯಲ್ಲಿನ ದೋಷಗಳ ಸರಿಪಡಿಸುವಂತೆ ಮನವಿ ಸಲ್ಲಿಸಿತು.



ಜಿಲ್ಲಾಧಿಕಾರಿ ಕಚೇರಿಯ ನ್ಯಾಯಾಲಯದ ಕೊಠಡಿಯಲ್ಲಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರು ಕಾಂಗ್ರೆಸ್ ನಿಯೋಗದಿಂದ ಮನವಿ ಸ್ವೀಕರಿಸಿ, ಮತದಾರರ ಪಟ್ಟಿಯಿಂದ ನಿಯಮಾವಳಿ ಅನುಸಾರ ಹೆಸರು ಕೈಬಿಟ್ಟಿರುವುದನ್ನು ವಿವರಿಸಿದರಲ್ಲದೆ, ಯಾವುದೇ ಕಾರಣಕ್ಕೂ ದುರುದ್ದೇಶದಿಂದ ಯಾರ ಹೆಸರೂ ಬಿಟ್ಟಿಲ್ಲ. ಅಲ್ಲದೇ, ಮತದಾರರ ಪಟ್ಟಿ ಪರಿಷ್ಕರಣೆ ಮಾಡುವುದಕ್ಕೆ ಯಾವುದೇ ಖಾಸಗಿ ಏಜೆನ್ಸಿಗೆ ಜವಾಬ್ದಾರಿ ನೀಡಿರಲಿಲ್ಲ ಎಂದು ಸ್ಪಷ್ಟಪಡಿಸಿದರಲ್ಲದೆ, ಕೆಲವು ದಾಖಲೆಗಳನ್ನು ಪ್ರದರ್ಶಿಸಿದರು. ಮತದಾರರ ಹೆಸರು ಎರಡು ಕಡೆ ನೋಂದಣಿಯಾಗಿದ್ದರೆ ಮಾತ್ರ ಹೆಸರು ತೆಗೆಯಲಾಗಿದೆ. ಅದನ್ನು ಹೊರತುಪಡಿಸಿದರೆ, ಉದ್ದೇಶಪೂರ್ವಕವಾಗಿ ಹೆಸರು ಕೈ ಬಿಡಲಾಗಿದೆ ಎನ್ನುವುದು ಸರಿಯಲ್ಲ ಎಂದರು.

ಕಾಂಗ್ರೆಸ್ ಮುಖಂಡರ ನಿಯೋಗದಿಂದ ಮನವಿ ಸ್ವೀಕರಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಮತದಾರರ ಪಟ್ಟಿ ಪರಿಷ್ಕರಣೆ ನಡೆಯುತ್ತಿದೆ. ಕಾಂಗ್ರೆಸ್ ಮುಖಂಡರ ನಿಯೋಗ ನನ್ನನ್ನು ಭೇಟಿ ಮಾಡಿತ್ತು. ಅವರಿಗೆ ಪಟ್ಟಿಯಿಂದ ಹೆಸರು ಕೈಬಿಡಲಾಗಿರುವ ಬಗ್ಗೆ ಸ್ಪಷ್ಟನೆ ನೀಡಿದ್ದೇನೆ. ಖಾಸಗಿ ಕಂಪನಿಗೆ ಇದರ ಉಸ್ತುವಾರಿ ನೀಡಿ ಪರಿಷ್ಕರಣೆ ಮಾಡಿಲ್ಲ. ಒಂದೇ ಜಿಲ್ಲೆಯಲ್ಲಿ ಎರಡು ಕಡೆ ಪಟ್ಟಿಯಲ್ಲಿ ಹೆಸರಿದ್ದರೆ ಅಂತಹವರ ಹೆಸರನ್ನು ಕೈಬಿಟ್ಟಿದ್ದೇವೆ ಎಂದು ಮನವರಿಕೆ ಮಾಡಿಕೊಟ್ಟಿದ್ದೇನೆ ಎಂದು ತಿಳಿಸಿದರು.

ಪರಿಷ್ಕರಣೆ ವೇಳೆ ಬೂತ್ ಲೆವೆಲ್ ಅಧಿಕಾರಿಗಳು ತಪ್ಪೆಸಗಿದ್ದರೆ ನಮಗೆ ಮಾಹಿತಿ ನೀಡುವಂತೆ ತಿಳಿಸಿದ್ದೇವೆ. ಎಸ್‌ಓಪಿ ಪ್ರಕಾರವೇ ಎರಡು ಕಡೆ ಹೆಸರು ನೋಂದಾಯಿಸಿಕೊಂಡಿದ್ದವರನ್ನು ಪತ್ತೆ ಮಾಡಿ, ಒಂದು ಕಡೆ ಹೆಸರು ಉಳಿಸಿ, ಮತ್ತೊಂದು ಕಡೆ ಡಿಲೀಟ್ ಮಾಡಲಾಗಿದೆ. ಈಗಲೂ ಪಟ್ಟಿಯಿಂದ ಹೆಸರು ಕೈಬಿಟ್ಟಿರುವವರು ಇದ್ದರೆ, ಹೆಸರನ್ನು ಸೇರಿಸಬಹುದು. ವೋಟರ್ ಐಡಿಗೆ ಆಧಾರ್ ಲಿಂಕ್ ಮಾಡುವುದು ಕಡ್ಡಾಯವಲ್ಲ. ಆಧಾರ್ ಬದಲಾಗಿ ಇನ್ನಿತರೆ ದಾಖಲೆ ಕೊಡಬಹುದು. ಮತದಾರರ ಪಟ್ಟಿಗೆ ಹೆಸರು ಸೇರಿಸುವಾಗ ಆಧಾರ್ ಲಿಂಕ್ ಕಡ್ಡಾಯವಲ್ಲ. ನಮ್ಮ ಜಿಲ್ಲೆಗೆ ಹೊಸ ಇವಿಎಂ ಯಂತ್ರ ಬಂದಿದೆ. ಎಲ್ಲರೂ ಹೋಗಿ ಅದನ್ನು ಪರೀಕ್ಷೆ ಮಾಡಬಹುದು ಎಂದರು.

ನಂತರ ಕಾಂಗ್ರೆಸ್ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಂದ 1.45 ಲಕ್ಷ ಮತದಾರರ ಹೆಸರನ್ನು ಕೈಬಿಡಲಾಗಿದೆ. ಈ ಸಂಬಂಧ ದಾಖಲೆಯೊಂದಿಗೆ ಆರೋಪ ಮಾಡಲಾಗಿತ್ತು. ದೋಷ ಸರಿ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ವಿವಿಧ ಕಾರಣದಿಂದ 1.20 ಲಕ್ಷ ಮತದಾರರ ಹೆಸರನ್ನು ಕೈ ಬಿಟ್ಟಿರುವುದಾಗಿ ತಿಳಿಸಿದ್ದಾರೆ. ಆದರೆ, ನಮಗೆ ಲಭ್ಯವಿರುವ ದಾಖಲೆ ಪ್ರಕಾರ 1.45 ಲಕ್ಷ ಮತದಾರರ ಹೆಸರನ್ನು ಕೈ ಬಿಡಲಾಗಿದೆ. ಮತದಾರರ ಹಕ್ಕನ್ನು ಕಸಿಯಲು ಹೋಗಬೇಡಿ ಎಂದು ಮನವಿ ಮಾಡಲಾಗಿದೆ. ಮತದಾರರ ನೋಂದಣಿಯನ್ನು ಕೇವಲ ನಗರ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲೂ ಮತದಾರರ ಹೆಸರು ನೋಂದಣಿ ಅಭಿಯಾನ ನಡೆಸುವಂತೆ ಮನವಿ ಮಾಡಿದ್ದೇವೆ. ನಿಷ್ಪಕ್ಷಪಾತ ಚುನಾವಣೆ ಮಾಡುತ್ತೇವೆಂದು ಭರವಸೆ ನೀಡಿದ್ದಾರೆ. ನಿಯಮಾವಳಿ ಪ್ರಕಾರ ಮತದಾರ ಹೆಸರನ್ನು ಕೈಬಿಡುವುದಕ್ಕೆ ಅಂಚೆ ಮೂಲಕ ನೋಟಿಸ್ ಕೊಟ್ಟು ತದ ನಂತರ ಡಿಲೀಟ್ ಮಾಡಬೇಕೆಂದು ಎಸ್‌ಓಪಿ ಹೇಳುತ್ತದೆ. ಆದರೆ, ಮೈಸೂರು ಜಿಲ್ಲೆಯಲ್ಲಿ ಚುನಾವಣಾ ಆಯೋಗದ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಸಿಂಡಿಕೇಟ್ ಮಾಜಿ ಸದಸ್ಯ ಗೋಪಿನಾಥ್, ಮುಖಂಡರಾದ ಉತ್ತನಹಳ್ಳಿ ಶಿವಣ್ಣ, ಭಾಸ್ಕರ್ ಸೇರಿದಂತೆ ವಕೀಲರು, ವಿವಿಧ ಘಟಕಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸರ್ಕಾರದಿಂದ ಸಾಕಷ್ಟು ಅನುದಾನ

ಕ್ಷೇತ್ರದಲ್ಲಿ ಬಿಜೆಪಿಗೆ ಬೆಂಬಲ ದೊರೆಯುವುದು ನಿಶ್ಚಿತ

ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ವಿಶ್ವಾಸ



ಮೈಸೂರು,ಡಿ.1(ಪಿಎಂ)–ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಅನುದಾನ ನೀಡಿದ್ದು, ಇದನ್ನು ಅರಿತಿರುವ ಕ್ಷೇತ್ರದ ಜನತೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವುದು ನಿಶ್ಚಿತ ಎಂದು ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಗುರುವಾರ ಶ್ರೀರಾಂಪುರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಪಕ್ಷದ ಬೂತ್ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಬಿಜೆಪಿ ಶಾಸಕರಿಲ್ಲದಿದ್ದರೂ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾಕಷ್ಟು ಅನುದಾನ ನೀಡಿವೆ. ಜೊತೆಗೆ ಸರ್ಕಾರದ ಅಂಗಸಂಸ್ಥೆಯಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದಲೂ ಮುಡಾ ವ್ಯಾಪ್ತಿಗೆ ಬರುವ ಹಲವು ಗ್ರಾಮಗಳಿಗೆ ಕೋಟ್ಯಾಂತರ ರೂ. ಅನುದಾನ ನೀಡಿರುವುದು ನಮ್ಮ ಸರ್ಕಾರದ ಹೆಗ್ಗಳಿಕೆ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳಿಂದ ಕ್ಷೇತ್ರಕ್ಕೆ ಲಭ್ಯವಾಗಿರುವ ಅನುದಾನದ ಬಗ್ಗೆ ಇಲ್ಲಿನ ಜನತೆ ಅರಿತಿದ್ದಾರೆ. ಹಾಗಾಗಿ ಕ್ಷೇತ್ರದ ಮತದಾರರು 2023ರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವ ವಿಶ್ವಾಸ ಇದೆ. ಆದಾಗ್ಯೂ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ನಮ್ಮ ಸರ್ಕಾರಗಳ ಕೊಡುಗೆಗಳ ಬಗೆಗಿನ ಮಾಹಿತಿಯನ್ನು ಕ್ಷೇತ್ರದ ಮತದಾರರಿಗೆ ಪರಿಣಾಮಕಾರಿಯಾಗಿ ಮನವರಿಕೆ ಮಾಡಿಕೊಡಬೇಕು. ಈ ಕರ್ತವ್ಯವನ್ನು ಪಕ್ಷದ ಮುಖಂಡರು, ಕಾರ್ಯಕರ್ತರು ಸಮರ್ಥವಾಗಿ ನಿಭಾಯಿಸಬೇಕು ಎಂದು ಸಲಹೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಪಕ್ಷದ ಹಿರಿಯ ಮುಖಂಡರಾದ ಗೋಪಾಲ ರಾವ್, ಪರಶುರಾಮಪ್ಪ, ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್ ಗೌಡ, ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಣೀಶ್, ಕಾರ್ಯದರ್ಶಿ ಭಾಗ್ಯಶ್ರೀ, ಶ್ರೀರಾಂಪುರ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾಡನಹಳ್ಳಿ ಸುರೇಶ್, ಯುವ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ಶಿವು ಗುರೂರು, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಚೇತನ್, ಮುಖಂಡರಾದ ನಂದಕುಮಾರ್, ಶ್ರೀಕಂಠ, ಜಯಸಿಂಹ, ಗುರೂರು ನಂಜುಂಡಸ್ವಾಮಿ, ವೃಷಬೇಂದ್ರ, ಶಂಕರ್ ನಾರಾಯಣ್, ಕಿಟ್ಟಿ ಸೇರಿದಂತೆ ಶ್ರೀರಾಂಪುರ ವ್ಯಾಪ್ತಿಯ ಕಾರ್ಯಕರ್ತರು ಹಾಜರಿದ್ದರು.

ಡಿ.6ರಂದು ಲಲಿತಮಹಲ್ ಮೈದಾನದಲ್ಲಿ

ಅಂಬೇಡ್ಕರ್ ಅವರ ಮಹಾ ಪರಿನಿಬ್ಬಾಣ ದಿನಾಚರಣೆ

ಮೈಸೂರು,ಡಿ.1(ಪಿಎಂ)– ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘದ ವತಿಯಿಂದ ಡಿ.6ರಂದು ಡಾ.ಅಂಬೇಡ್ಕರ್ ಅವರ 66ನೇ ವರ್ಷದ ಮಹಾ ಪರಿನಿಬ್ಬಾಣ ದಿನ ಆಚರಿಸಲಾಗುತ್ತಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಪ್ರದೀಪ್‌ಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಲಲಿತಮಹಲ್ ಮೈದಾನದಲ್ಲಿ ಅಂದು ಸಂಜೆ 6ಕ್ಕೆ ಸೋಸಲೆ ಗಂಗಾಧರ್ ತಂಡದಿಂದ ಅಂಬೇಡ್ಕರ್ ಗೀತಗಾಯನ ಕಾರ್ಯಕ್ರಮ ನಡೆಯಲಿದೆ. ಬಳಿಕ ಬಾಬಾ ಸಾಹೇಬರ ಕೊನೆಯ ದಿನಗಳ ಕುರಿತಂತೆ 45 ನಿಮಿಷ ಅವಧಿಯ ಕಿರುಚಿತ್ರ ಪ್ರದರ್ಶನ ನಡೆಯಲಿದೆ. ಬೃಹತ್ ಎಲ್‌ಇಡಿ ಪರದೆಯಲ್ಲಿ ಕಿರುಚಿತ್ರ ಪ್ರದರ್ಶನಗೊಳ್ಳಲಿದೆ. ನಂತರ ಮೊಂಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು ಎಂದರು.

ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಸಾವಿರಕ್ಕೂ ಹೆಚ್ಚು ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, ಪಾಲ್ಗೊಳ್ಳಲಿಚ್ಛಿಸುವವರು ಶ್ವೇತವರ್ಣ ವಸ್ತ್ರಧಾರಿಗಳಾಗಿ ಆಗಮಿಸಿ ಬಾಬಾ ಸಾಹೇಬರಿಗೆ ಗೌರವಪೂರ್ವ ನಮನ ಸಲ್ಲಿಸಬೇಕೆಂದು ಕೋರಿದರು. ಸಂಘದ ಅಧ್ಯಕ್ಷ ಎನ್.ಬಸವರಾಜು, ಮುಖಂಡರಾದ ಮಂಟೇಲಿಂಗಯ್ಯ, ಜಯಶಂಕರ್, ವೈ.ಎಂ.ರಂಗಸ್ವಾಮಿ, ಮುನಿಸ್ವಾಮಿ ಗೋಷ್ಠಿಯಲ್ಲಿದ್ದರು.

ಆರೋಗ್ಯ ಭಾರತಿಯಿಂದ ಅಸ್ತಮಾ ರೋಗಕ್ಕೆ ಉಚಿತ ಔಷಧಿ ವಿತರಣೆ

ಮೈಸೂರು, ಡಿ. 1– ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಆರೋಗ್ಯ ಭಾರತಿ ವತಿಯಿಂದ ಡಿ. 8 ರಂದು ಬೆಳಗ್ಗೆ 5 ರಿಂದ 7 ಗಂಟೆಯವರೆಗೆ ಅಸ್ತಮಾ, ತತ್ಸಂಬಂಧಿತ ಕಾಯಿಲೆಗಳಿಗೆ ಉಚಿತವಾಗಿ ಔಷಧಿ ನೀಡಲಾಗುವುದು. ಆಸಕ್ತರು ಡಿ. 5 ರೊಳಗೆ ತಮ್ಮ ಹೆಸರುಗಳನ್ನು ಶೇಖರ್ ಕ್ಲಿನಿಕ್, ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಹತ್ತಿರ, ವಿಶ್ವೇಶ್ವರನಗರ ಇಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಡಾ. ಎ.ಎಸ್. ಚಂದ್ರಶೇಖರ್, ಮೊ. 9481170530, 9611802730 ಸಂಪರ್ಕಿಸಬಹುದು.

ಸಂತೆಪೇಟೆ ಅಂಗಡಿಯಲ್ಲಿ ನಿಷೇಧಿತ 110 ಕೆ.ಜಿ. ಪ್ಲಾಸ್ಟಿಕ್ ಜಪ್ತಿ

ಮಾಲೀಕನಿಂದ 5 ಸಾವಿರ ದಂಡ ವಸೂಲಿ



ಮೈಸೂರು, ಡಿ.1(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಏಕಬಳಕೆಯ ಪ್ಲಾಸ್ಟಿಕ್ ನಿಷೇಧವಿದ್ದರೂ ಕೆಲವೆಡೆ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಮಾರಾಟ ಎಗ್ಗಿಲ್ಲದೇ ಸಾಗಿದ್ದು, ದೂರಿನ ಹಿನ್ನೆಲೆಯಲ್ಲಿ ಸಂತೆಪೇಟೆಯ ಅಂಗಡಿಯೊಂದರ ಮೇಲೆ ದಾಳಿ ನಡೆಸಿ 110 ಕೆಜಿ ಪ್ಲಾಸ್ಟಿಕ್ ವಶಕ್ಕೆ ಪಡೆದು, ಅಂಗಡಿ ಮಾಲೀಕನಿಗೆ 5 ಸಾವಿರ ರೂ. ದಂಡ ವಿಧಿಸಿದ್ದಾರೆ.

ಪ್ಲಾಸ್ಟಿಕ್ ಮುಕ್ತ ಮೈಸೂರು ಮಾಡುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಪರಿಸರ ಹಾಗೂ ಆರೋಗ್ಯ ವಿಭಾಗ ಪಣ ತೊಟ್ಟಿದ್ದು, ಇನ್ನು ಮುಂದೆ ಪರಿಸರಕ್ಕೆ ಹಾನಿಯುಂಟು ಮಾಡುವ ನಿಷೇಧಿತ ಪ್ಲಾಸ್ಟಿಕ್ ಮಾರಾಟಗಾರರಿಗೆ ಬಿಸಿ ಮುಟ್ಟಿಸಲು ಸಜ್ಜಾಗಿದೆ. ಈ ಹಿನ್ನೆಲೆಯಲ್ಲಿ ಸಂತೆಪೇಟೆಯ ಸತ್ಯನಾರಾಯಣ ಎಂಟರ್‌ಪ್ರೈಸಸ್ ಮೇಲೆ ದಾಳಿ ನಡೆಸಿದ ಪಾಲಿಕೆ ಅಧಿಕಾರಿಗಳ ತಂಡ, ಪರಿಶೀಲನೆ ನಡೆಸಿದಾಗ ನಿಷೇಧಿತ ಪ್ಲಾಸ್ಟಿಕ್ ಇರುವುದು ಪತ್ತೆಯಾಗಿದೆ. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ 110 ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಂಡರು. ಅಲ್ಲದೆ, ಅಂಗಡಿ ಮಾಲೀಕನಿಗೆ 5 ಸಾವಿರ ರೂ. ದಂಡ ವಿಧಿಸಿದರು.

ಮುಂದಿನ ದಿನಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಸಂಗ್ರಹ ಮಾಡಿರುವವರ ಹಾಗೂ ಮಾರಾಟಗಾರರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿದ್ದಾರೆ. ಸಂತೆಪೇಟೆ, ಶಿವರಾಮ ಪೇಟೆ ಸೇರಿದಂತೆ ವಿವಿಧೆಡೆ ಅಕ್ರಮವಾಗಿ ಪ್ಲಾಸ್ಟಿಕ್ ಸಂಗ್ರಹಿಸಿರುವ ಮಾಹಿತಿ ಪಡೆದಿದ್ದು, ಮುಂದಿನ ದಿನಗಳಲ್ಲಿ ದಾಳಿ ಮಾಡಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಳ್ಳುವುದರೊಂದಿಗೆ ಏಕಬಳಕೆ ಪ್ಲಾಸ್ಟಿಕ್ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಿದ್ದಾರೆ. ದಂಡ ಪಾವತಿಸುವುದರಿಂದ ತಪ್ಪಿಸಿಕೊಳ್ಳಲು ಮಾರಾಟಗಾರರು ತಮ್ಮ ಬಳಿಯಿರುವ ನಿಷೇಧಿತ ಪ್ಲಾಸ್ಟಿಕ್ ಕವರ್‌ಗಳನ್ನು ಪಾಲಿಕೆ ವಶಕ್ಕೆ ಒಪ್ಪಿಸುವುದಕ್ಕೂ ಅವಕಾಶ ನೀಡಲಾಗಿದೆ. ಒಂದು ವೇಳೆ ಮಾರಾಟ ಮಾಡುವ ವೇಳೆ ಸಿಕ್ಕಿಬಿದ್ದರೆ, 5 ಸಾವಿರ ರೂ.ನಿಂದ ಒಂದು ಲಕ್ಷದವರೆಗೂ ದಂಡ ಪಾವತಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದೆ. ಸಂತೆಪೇಟೆಯಲ್ಲಿ ಇಂದು ನಡೆದ ದಾಳಿಯಲ್ಲಿ ಪರಿಸರ ಅಭಿಯಂತರರಾದ ಮೈತ್ರಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮುಂದುವರೆದ ಆನ್‌ಲೈನ್ ದೋಖಾ...

ಪಾರ್ಟ್ ಟೈಂ ಜಾಬ್ ಕೊಡಿಸುವ ನೆಪದಲ್ಲಿ ವ್ಯಕ್ತಿಗೆ 13.82 ಲಕ್ಷ ವಂಚನೆ

ಮೈಸೂರು, ಡಿ.1–ಪಾರ್ಟ್ ಟೈಂ ಜಾಬ್ ಕೊಡಿಸುವ ನೆಪದಲ್ಲಿ ವ್ಯಕ್ತಿಯೋರ್ವರಿಗೆ ಆನ್‌ಲೈನ್ ಮೂಲಕ 13.82 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಜೆಎಸ್‌ಎಸ್ ಲೇಔಟ್ 2ನೇ ಹಂತದ ನಿವಾಸಿ ಸಿ.ರವೀಂದ್ರ(38) ಅವರಿಗೆ ಟೆಲಿಗ್ರಾಂ ಮೂಲಕ ಪರಿಚಯವಾದ ಮಹತಿ ಎಂಬಾತ ಪಾರ್ಟ್ ಟೈಂ ಜಾಬ್ ಬಗ್ಗೆ ತಿಳಿಸಿ, ಹಣ ಪಾವತಿಸಿ ಟಾಸ್ಕ್ ಪೂರೈಸಿದರೆ ಕಮಿಷನ್, ಇಂಟರೆಸ್ಟ್ ಹಾಗೂ ಬೋನಸ್ ಮೂಲಕ ದುಪ್ಪಟ್ಟು ಹಣ ಬರುತ್ತದೆ ಎಂದು ನಂಬಿಸಿ 13,82,529 ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕೆ.ಆರ್.ಮಿಲ್ ಕಾಲೋನಿಯ ಧರಣೇಶ್ ಎಂಬುವರಿಗೆ ಕರೆ ಮಾಡಿದ ವಂಚಕರು, ಡೆಬಿಟ್ ಕಾರ್ಡ್ ಬ್ಲಾಕ್ ಆಗಿದ್ದು, ಅದನ್ನು ಸರಿಪಡಿಸಲು ಕಾರ್ಡ್‌ನ ಮಾಹಿತಿ ನೀಡಬೇಕೆಂದು ಕೇಳಿದ್ದಾರೆ. ಅದನ್ನು ನಂಬಿದ ಧರಣೇಶ್, ಕಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಹಂಚಿಕೊಂಡಾಗ ಅವರ ಕಾರ್ಡ್‌ನಿಂದ 1.22 ಲಕ್ಷ ರೂ. ಕಡಿತಗೊಂಡಿದೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ದುಷ್ಕರ್ಮಿಗಳಿಂದ ರೈತರ ಸುಲಿಗೆ

ಮೈಸೂರು, ಡಿ.1–ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ಮಡಿಕೇರಿಯ ರೈತನನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು 25 ಸಾವಿರ ರೂ. ಸುಲಿಗೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೂಲತಃ ಮಡಿಕೇರಿ ತಾಲೂಕು ನರಿಯಂದಡೆ ಗ್ರಾಮದ ಬಿಜು(46) ಎಂಬಾತ ಹೆಚ್.ಡಿ.ಕೋಟೆ ತಾಲೂಕು ಜೊಂಪನಹಳ್ಳಿ ಗ್ರಾಮದ ಕರಿಯಪ್ಪ ಎಂಬುವರ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಈತ ತನ್ನ ಮಾಲೀಕರಿಂದ ಹಣ ಪಡೆದು ಮಡಿಕೇರಿಗೆ ಹೋಗುವ ಸಲುವಾಗಿ ನ.29ರಂದು ಸಂಜೆ ಮೈಸೂರಿಗೆ ಆಗಮಿಸಿದ್ದು, ಆ ಸಂದರ್ಭದಲ್ಲಿ ಮಡಿಕೇರಿಗೆ ತೆರಳಿದರೆ, ತನ್ನ ಗ್ರಾಮಕ್ಕೆ ಹೋಗಲು ಬಸ್ ಸಿಗುವುದಿಲ್ಲ ಎಂಬ ಕಾರಣದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹಿಂಭಾಗವಿರುವ ಲಾಡ್ಜ್‌ವೊಂದರಲ್ಲಿ ತಂಗಿದ್ದಾರೆ. ಮರು ದಿನ ಬೆಳಗ್ಗೆ 5 ಗಂಟೆ ಸುಮಾರಿನಲ್ಲಿ ಊರಿಗೆ ಹೋಗಲು ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ವೇಳೆ ಬಿ.ಎನ್.ರಸ್ತೆಯ ಮೈಸೂರು ಕಾಂಪ್ಲೆಕ್ಸ್ ಬಳಿ ಆಟೋದಲ್ಲಿ ಬಂದು ಅಡ್ಡಗಟ್ಟಿದ ಇಬ್ಬರು ಪುರುಷರು ಹಾಗೂ ಇಬ್ಬರು ಮಹಿಳೆಯರು ಇವರ ಮೇಲೆ ಹಲ್ಲೆ ನಡೆಸಿ 25 ಸಾವಿರ ರೂ. ಕಸಿದಿದ್ದಾರೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ಎಲ್‌ಎಲ್‌ಆರ್, ಡಿಎಲ್ ನೀಡಿದ ಆರೋಪ

ಮೈಸೂರಿನ ಡ್ರೈವಿಂಗ್ ಸ್ಕೂಲ್ ಮಾಲೀಕರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಡಿ.1–ಸಮರ್ಪಕವಾದ ದಾಖಲೆಗಳಿಲ್ಲದೆ ಸಾರ್ವಜನಿಕರಿಗೆ ನಕಲಿ ಎಲ್‌ಎಲ್‌ಆರ್ ಹಾಗೂ ಡಿಎಲ್‌ಗಳನ್ನು ನೀಡಲಾಗುತ್ತಿದೆ ಎಂದು ಮೈಸೂರಿನ ಡ್ರೈವಿಂಗ್ ಸ್ಕೂಲ್‌ವೊಂದರ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ಪಶ್ಚಿಮ ಆರ್‌ಟಿಓ ಕಚೇರಿ ಬಳಿ ಇರುವ ವೀಣಾ ಡ್ರೈವಿಂಗ್ ಸ್ಕೂಲ್‌ನ ಮಾಲೀಕರಾದ ಬಾಬು ಅಲಿಯಾಸ್ ವೆಂಕಟಸ್ವಾಮಿ ಮತ್ತು ವೀಣಾ ಆರೋಪಕ್ಕೆ ಒಳಗಾಗಿರುವವರು. ಇವರು ಅನಾಮಿಕರಿಗೆ ಆರ್‌ಟಿಓ ಕಚೇರಿಯಿಂದ ಯಾವುದೇ ದಾಖಲೆಗಳಿಲ್ಲದೇ ಎಲ್‌ಎಲ್‌ಆರ್ ಮಾಡಿಸಿಕೊಡುತ್ತಿದ್ದಾರೆ. ಇದಕ್ಕೆ ಪಾವತಿಸಬೇಕಾದ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸದೇ ಆಧಾರ್ ಕಾರ್ಡ್ ಇನ್ನಿತರ ದಾಖಲೆಗಳೂ ಕೂಡ ಇಲ್ಲದೆ ನಕಲಿ ಡಿಎಲ್‌ಗಳನ್ನು ಮಾಡಿಸಿಕೊಡುತ್ತಿದ್ದಾರೆ. ಇವರ ಕೃತ್ಯಗಳಲ್ಲಿ ಆರ್‌ಟಿಓ ಹಾಗೂ ಅವರ ಅಧೀನ ಸಿಬ್ಬಂದಿಗಳು ಭಾಗಿಯಾಗಿದ್ದಾರೆ ಎಂದು ಮೈಸೂರಿನ ಆದಿಚುಂಚನಗಿರಿ ರಸ್ತೆಯಲ್ಲಿರುವ ವಕೀಲ ಕೆ.ಆರ್.ರಾಜಕುಮಾರ್ ಅವರು ನೀಡಿರುವ ದೂರನ್ನು ಭಾರತೀಯ ದಂಡ ಸಂಹಿತೆ 420, 468, 471, 34ರಡಿ ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಕಲಿ ಕೀ ಬಳಸಿ ಮನೆಗೆ ನುಗ್ಗಿ ಚಿನ್ನಾಭರಣ, ನಗದು ಕಳವು

ಹುಣಸೂರು, ಡಿ.1–ನಕಲಿ ಕೀ ಬಳಸಿ ಮನೆಗೆ ನುಗ್ಗಿದ ಖದೀಮರು ಚಿನ್ನಾಭರಣ ಹಾಗೂ ನಗದು ಮತ್ತು ಕೆಲವು ದಾಖಲೆಗಳನ್ನು ಕಳವು ಮಾಡಿರುವ ಘಟನೆ ಹುಣಸೂರು ತಾಲೂಕು ಚಿಟ್ಟಿಕ್ಯಾತನಹಳ್ಳಿ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ರೈತ ಪಾಪಯ್ಯ(50) ಅವರು ನ.28ರಂದು ಬೆಳಗ್ಗೆ ಕೆ.ಆರ್.ನಗರದ ಮಗಳ ಮನೆಗೆ ಹೋಗಿದ್ದು, ಅದೇ ದಿನ ಸಂಜೆ ಹಿಂತಿರುಗಿದಾಗ ಮನೆಯ ಒಳಗಿದ್ದ ಬೀರುವಿನ ಲಾಕರ್ ಮುರಿದು 23 ಗ್ರಾಂ ತೂಕದ ಚಿನ್ನಾಭರಣ, 50 ಸಾವಿರ ರೂ. ನಗದು, ತಂಬಾಕು ಮಂಡಳಿಯ ಲೈಸೆನ್ಸ್ ಬುಕ್, ಬ್ಯಾಂಕ್ ಪಾಸ್‌ಬುಕ್, ಆಧಾರ್, ಪಾನ್‌ಕಾರ್ಡ್ ಹಾಗೂ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು 18ನೇ ಜಾಗತಿಕ ಗೀತ ಸಮ್ಮೇಳನ

ಮೈಸೂರು,ಡಿ.1(ಪಿಎಂ)–ಬೆಂಗಳೂರಿನ ಇಂಟರ್‌ನ್ಯಾಷನಲ್ ಗೀತ ಫೌಂಡೇಷನ್ ಟ್ರಸ್ಟ್ ಮತ್ತು ಮೈಸೂರಿನ ಶ್ರೀ ಅವಧೂತ ದತ್ತಪೀಠಂ ಜಂಟಿ ಆಶ್ರಯದಲ್ಲಿ ಡಿ.2ರಂದು ಮೈಸೂರಿನಲ್ಲಿ 18ನೇ ಜಾಗತಿಕ ಗೀತ ಸಮ್ಮೇಳನ ಆಯೋಜಿಸಲಾಗಿದೆ. ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಅವಧೂತ ದತ್ತಪೀಠಂನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪ ಸಭಾಂಗಣದಲ್ಲಿ ಅಂದು ಬೆಳಗ್ಗೆ 9.30ಕ್ಕೆ ಸಮ್ಮೇಳನ ಉದ್ಘಾಟನೆಗೊಳ್ಳಲಿದೆ. ಶ್ರೀ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶ್ರೀ ಅವಧೂತ ದತ್ತಪೀಠಂ ಕಿರಿಯ ಶ್ರೀಗಳಾದ ಶ್ರೀ ವಿಜಯಾನಂದ ತೀರ್ಥ ಸ್ವಾಮೀಜಿ, ಶ್ರೀ ಜಪಾನಂದ ಸ್ವಾಮಿ, ಕುಪ್ಪಾ ವಿಶ್ವನಾಥ ಶರ್ಮಾ ಮತ್ತು ಡಾ.ಎಸ್.ರಂಗನಾಥ್ ಅವರು ಪ್ರವಚನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

INTERNATIONAL GITA FOUNDTATION TRUST
INDIA



ಮೊದಲ ಬಾರಿಗೆ ನೆಗೆಟೀವ್ ಶೇಡ್‌ನಲ್ಲಿ ಅನಂತನಾಗ್ 'ತಿಮ್ಮಯ್ಯ ಅಂಡ್ ತಿಮ್ಮಯ್ಯ' ಟ್ರೈಲರ್ ಬಿಡುಗಡೆ

ಅನಂತನಾಗ್ ಹಾಗೂ ದಿಗಂತ್ ನಟಿಸಿರುವ ತಿಮ್ಮಯ್ಯ ಅಂಡ್ ತಿಮ್ಮಯ್ಯ ತಾತ–ಮೊಮ್ಮಗನ ನಡುವಿನ ಸಂಘರ್ಷದ ಕಥೆ. ರಾಜೇಶ್ ಶರ್ಮ ಅವರ ನಿರ್ಮಾಣದ ಈ ಚಿತ್ರಕ್ಕೆ ಸಹೋದರ ಸಂಜಯ್‌ಶರ್ಮ ಆಕ್ಷನ್ ಕಟ್ ಹೇಳಿದ್ದಾರೆ. ಡಿ.2ಕ್ಕೆ ಬಿಡುಗಡೆಯಾಗುತ್ತಿರುವ ಈ ಚಿತ್ರದ ಟ್ರೈಲರ್ ಅನಾವರಣ ಸಮಾರಂಭ ಕಲಾವಿದರ ಸಂಘದ ಆವರಣದಲ್ಲಿ ನಡೆಯಿತು. ಚಿತ್ರದ ಸಂಗೀತ ನಿರ್ದೇಶಕ ಜೆ.ಅನೂಪ್ ಸೀಳನ್, ನಾಯಕನಾದ ಅನಂತನಾಗ್, ದಿಗಂತ್, ಐಂದ್ರಿತಾ ರೇ ಸೇರಿದಂತೆ ಚಿತ್ರತಂಡದ ಬಹುತೇಕ ಸದಸ್ಯರು ವೇದಿಕೆಯಲ್ಲಿ ಹಾಜರಿದ್ದರು.

ನಿರ್ಮಾಪಕ ರಾಜೇಶ್ ಶರ್ಮ ಮಾತನಾಡಿ, ಅನಂತನಾಗ್ ಅವರಿಗಾಗಿಯೇ ಈ ಕಥೆ ಮಾಡಿದೆವು. ಅವರೂ ಕಥೆ ಕೇಳಿ ಇಷ್ಟಪಟ್ಟು ಅಭಿನಯಿಸಲು ಒಪ್ಪಿದರು. ಚಿತ್ರ ಮುಂದಿನ ವಾರ ತೆರೆ ಕಾಣಲಿದೆ. ಟೀಸರ್‌ಗೆ ಅದ್ಭುತ ರೆಸ್ಪಾನ್ಸ್ ಬಂದಿತ್ತು. ಈಗ ಟ್ರೈಲರ್ ಕೂಡ ಬಿಡುಗಡೆಯಾಗಿದೆ ಎಂದು ವಿವರಿಸಿದರು. ನಂತರ ನಿರ್ದೇಶಕ ಸಂಜಯ್ ಶರ್ಮ ಮಾತನಾಡಿ, ಅನಂತನಾಗ್ ಅವರಿಗೆ ಕಥೆ ಹೇಳಿದಾಗ ಮರು ಮಾತಾಡದೆ ಒಪ್ಪಿಕೊಂಡರು. ತಾತ, ಮೊಮ್ಮಗ 30 ವರ್ಷಗಳ ನಂತರ ಭೇಟಿಯಾಗುತ್ತಾರೆ. ಅದರ ನಂತರದಲ್ಲಿ ನಡೆಯುವ ಘಟನೆಗಳೇ ಈ ಚಿತ್ರದ ಕಥಾವಸ್ತು. ಅನಂತ್‌ನಾಗ್ ಅವರು ಅನುಭವಿ ಕಲಾವಿದರು. ಅಂಥವರ ಜೊತೆ ಕೆಲಸ ಮಾಡಿದ್ದು ನಿಜಕ್ಕೂ ದೊಡ್ಡ ಅನುಭವ. ದಿಗಂತ್, ಐಂದ್ರಿತಾ ರೇ, ಶುಭ್ರ ಅಯ್ಯಪ್ಪ, ಪ್ರಕಾಶ್ ತುಮ್ಮಿನಾಡು ಹಾಗೂ ಚೈತ್ರಾರಾವ್ ಸೇರಿದಂತೆ ಹಲವಾರು ಕಲಾವಿದರು ನಮ್ಮ ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂದರು,

ನಂತರ ಅನಂತನಾಗ್ ಮಾತನಾಡಿ, ಈ ಸಹೋದರರು 500ಕ್ಕೂ ಹೆಚ್ಚು ಆಡ್‌ಫಿಲಂಗಳನ್ನು ಮಾಡಿದ್ದಾರೆ, ಅಂಥವರು ಈ ಥರದ ಕಥೆ ಮಾಡಿದ್ದಾರೆಂದಾಗ ನನಗೆ ಆಶ್ಚರ್ಯವಾಯಿತು. ಈವರೆಗೆ ನಾನಿಂಥಾ ಪಾತ್ರವನ್ನು ಮಾಡೇ ಇಲ್ಲ. ನನ್ನ ಪಾತ್ರಕ್ಕೆ ಸ್ವಲ್ಪ ನೆಗೆಟಿವ್ ಶೇಡ್ ಇದೆ. ಶ್ರೀಮಂತಿಕೆಯ ಅಹಮಿಕೆ ಇರುವ ಆತ ಸ್ವಾರ್ಥದಿಂದಲೇ ಬದುಕು ನಡೆಸಿರುತ್ತಾನೆ. ಬೇರೆಯವರನ್ನು ಹಂಗಿಸುವುದು ಆತನ ಹವ್ಯಾಸ. ಮುಖ್ಯವಾಗಿ ಪಾತ್ರದಲ್ಲಿ ಹಾಸ್ಯಪ್ರಜ್ಞೆಯೂ ಇದೆ. ನೆಗೆಟಿವ್ ಶೇಡ್ ಇರುವ ಪಾತ್ರವನ್ನು ಪಾಸಿಟೀವ್ ಆಗಿ ಹೇಗೆ ಬದಲಾಯಿಸಬಹುದು ಎನ್ನುವುದೇ ಈ ಚಿತ್ರದ ಸಬ್ಜೆಕ್ಟ್, ಇಡೀ ಸಿನಿಮಾಗೆ ಹಾಸ್ಯದ ಹಿನ್ನೆಲೆ ಇರುವುದರಿಂದ ಜನ ಸ್ವೀಕರಿಸುವರೆಂಬ ನಂಬಿಕೆಯಿದೆ ಎಂದರು. ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಅವರ ಸಾಹಿತ್ಯದ ಐದು ಗೀತೆಗಳಿದ್ದು, ಜೆ.ಅನೂಪ್ ಅವರ ಸಂಗೀತ, ಬಾಲಕೃಷ್ಣ ತೋಟ ಅವರ ಛಾಯಾಗ್ರಹಣವಿದೆ. ಬೆಂಗಳೂರು, ಕೊಡಗು ಸುತ್ತಮುತ್ತ ಇದರ ಚಿತ್ರೀಕರಣ ನಡೆಸಲಾಗಿದೆ.



'ಕಾಲಾಯನಮಃ' ಕಾಲದ ಹಿಂದೆ ಕೋಮಲ್ ಪಯಣ

ನಟ ಕೋಮಲ್ ಬಹಳ ದಿನಗಳ ನಂತರ ನಾಯಕನಾಗಿ ಕಾಣಿಸಿಕೊಳ್ಳುತ್ತಿರುವ ಕಾಲಾಯನಮ: ಚಿತ್ರದ ಮುಹೂರ್ತ ಇತ್ತೀಚೆಗೆ ಕಂಠೀರವ ಸ್ಟುಡಿಯೋದಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ನಟ ಜಗ್ಗೇಶ್ ಹಾಜರಿದ್ದು ಸಹೋದರನಿಗೆ ಶುಭ ಕೋರಿದರು. ಅವರ ಪುತ್ರ ಯತಿರಾಜ್ ಕೂಡ ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಜೊತೆಗೆ ಸುಚೇಂದ್ರ ಪ್ರಸಾದ್, ತಿಲಕ್ ಇದ್ದಾರೆ. ತಮಿಳು ಮೂಲದ ಮರಿವಣ್ಣನ್ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಎಮಿಲ್ ಚಿತ್ರದ ಹಾಡುಗಳಿಗೆ ರಾಗಸಂಯೋಜನೆ ಮಾಡುತ್ತಿದ್ದಾರೆ. ರಾಕೇಶ್ ಸಿ. ತಿಲಕ್ ಕ್ಯಾಮರಾ ಹಿಡಿಯುತ್ತಿದ್ದಾರೆ.

ಕೋಮಲ್ ಮಾತನಾಡುತ್ತ ತುಂಬಾ ದಿನಗಳ ನಂತರ ಚಿತ್ರನಿರ್ಮಾಣಕ್ಕೆ ಕೈಹಾಕಿದ್ದೇನೆ. ಇದೊಂದು ಟೈಮ್ ಟ್ರಾವೆಲ್ ಮೇಲೆ ಮಾಡುತ್ತಿರುವ ಚಿತ್ರ. ಸಮಯ ಅನ್ನೋದು ಯಾರ ಮಾತನ್ನೂ ಕೇಳುವುದಿಲ್ಲ, ಈಗ ನಾನು ಮಾಡುತ್ತಿರುವ ಚಿತ್ರವೂ ಸಹ ಸಮಯಕ್ಕೆ ಸಂಬಂಧಿಸಿದ್ದು. ಐದಾರು ವರ್ಷಗಳ ಹಿಂದೆ ಚಿತ್ರವೊಂದಕ್ಕೆ ಸಂಬಂಧಿಸಿದಂತೆ ನಾನು ಚೆನ್ನೈಗೆ ಹೋದಾಗ ಮರಿವಣ್ಣನ್ ಅವರು ಪರಿಚಯವಾದರು. ಅವರ ಟ್ಯಾಲೆಂಟ್ ನೋಡಿ, ನಮ್ಮ ಚಿತ್ರವನ್ನು ನಿಮಗೇ ಕೊಡುತ್ತೇನೆ ಎಂದು ಹೇಳಿದ್ದೆ. ಅದರಂತೆ ಈಗ ಜವಾಬ್ದಾರಿ ಕೊಟ್ಟಿದ್ದೇನೆ. ಎಮಿಲ್ ಕೂಡ ನನ್ನ ಆತ್ಮೀಯ. ಒಳ್ಳೇ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು. ಚಿತ್ರದಲ್ಲಿ ಹಾಸ್ಯ ಫಿರ್ದೂಸ್ ನಾಯಕಿ, ಈಕೆ ಕನ್ಯಾಕುಮಾರಿ ಎಂಬ ಸೀರಿಯಲ್‌ನಲ್ಲಿ ನಟಿಸಿದವರು, ಮೊದಲ ಬಾರಿಗೆ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಹೋದರ ಇಡುವ ಪ್ರತಿಹೆಜ್ಜೆಯಲ್ಲೂ ಬೆನ್ನೆಲುಬಾಗಿ ನಿಂತಿರುವವರು ನಟ ಜಗ್ಗೇಶ್. ತಮ್ಮನ ಹೊಸ ಚಿತ್ರಕ್ಕೆ ಹರಸಿ ಆಶೀರ್ವದಿಸಲು ಬಂದಿದ್ದ ಜಗ್ಗೇಶ್ ಮಾತನಾಡುತ್ತ, ಬಹಳದಿನಗಳ ನಂತರ ನನ್ನ ತಮ್ಮ ಕೋಮಲ್ ಚಿತ್ರರಂಗಕ್ಕೆ ಕಮ್‌ಬ್ಯಾಕ್ ಆಗಿದ್ದಾನೆ. ಕಾಲಾಯನಮ: ಇದು ಶ್ರೀಕೃಷ್ಣ ಹೇಳುವ ಮಾತು. ಮನುಷ್ಯ ತನ್ನ ಬದುಕಲ್ಲಿ ಏರಿಳಿತಗಳನ್ನು ನೋಡಲೇಬೇಕು. ಕೋಮಲ್ ನನಗಿಂತ ಹೆಚ್ಚು ಸಿನಿಮಾಪ್ಯಾಷನ್ ಇರುವವನು. ಚಿತ್ರದ ಬಗ್ಗೆ ತುಂಬಾ ತಲೆ ಕೆಡಿಸಿಕೊಂಡಿದ್ದಾನೆ. ಏಳು ವರ್ಷಗಳ ಹಿಂದೆ ಆತನಿಗೆ ನಿನ್ನ ಟೈಮ್ ಸರಿಯಿಲ್ಲ, ಸುಮ್ಮನಿದ್ದುಬಿಡು ಎಂದು ಎಚ್ಚರಿಸಿದ್ದೆ, ಕೇತುದೆಸೆ ಇದ್ದಾಗ ಅಂಥಾ ಅಮಿತಾಬ್ ಕೂಡ ಮನೆಯಲ್ಲಿ ಕೂತಿದ್ದರು. ಈಗ ಕೋಮಲ್‌ಗೆ ಶುಕ್ರದೆಶೆ ಒಲಿದಿದೆ ಎಂದರು.

ಜನಜಾಗೃತಿ ಮೂಡಿಸುವ 'ಪ್ರಜಾರಾಜ್ಯ'



ನರರೋಗ ತಜ್ಞ ಡಾ.ವರದರಾಜ್ ಅವರು ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗಿದ್ದಾರೆ. ಮೂಲಭೂತ ಸೌಲಭ್ಯಗಳು ಎಲ್ಲರಿಗೂ ಸಿಗಬೇಕು ಎನ್ನುವುದು ಇವರ ಉದ್ದೇಶ. ಇದನ್ನೇ ಆಧಾರವಾಗಿಟ್ಟುಕೊಂಡು 'ಪ್ರಜಾರಾಜ್ಯ' ಚಿತ್ರ ನಿರ್ಮಿಸಿದ್ದಾರೆ. ಜೊತೆಗೆ ಕಥೆ, ಚಿತ್ರಕತೆ ಬರೆದು ಪ್ರಮುಖ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ವಿಜಯ್ ಭಾರ್ಗವ ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದಾರೆ. ಈಗಾಗಲೇ ಚಿತ್ರದ ಕೆಲಸಗಳೆಲ್ಲವೂ ಮುಗಿದಿದ್ದು, ಚಿತ್ರವೀಗ ಬಿಡುಗಡೆಯ ಹಂತಕ್ಕೆ ಬಂದಿದೆ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು.

ಈ ಚಿತ್ರದಲ್ಲಿ ಹಿರಿಯ ನಿರ್ದೇಶಕ ನಾಗಾಭರಣ, ದೇವರಾಜ್, ಸುಧಾರಾಣಿ, ಸುಧಾ ಬೆಳವಾಡಿ, ತಬಲನಾಣಿ ಸೇರಿದಂತೆ ಹಲವಾರು ಹಿರಿಯ ಕಲಾವಿದರು ಅಭಿನಯಿಸಿದ್ದಾರೆ. ಚಿತ್ರದ ಕುರಿತಂತೆ ಮಾತನಾಡಿದ ಡಾ.ವರದರಾಜ್, ಈ ಚಿತ್ರ ಮಾಡಲು ನನಗೆ ಉಪೇಂದ್ರ ಅವರೇ ಪ್ರೇರಣೆ. ಅವರ ಚಿತ್ರಗಳನ್ನು ನೋಡಿ ನಾನೂ ಯಾಕೆ ಈ ರೀತಿಯ ಚಿತ್ರಗಳನ್ನು ಮಾಡಬಾರದು ಎಂದೆನಿಸಿತು. ಆಗ ಹೊಳೆದದ್ದೇ ಪ್ರಜಾರಾಜ್ಯದ ಕಥೆ. ಸಮಾಜದ ಎಲ್ಲಾ ವರ್ಗದ ಜನರನ್ನು ಪ್ರತಿನಿಸುವ ಪಾತ್ರಗಳು ಈ ಚಿತ್ರದಲ್ಲಿವೆ. ಆರೋಗ್ಯ, ಶಿಕ್ಷಣ, ವಸತಿ, ಆಹಾರದಂಥ ಮೂಲಭೂತ ಸೌಲಭ್ಯಗಳು ಪ್ರತಿಯೊಬ್ಬ ನಾಗರಿಕನಿಗೂ ಸಿಗಬೇಕು ಎನ್ನುವುದು ನಮ್ಮ ಆಶಯ. ಅದನ್ನೇ ನಮ್ಮ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ಇದು ಸಿಗದೆ ಹೋದರೆ ಜನರು ಮುಂದೇನು ಮಾಡಬೇಕು ಎಂಬುದನ್ನೂ ನಮ್ಮ ಚಿತ್ರದಲ್ಲಿ ತೋರಿಸಿದ್ದೇವೆ. ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣದ ಹಕ್ಕು ಕಲ್ಪಿಸಲಾಗಿದೆ. ಆದರೆ ಆರೋಗ್ಯದ ಬಗ್ಗೆ ಸಾಕಷ್ಟು ಜನ ಕಾಳಜಿ ವಹಿಸುತ್ತಿಲ್ಲ. ಸಾವಿರ ರೂಪಾಯಿಗೆ ತಮ್ಮ ಮತವನ್ನು ಮಾರಿಕೊಳ್ಳದೆ, ನಮಗೆಲ್ಲ ಉಚಿತ ಆರೋಗ್ಯ ಕಲ್ಪಿಸಿದರೆ ಮಾತ್ರ ನಿಮಗೆ ಮತ ಹಾಕುತ್ತೇವೆ ಎಂದು ರಾಜಕಾರಣಿಗಳಿಗೆ ಹೇಳಿ ಎನ್ನುವ ಜಾಗೃತಿಯನ್ನು ಸಾರ್ವಜನಿಕರಲ್ಲಿ ಮೂಡಿಸುವ ಪ್ರಯತ್ನವೇ ನಮ್ಮ ಪ್ರಜಾರಾಜ್ಯ ಎಂದು ಹೇಳಿದರು. ನಿರ್ದೇಶಕ ನಾಗಾಭರಣ ಮಾತನಾಡುತ್ತ ಈ ಚಿತ್ರದಲ್ಲಿ ರೈತನೊಬ್ಬನ ಪಾತ್ರವನ್ನು ಮಾಡಿದ್ದೇನೆ. ನಿರ್ಮಾಪಕರು ಈ ಸಿನಿಮಾ ಮೂಲಕ ಜನರಿಗೆ ಒಳ್ಳೆಯ ಸಂದೇಶವನ್ನು ತಲುಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ನಂತರ ನಿರ್ದೇಶಕ ವಿಜಯ್ ಭಾರ್ಗವ್ ಮಾತನಾಡಿ ಮೊದಲ ಚಿತ್ರದಲ್ಲೇ ಸಾಕಷ್ಟು ಅನುಭವಿ ಕಲಾವಿದರ ಜೊತೆ ಕೆಲಸ ಮಾಡುವ ಸದವಕಾಶ ನನಗೆ ಸಿಕ್ಕಿತ್ತು ಎಂದು ಖುಷಿ ಹಂಚಿಕೊಂಡರು. ಮತ್ತೊಬ್ಬ ನಟ ತಬಲಾ ನಾಣಿ ಮಾತನಾಡಿ, ಈ ಚಿತ್ರದಲ್ಲಿ ಆಟೋ ಚಾಲಕನಾಗಿ ಕಾಣಿಸಿಕೊಂಡಿದ್ದೇನೆ. ಒಂದೊಳ್ಳೇ ಮೆಸೇಜ್ ಈ ಚಿತ್ರದಲ್ಲಿದೆ ಎಂದರು.



'ಸೆಕೆಂಡ್ ಲೈಫ್' ಮೆಡಿಕೋಥ್ರಿಲ್ಲರ್ ಕಥೆ

ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಹಲವಾರು ವಿಸ್ಮಯಗಳು ನಿಜಕ್ಕೂ ಚಕಿತಗೊಳಿಸುತ್ತವೆ. ಬಹಳ ದಿನಗಳ ನಂತರ 'ಸೆಕೆಂಡ್ ಲೈಫ್' ಹೆಸರಿನಲ್ಲಿ ಅಂಥ ಚಿತ್ರವೊಂದು ನಿರ್ಮಾಣವಾಗಿದೆ. ರಾಜು ದೇವಸಂದ್ರ ನಿರ್ದೇಶನವಿರುವ ಈ ಚಿತ್ರದ ಟ್ರೈಲರ್ ರಿಲೀಸ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಮೆಡಿಕೋ ಥ್ರಿಲ್ಲರ್ ಹಾಗೂ ಸಸ್ಪೆನ್ಸ್ ಕಥಾಹಂದರ ಇರುವ ಈ ಚಿತ್ರದಲ್ಲಿ ಆದರ್ಶ ಗುಂಡೂರಾಜ್ ಹಾಗೂ ಸಿಂಧೂರಾವ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಜಯಣ್ಣ ಫಿಲಂಸ್ ಹಾಗೂ ಶುಕ್ರ ಫಿಲಂಸ್ ನಿರ್ಮಾಣದ ಈ ಚಿತ್ರದಲ್ಲಿ ಒಂದೇ ಹಾಡಿದ್ದು, ನಾಗೇಂದ್ರಪ್ರಸಾದ್ ಸಾಹಿತ್ಯ, ಆರವ್ ರಿಶಿಕ್ ಅವರ ಸಂಗೀತ ಸಂಯೋಜನೆಯಿದೆ. ನಿರ್ದೇಶಕ ರಾಜು ದೇವಸಂದ್ರ ಮಾತನಾಡುತ್ತ ಪ್ರತಿವರ್ಷ 60 ರಿಂದ 70 ಸಾವಿರ ಕ್ಯಾನ್ಸರ್ ರೋಗಿಗಳು ಪತ್ತೆಯಾಗುತ್ತಿದ್ದಾರೆ. ಕ್ಯಾನ್ಸರ್‌ಗೆ ಉಪಯೋಗಿಸುವ ಔಷಧೀಯ ಸುತ್ತ ನಡೆಯುವ ಕಥೆ ಈ ಚಿತ್ರದಲ್ಲಿದೆ. ವೈಲೆನ್ಸ್ ಜಾಸ್ತಿ ಇರುವುದರಿಂದ ಚಿತ್ರಕ್ಕೆ ಯುಎ ಪ್ರಮಾಣಪತ್ರ ಸಿಕ್ಕಿದೆ. ಕನ್ನಡ, ತೆಲುಗು ತಮಿಳು ಹೀಗೆ 3 ಭಾಷೆಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದರು. ನಂತರ ನಾಯಕ ಆದರ್ಶ್ ಗುಂಡುರಾಜ್ ಮಾತನಾಡುತ್ತಾ 'ಸ್ವಾರ್ಥರತ್ನ' ಚಿತ್ರದ ನಂತರ ಇದು ನನ್ನ 2ನೇ ಸಿನಿಮಾ. 'ಸೆಕೆಂಡ್ ಲೈಫ್' ವಿಭಿನ್ನ ಕಂಟೆಂಟ್ ಹೊಂದಿರುವ ಚಿತ್ರ, ಒಂದು ಟೀಮ್ ಆಗಿ ಶುರುವಾದ ಈ ಸಿನಿಮಾ ದೊಡ್ಡಮಟ್ಟದಲ್ಲಿ ಬಿಡುಗಡೆಯಾಗುತ್ತಿದೆ. ತಾಯಿಯ ಗರ್ಭದಿಂದ ಮಗು ಹೊರಬಂದ ಕೆಲವೇ ದಿನಗಳಲ್ಲಿ ಆಕೆಯ ಕರಳುಬಳ್ಳಿ (ಹೊಕ್ಕಳ ಬಳ್ಳಿ) ದೇಹದಿಂದ ಬೇರ್ಪಟ್ಟು ಹೊರಬರುತ್ತದೆ. ಇದನ್ನು ಈಗ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ಇದರ ಸುತ್ತ ನಡೆಯೋ ಕಥೆಯೇ 'ಸೆಕೆಂಡ್ ಲೈಫ್'. ಇಂಥ ಕುತೂಹಲಕರ ಕಥಾವಸ್ತುವನ್ನು ಇಟ್ಟುಕೊಂಡು ಈ ಚಿತ್ರ ಮಾಡಿದ್ದೇವೆ. ಇಂಥಾ ಚಿತ್ರಗಳು ಎಲ್ಲಾ ವರ್ಗದ ಜನರಿಗೆ ತಲುಪಬೇಕು. ಪುನೀತ್ ರಾಜಕುಮಾರ್ ಬ್ಯಾನರ್‌ನಲ್ಲಿ ಅವರು ತಮ್ಮ ಬ್ಯಾನರ್‌ನಲ್ಲೇ ಈ ಚಿತ್ರವನ್ನು ನಿರ್ಮಿಸಬೇಕಿತ್ತು, ಆದರೆ ವಿಧಿಯಾಟವೇ ಬೇರೆಯಾಗಿತ್ತು ಎಂದು ಹೇಳಿದರು.

ನಾಯಕಿ ಸಿಂಧೂರಾವ್ ಮಾತನಾಡುತ್ತಾ ಈ ಚಿತ್ರದಲ್ಲಿ ಅಭಿನಯಕ್ಕೆ ಸಾಕಷ್ಟು ಅವಕಾಶ ಇರುವ ಒಬ್ಬ ಕುರುಡಿಯ ಪಾತ್ರ ಮಾಡಿದ್ದೇನೆ ಎಂದರು. ಚಿತ್ರದ ಸಂಗೀತ ನಿರ್ದೇಶಕ ಆರವ್ ಕೌಶಿಕ್, ಛಾಯಾಗ್ರಹಕ ರಮೇಶ್ ಕೊಯಿರಾ ಹಾಗೂ ಚಿತ್ರದಲ್ಲಿ ಚಿಕ್ಕ ಪಾತ್ರವನ್ನೂ ನಿರ್ವಹಿಸಿರುವ ಕೋ–ಪ್ರೊಡ್ಯೂಸರ್ ರುದ್ರಮುನಿ ಅವರು ಚಿತ್ರ ಕುರಿತಂತೆ ಮಾತನಾಡಿದರು.

ಪ್ರಾಣಿ–ಮಾನವನ ಸಂಬಂಧದ ಕಥೆ ಹೇಳುವ 'ಡವ್ ಮಾಸ್ಟರ್'



ಮಾನವ ಹಾಗೂ ಕೆಲವು ಸಾಕುಪ್ರಾಣಿಗಳ ನಡುವೆ ಅವಿನಾಭಾವ ಸಂಬಂಧವಿದೆ. ಅದೇ ಕಂಟೆಂಟ್ ಇಟ್ಟುಕೊಂಡು ಸಾಕಷ್ಟು ಚಲನಚಿತ್ರಗಳು ನಿರ್ಮಾಣವಾಗಿವೆ. ಅಂಥದ್ದೇ ಕಥೆಯಿರುವ 'ಡವ್ ಮಾಸ್ಟರ್' ಚಿತ್ರದ ಟ್ರೈಲರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು. 'ಡವ್ ಮಾಸ್ಟರ್', ನಾಯಿ ಹಾಗೂ ಮನುಷ್ಯನ ನಡುವಿನ ಸಂಬಂಧದ ಕಥೆಯಿರುವ ಚಿತ್ರ ಎಂದಾಗ ಸಂತೋಷವಾಯಿತು. ನಾಯಿ ಪ್ರಾಣಿಗಳಲ್ಲೇ ಹೆಚ್ಚು ನಿಯತ್ತಿನ ಪ್ರಾಣಿ. ಆತ್ಮೀಯರಾದ ಚಾಂದ್‌ಪಾಷ ಅವರ ಮಗ ರೋಷನ್ ಈ ಚಿತ್ರವನ್ನು ನಿರ್ಮಾಣ ಮಾಡಿರುವ ವಿಷಯ ತಿಳಿದು ಖುಷಿಯಾಯಿತು. ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು.


ಹಿರಿಯ ವಿತರಕ ಚಾಂದ್ ಪಾಷಾ ಮಾತನಾಡಿ, ನಿರ್ದೇಶಕ ಆರ್ಯ ಅವರು ಹೇಳಿದ ಕಥೆ ಇಷ್ಟವಾಯಿತು. ಹಾಗಾಗಿ ಚಿತ್ರ ನಿರ್ಮಾಣಕ್ಕೆ ಮುಂದಾದೆವು. ನಾನು ಇಪ್ಪತ್ತೈದು ವರ್ಷಗಳಿಂದ ಚಿತ್ರರಂಗದಲ್ಲಿ ವಿತರಕನಾಗಿ ಕೆಲಸ ಮಾಡಿದ್ದೇನೆ. ಈಗ ಚಿತ್ರ ನಿರ್ಮಾಣದ ಸಂಪೂರ್ಣ ಜವಾಬ್ದಾರಿಯನ್ನು ನನ್ನ ಮಗ ರೋಷನ್ ನೋಡಿಕೊಳ್ಳುತ್ತಿದ್ದಾನೆ ಎಂದು ಹೇಳಿದರು.

ಚಿತ್ರದ ನಿರ್ದೇಶಕ ಆರ್ಯ ಮಾತನಾಡುತ್ತಾ ನನ್ನ ಕಥೆಯನ್ನು ಇಷ್ಟಪಟ್ಟು ಚಿತ್ರ ನಿರ್ಮಾಣ ಮಾಡಿದ ನಿರ್ಮಾಪಕರು ಹಾಗೂ ನನ್ನ ಇಡೀ ತಂಡಕ್ಕೆ ಧನ್ಯವಾದ. ಸಿದ್ದರಾಮಯ್ಯ ಅವರಿಂದ ನಮ್ಮ ಚಿತ್ರದ ಟ್ರೈಲರ್‌ನ್ನು ಬಿಡುಗಡೆ ಮಾಡಿಸಬೇಕೆಂಬುದು ನನ್ನ ಆಸೆಯಾಗಿತ್ತು. ಅದು ಈಗ ಈಡೇರಿದೆ. ಅದ್ಭುತವಾದ ಮನಮಿಡಿಯುವ ಕಥಾಹಂದರ ಈ ಚಿತ್ರದಲ್ಲಿದ್ದು ಜನ ಖಂಡಿತ ಇಷ್ಟಪಡುವರೆಂಬ ನಂಬಿಕೆಯಿದೆ ಎಂದು ಹೇಳಿದರು.

ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ನಟ ತಬಲಾನಾಣಿ ಮಾತನಾಡುತ್ತ ಹಿಂದೆ ನಾನು ಅಭಿನಯಿಸಿದ ಚಿತ್ರವೊಂದಕ್ಕೆ ಸಹನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದ ಆರ್ಯ ಬಂದು ನನಗೆ ಈ ಕಥೆ ಹೇಳಿದಾಗ ತುಂಬಾ ಇಷ್ಟವಾಯಿತು. ರಾಕಿ ಎಂಬ ನಾಯಿ ಈ ಚಿತ್ರದಲ್ಲಿ ಅಭಿನಯಿಸಿದೆ. ಆ ನಾಯಿ ಹಾಗೂ ನನ್ನ ನಡುವಿನ ಬಾಂಧವ್ಯದ ಸನ್ನಿವೇಶಗಳನ್ನು ನಿರ್ದೇಶಕರು ನೋಡುಗರ ಮನಮುಟ್ಟುವ ಹಾಗೆ ತೋರಿಸಿದ್ದಾರೆ. ಆರ್ಯಗೆ ಈ ಚಿತ್ರ ಒಳ್ಳೇ ಹೆಸರು ತಂದುಕೊಡಲಿದೆ ಎಂದು ಹೇಳಿದರು. ಚಿತ್ರದ ನಿರ್ಮಾಪಕ ಸಿ.ರೋಷನ್, ಸಂಗೀತ ನಿರ್ದೇಶಕ ಶಕೀಲ್ ಅಹ್ಮದ್, ಛಾಯಾಗ್ರಾಹಕ ಕಿರಣ್‌ಕುಮಾರ್ ಹಾಗೂ ಸಾಹಿತ್ಯ ಬರೆದಿರುವ ಸೌಮ್ಯ, ಅನೇಕ ಗಣ್ಯರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸಿನಿಪದಬಂಧ–451

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ಡೈನಾಮಿಕ್ ಹೀರೋ ಪುತ್ರನ ಮೊರೆತದ ಚೋರು ! 3
2. ಎ. ವಿ.ಶೇಷಗಿರಿರಾವ್ ನಿರ್ದೇಶನದಲ್ಲಿ ಒಂದೇ ಹೆರಿಗೆಯ ಇಬ್ಬರು ಮಕ್ಕಳು 6
5.ಮೃತ್ಯು ದೇವತೆಯ ಜೊತೆ ಆತನ ಸೇವಕ 5
7.ತ್ರಿಪುರ ಸುಂದರಿಯನ್ನು ಡುಂ..ಡುಂ.. ಬಾರಿಸಿ ಹಸೆಮಣೆಗೆ ಕರೆದವ..... 5
9.ಮಣ್ಣಿನಿಂದ ಮಾಡಲ್ಪಟ್ಟ ಒಂದು ವಸ್ತು 3
11.ಇಲ್ಲಿ ತಿರುಗಿರುವ ಚಿತ್ರ ರಾಮನಗರ ಜಿಲ್ಲೆಯ ಸುತ್ತ ಅಡ್ಡಾಡಿದರೆ ಸಿಗುತ್ತದೆ 3
12. ಬಿಡು ಬಿಡು ಕೋಪವ ಏತಕೆ ಈ ಜಗಳ 3
14. ಅಪ್ಪುವಿನ ಜರ್ನಿ ತುಂಬಾ ಸೊಗಸಾಗಿತ್ತು 5
15.ಪಾಪ್ ಕಾರ್ನ್ ಮಂಕಿ ಟೈಗರ್ ಚಿತ್ರದ ಮೂಲಕ ಈಕೆ ಚೊಚ್ಚಲ ಪ್ರವೇಶ 5
16.'ಚೆಲ್ಲಾಟ'ದ ಮದುಮಗ ನೆನಪು ಮಾತ್ರ 6
17. ಶಿವರಾಜ್ ಕುಮಾರ್ ನ ಮೇಷ ಬಳಗದ ಪ್ರಾಣಿ 3

ಮೇಲಿನಿಂದ ಕೆಳಕ್ಕೆ

1.ಹೆಂಡತಿಯ ಅಪ್ಪ ದೊಡ್ಡಣ್ಣ, ಜಗ್ಗೇಶ್‌ನನ್ನು ಸುತ್ತಿ– ಬಳಸಿ ಕರೆದ ಬಗೆ ! 10
2.ನಾರ್ವೆಯಲ್ಲಿ ಚಿತ್ರೀಕರಿಸಿದ ಮೊದಲ ಕನ್ನಡ ಸಿನಿಮಾ 3
3.ಸುದೀಪ್, ಚಿರಂಜೀವಿ ಸರ್ಜಾ, ಸಮೀರಾರೆಡ್ಡಿ ಅಭಿನಯದ ಚಿತ್ರ 6
4.ಮುಸುರಿ ಕೃಷ್ಣಮೂರ್ತಿಗೆ ಕನೆಕ್ಷನ್ ಕಾಳಪ್ಪ ಪಾತ್ರ ಪರಿಚಯಿಸಿದ ಚಿತ್ರ 10
6.ಟೈಗರ್ ಪ್ರಭಾಕರ್ ಆಂಗ್ಲ ಅರಸ 2
7.ಸಾಯಿಕುಮಾರ್ ಬೆರಳುಗಳ ಸರ ಧರಿಸಿದ್ದಾನೆ 5
8.ಜಯಮಾಲಾ ಹಿಡಿದ ಹಠ ಬಿಡದವಳು 5
10. ಡಾ.ರಾಜ್‌ಕುಮಾರ್ ಕೋಪಗೊಂಡ ಕೇಸರಿ 6
13. – – ತಾಯಿ ಚೊಚ್ಚಲ ಮಗ 2
15.ಈ ನಟಿ ಇಲ್ಲಿ ಇನ್ಸಿಲ್ ಜೊತೆ ದೇವಿಯನ್ನು ಕಳೆದುಕೊಂಡಿದ್ದಾಳೆ 3

ದೀರ್ಘ ಬಾಳಿಕೆಯ, ಎಲ್ಲಾ ವಿಧದ ವಿಶ್ವಾಸಾರ್ಹ ಬ್ಯಾಗ್‌ಗಳಿಗೆ ಸಂಪರ್ಕಿಸಿ



ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಜೇತರು: ಕೃಷ್ಣಮೂರ್ತಿ, 9ನೇ ಕ್ರಾಸ್, ಸರಸ್ವತಿಪುರಂ ಮೈಸೂರು- 570009

ಸಿನಿ ಪದಬಂಧ 450ರ ಸರಿ ಉತ್ತರ

ಬ	ನಾ	ರ	ಸ್		ಹೊ	ಸ	ಇ	ತಿ	ಹಾ	ಸ
ಡ		ವಿ			ಟ್ಟೆ		ಸ್ವಾ			ರ್ಣ
ವ		ಮಾ		ತಾ		ಸಾ	ಯಿ	ಕು	ಮಾ	ರ್
ರಾ	ಜ	ಮ	ಹಾ	ರಾ	ಜ		ಲ್		ಯಾ	
ಸ್ಕ					ನ				ವೃ	
ಲ್	ಬು	ಲ್	ಬು		ನಾ		ಮ	ದ	ಗ	ಜ
	ದ್ಧಿ				ಯ					ನು
	ವಂ		ಲಂ		ಕ	ಲಿ	ಯು	ಗ	ಭೀ	ಮ
ಸಂ	ತ	ತು	ಕಾ	ರಾಂ		ಸಾ		ಡಿ		ದ
ಸ್ಕಾ			ಸು		ಗೀ			ಬಿ		ಜೋ
ರ	ಕ್ಷಿ	ತಾ	ರ	ಕ್ಷಿ	ತಾ		ಸಿ	ಡಿ	ಮಿ	ಡಿ

'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಶ್ರೀಕಂಠೇಶ್ವರನಿಗೆ ಹೆಚ್.ಡಿ.ದೇವೇಗೌಡರಿಂದ ತುಲಾಭಾರ ಸೇವೆ

ನಂಜನಗೂಡು, ಡಿ.1– ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಂಯಕ್ಕೆ ಗುರುವಾರ ಪತ್ನಿ ಚೆನ್ನಮ್ಮ ಅವರೊಂದಿಗೆ ಭೇಟಿ ನೀಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸ್ವಾಮಿಗೆ ಏಕವಾರ ರುದ್ರಾಭಿಷೇಕ, ತುಲಾಭಾರ ಸೇವೆ ಸಲ್ಲಿಸಿದರು.

ಬೆಳಗ್ಗೆ 9 ಗಂಟೆಗೆ ದೇವಾಲಯ ಪ್ರವೇಶಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಶ್ರೀಕಂಠೇಶ್ವರಸ್ವಾಮಿಗೆ ಅಕ್ಕಿ, ಬೆಲ್ಲದ ತುಲಾಭಾರ ಸೇವೆ ಸಲ್ಲಿಸಿದರು.



ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಡಿ. ದೇವೇಗೌಡ, ಈಗ ನನಗೆ 90 ವರ್ಷ. ಮಂಡಿ ನೋವು ಕಾಣಿಸಿಕೊಂಡಿತ್ತು. ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ಹರಕೆ ಹೊತ್ತಿದ್ದೆ. ಹೀಗಾಗಿ ಹರಕೆ ತೀರಿಸಲು ಬಂದಿದ್ದೇನೆ. ಚಿಕ್ಕವನಿದ್ದಾಗ ನನ್ನ ಎರಡೂ ಕಿವಿಯಲ್ಲಿ ಲೋಳೆಯಂತಹ ನೀರು ಸುರಿಯುತ್ತಿತ್ತು. ಇದರಿಂದ ಕಿವಿಗಳಿಗೆ ತೊಂದರೆಯಾಗಿತ್ತು. ಶ್ರೀಕಂಠೇಶ್ವರನಿಗೆ ಹರಕೆ ಹೊತ್ತು, ಕ್ಷೇತ್ರದಲ್ಲಿ ದೊರೆಯುವ ಮಣ್ಣಿನ ಮೇರುತ್ತೆಗ್ಗವನ್ನು ಪ್ರಸಾದವಾಗಿ ಬಳಸಿದ್ದರಿಂದ ಕಿವಿ ತೊಂದರೆ ನಿವಾರಣೆಯಾಗಿತ್ತು. ಭವರೋಗ ವೈದ್ಯ ನಂಜುಂಡೇಶ್ವರನ ಕೃಪೆಯಿಂದ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ ಎಂದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ 113 ಸ್ಥಾನಗಳನ್ನು ಪಡೆದು ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ. ಕುಮಾರಸ್ವಾಮಿ ಜನತಾದಳ ಅಧಿಕಾರಕ್ಕೆ ಬಂದರೆ ಬಡವರ ಪರವಾದ ಪಂಚರತ್ನ ಯೋಜನೆ ಜಾರಿ ಮಾಡುವುದಾಗಿ ರಾಜ್ಯದ ಜನರಿಗೆ ವಾಗ್ದಾನ ಮಾಡಿದ್ದಾರೆ. ಯಾತ್ರೆಗೆ ರಾಜ್ಯಾದ್ಯಂತ ಉತ್ತಮ ಬೆಂಬಲ ವ್ಯಕ್ತವಾಗಿದೆ. ಜಿಲ್ಲೆಯ ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಕಳೆದ ಬಾರಿ ಚಿಕ್ಕಣ್ಣನವರನ್ನು ಅಭ್ಯರ್ಥಿ ಮಾಡುವ ವಿಚಾರದಲ್ಲಿ ನಮ್ಮ ಪಕ್ಷದ ಕೆಲವರು ಅಡ್ಡಿ ಮಾಡಿದರು. ಈ ಬಾರಿ ನಮ್ಮ ಪಕ್ಷದಿಂದ ಚಿಕ್ಕಣ್ಣ ಅಭ್ಯರ್ಥಿಯಾಗಲಿದ್ದಾರೆ. ನಂಜನಗೂಡು ಕ್ಷೇತ್ರದಿಂದ ಕುಮಾರಸ್ವಾಮಿಯವರು ಬೆಳವಾಡಿ ಶಿವಕುಮಾರ್‌ಗೆ ಪಕ್ಷ ಸಂಘಟನೆಯ ಜವಾಬ್ದಾರಿ ವಹಿಸಿದ್ದಾರೆ. ಸಹಜವಾಗಿ ಅವರೇ ಸ್ಪರ್ಧಿಸಲಿದ್ದಾರೆ ಎಂದರು.

ಈ ಸಂದರ್ಭ ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ಮಂಜೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಬೆಳವಾಡಿ ಶಿವಕುಮಾರ್, ಮಾದೇಶ್, ನಗರಸಭೆ ಸದಸ್ಯ ಖಾಲೀದ್, ಆರ್.ವಿ.ಮಹದೇವಸ್ವಾಮಿ, ಸಂಜಯ್ ಗೌಡ ಉಪಸ್ಥಿತರಿದ್ದರು.

ಹುಲಿ ದಾಳಿ: ಕರುಗೆ ಗಾಯ



ಹನಗೋಡು, ಡಿ.1– ಹಾಡಹಗಲೇ ಹುಲಿ ದಾಳಿಗೆ ಕರು ಗಾಯಗೊಂಡಿರುವ ಘಟನೆ ಹನಗೋಡು ಹೋಬಳಿಯ ಅಬ್ಬೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕರಿಗೌಡರಿಗೆ ಸೇರಿದ ಕರು ಗಾಯಗೊಂಡಿರುವುದು. ಇವರು ಶೆಟ್ಟಹಳ್ಳಿ ಕಾಡಂಚಿನಲ್ಲಿರುವ ತಮ್ಮ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ವೇಳೆ ಹುಲಿ ಏಕಾಏಕಿ ದಾಳಿ ನಡೆಸಿ ಗಾಯಗೊಳಿಸಿದೆ. ಈ ವೇಳೆ ಕರಿಗೌಡರು ಚೀರಿದ್ದರಿಂದ ಹುಲಿ ಸ್ಥಳದಿಂದ ಪರಾರಿಯಾಗಿದೆ. ನಾಗರಹೊಳೆ ಉದ್ಯಾನವನದಂಚಿನ ಜಮೀನಿನಲ್ಲಿ ಹುಲಿ ಕಾಣಿಸಿಕೊಳ್ಳುತ್ತಿದ್ದು, ಈಗಾಗಲೇ 7 ಜಾನುವಾರುಗಳನ್ನು ಬಲಿ ಪಡೆದಿದೆ. ವಾರದ ಹಿಂದೆ ಅಬ್ಬೂರು ಗ್ರಾಮದ ತಿಮ್ಮೇಗೌಡರಿಗೆ ಸೇರಿದ ಹಸು ಮತ್ತು ಮೇಕೆಯನ್ನು ಹುಲಿ ತಿಂದು ಹಾಕಿದೆ. 3 ದಿನಗಳ ಹಿಂದೆ ಸಮೀಪದ ಶೆಟ್ಟಳ್ಳಿ, ಅಬ್ಬೂರು ಹಾಗೂ ಬಿ.ಆರ್.ಕಾವಲು ಗ್ರಾಮದಲ್ಲಿ ಹುಲಿ ಹೆಜ್ಜೆ ಪತ್ತೆಯಾಗಿತ್ತು. ಇದರಿಂದ ಈ ಭಾಗದ ಜನತೆ ಆತಂಕಕ್ಕೆ ಒಳಗಾಗಿದ್ದು, ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ತೋಟಗಳಿಗೆ ಕೆಲಸಕ್ಕೆ ತೆರಳುವ ಕೂಲಿ– ಕಾರ್ಮಿಕರು ಭಯಭೀತರಾಗಿದ್ದಾರೆ. ಹೀಗಾಗಿ ಅರಣ್ಯ ಇಲಾಖೆ ತಕ್ಷಣ ಹುಲಿ ಸೆರೆ ಹಿಡಿಯಲು ಕ್ರಮ ವಹಿಸಬೇಕು ಎಂದು ನೇರಳಕುಪ್ಪೆ ಗ್ರಾಪಂ ಅಧ್ಯಕ್ಷ ಉದಯ್ ಒತ್ತಾಯಿಸಿದ್ದಾರೆ.

ಆನೆ ಮೂಲಕ ಕೂಂಬಿಂಗ್ ಆರಂಭ: ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ವಲಯದ ಡಿಆರ್‌ಎಫ್‌ಓ ಸಿದ್ದರಾಜು ಪರಿಶೀಲನೆ ನಡೆಸಿ ಹುಲಿ ಸೆರೆಗೆ ಸಾಕು ಆನೆ ಮೂಲಕ ಕೂಂಬಿಂಗ್ ಆರಂಭಿಸಿದ್ದಾರೆ.



ಕಂಪಲಾಪುರದ ಮುಸ್ಲಿಂ ಸಮುದಾಯದ ಹಲವು ಕಾಂಗ್ರೆಸ್ ಮುಖಂಡರು ಇತ್ತೀಚೆಗೆ ಶಾಸಕ ಕೆ.ಮಹದೇವ್ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಪಿರಿಯಾಪಟ್ಟಣ ಟಿಎಪಿಸಿಎಂಎಸ್ ನಿರ್ದೇಶಕ ಕೆ.ಕುಮಾರ್, ಸಹಕಾರ ಸಂಘದ ಅಧ್ಯಕ್ಷ ಜಯಣ್ಣ, ಡೇರಿ ಅಧ್ಯಕ್ಷ ಲಕ್ಷ್ಮಣ್, ರಾಜೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಆಸೀಫ್, ರಿಜ್ವಾನ್, ಸುಂಡ್ವಾಳ್ ವೆಂಕಟೇಶ್, ಜಾವೀದ್, ಹನೀಫ್, ಮಿನಾಜ್, ಅಜ್ಜು, ವಾಜಿದ್, ಫೈರೋಜ್, ಅತಾವುಲ್ಲ, ಫರ್ಖಾನ್ ಮತ್ತಿತರರಿದ್ದರು.

ಪ್ರತಿಯೊಬ್ಬರೂ ಕನ್ನಡ ಭಾಷೆ, ನೆಲ–ಜಲ ಪ್ರೀತಿಸಿ

ಶಾಸಕ ಎಂ.ಅಶ್ವಿನ್ ಕುಮಾರ್ ಕರೆ

ತಿ.ನರಸೀಪುರ, ಡಿ.1– ಪ್ರತಿಯೊಬ್ಬರೂ ವಿದ್ಯಾರ್ಥಿ ಜೀವನದಿಂದಲೇ ಕನ್ನಡ ಭಾಷೆ, ಸಾಹಿತ್ಯ, ನೆಲ, ಜಲವನ್ನು ಪ್ರೀತಿಸಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಕರೆ ನೀಡಿದರು.



ಪಟ್ಟಣದ ಹಳೇ ಕುರುಬಗೇರಿಯ ಕನಕ ಯೂತ್ ಬಾಯ್ಸ್ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಕನಕ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ, ನೆಲ ಜಲದ ವಿಷಯ ಬಂದಾಗ ನಾವು ಸ್ವಾಭಿಮಾನಿಗಳಾಗಿರಬೇಕು. ಭಾಷೆಯಲ್ಲಿ ಹೊಸ ಪದಗಳ ಸೃಷ್ಟಿಸಿ ಅವುಗಳನ್ನು ಬಳಸಬೇಕು. ಉನ್ನತ ಶಿಕ್ಷಣವನ್ನು ಕನ್ನಡದಲ್ಲಿ ಪಡೆಯುವಂತಾಗಬೇಕು. ಕನ್ನಡಾಭಿಮಾನ ಬೆಳೆಸಿಕೊಂಡು ಕಾಲಕ್ಕೆ ತಕ್ಕಂತೆ ಭಾಷೆ ಬೆಳವಣಿಗೆ ಪೂರಕವಾದ ವಿಧಾನಗಳನ್ನು ಬಳಸಬೇಕು ಎಂದರು.

ಜನಸಮುದಾಯಕ್ಕೆ ಕನಕದಾಸರು ಆದರ್ಶವಾಗಲು ಕೀರ್ತನೆಗಳು ಹಾಗೂ ವ್ಯಕ್ತಿತ್ವವನ್ನು ಹೆಚ್ಚಿನ ಜನರಿಗೆ ವಿಸ್ತರಿಸಬೇಕಿದೆ. ಸಾರ್ವಕಾಲಿಕವಾಗಿರುವ ಭಕ್ತ ಕನಕದಾಸರ ಕೀರ್ತನೆಗಳು ಮತ್ತು ಸಾಮಾಜಿಕ ಚಿಂತನೆಗಳು ಸಾಮಾನ್ಯ ಜನರನ್ನು ತಲುಪಲು ಗ್ರಾಮೀಣ ಮಟ್ಟದಲ್ಲಿ ಜಯಂತೋತ್ಸವ ಆಯೋಜಿಸಬೇಕು ಎಂದರು.

ಜೆಡಿಎಸ್ ಯುವ ಮುಖಂಡ ಪ್ರಸಾದ್ ಮಾತನಾಡಿ, ಕನ್ನಡ ಭಾಷೆ ಶುದ್ಧ, ವೈಜ್ಞಾನಿಕ ಮತ್ತು ಯಾವುದೇ ಸಂದರ್ಭದಲ್ಲಿಯೂ ಎಲ್ಲರಿಗೂ ಹೊಂದಿಕೊಳ್ಳುವ ಭಾಷೆಯಾಗಿದೆ. ಪ್ರತಿಂಯೊಬ್ಬರೂ ಬಾಲ್ಯದಿಂದಲೇ ಕನ್ನಡವನ್ನು ಪ್ರೀತಿಸಿ, ಬೆಳೆಸಿ ಕನ್ನಡದ ಹೊಸ ಹೊಸ ಪದಗಳನ್ನು ಕಲಿಯುವ ಪ್ರಯೋಗ ಮಾಡಿ ಅದರಲ್ಲೂ ಚಾಮರಾಜನಗರದ ಕನ್ನಡವನ್ನು ಸಹಜವಾಗಿ ಬೆಳೆಸಿ ಎಂದರು.

ಈ ವೇಳೆ ವೆಂಕಟೇಶ್ವರ ದೇವಸ್ಥಾನದ ದೊರೆಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಉಮೇಶ್ ಕನಕ(ಪಾಪು), ಪುರಸಭಾ ಸದಸ್ಯ ನಂಜುಂಡಸ್ವಾಮಿ, ಕಸಬಾ ಪಿಎಸಿಎಸ್ ಅಧ್ಯಕ್ಷ ಮಾದಯ್ಯ, ತಾಲೂಕು ಕುರುಬರ ಸಂಘ ನಿರ್ದೇಶಕ ಅಶ್ವಿನ್, ಜೆಡಿಎಸ್ ಮುಖಂಡ ಮೂಗೂರು ಶಿವಮೂರ್ತಿ, ಶಿಕ್ಷಕ ಕುಮಾರಸ್ವಾಮಿ, ಭರತ್, ತಲೈವ ಮಂಜು, ತಲಕಾಡು ಮೋಹನ್, ಮಹದೇವಣ್ಣ, ಹರೀಶ್, ಸ್ವಾಮಿ, ಶಾಂತು, ಚಂದು, ಪುನೀತ್, ಮಹದೇವಸ್ವಾಮಿ, ಸೋಮು ದಾದಾ, ಮದನ್, ಕಾಂತರಾಜ್, ರಕ್ಷಿತ್, ನವೀನ್, ವೆಂಕಿ, ಅರಸ್, ನಿಖಿಲ್, ರೋಹಿತ್, ಶಿವು, ಅಪ್ಪು, ಮನೋಜ್, ಮಹೇಂದ್ರ, ಅಪ್ಪು, ವಿನೋದ ಮತ್ತಿತರಿದ್ದರು.

ದರ ಪಟ್ಟಿ ಆಹ್ವಾನ

ಮೈಸೂರು, ಡಿ.1– ತಿ.ನರಸೀಪುರ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿನ ವೈದ್ಯಕೀಯ ಸಲಕರಣೆ ಸಾಮಗ್ರಿ ಪೀಠೋಪಕರಣ ಹಾಗೂ ಇತರೆ ನಿರುಪಯುಕ್ತಗೊಂಡಿರುವ ವಸ್ತುಗಳನ್ನು ವಿಲೇವಾರಿ ಮಾಡುವ ಸಂಬಂಧ ದರಪಟ್ಟಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಡಿ.8ರೊಳಗೆ ಅರ್ಜಿ ಶುಲ್ಕ ರೂ. 500 ಸಲ್ಲಿಸಿ ಅರ್ಜಿ ಪಡೆಯಬಹುದು. ದರ ಪಟ್ಟಿಂಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳ ವಿವರಗಳನ್ನು ಪಡೆಯಬಹುದು.

ಹನುಮ ಜಯಂತಿ ಶೋಭಾಯಾತ್ರೆ ಪೋಸ್ಟರ್ ಬಿಡುಗಡೆ

ಸರಗೂರು, ಡಿ.1– ಹನುಮ ದೇವರಿಗೆ ವಿಶೇಷ ಸ್ಥಾನವಿದೆ ಎಂದು ಪಡುವಲು ವಿರಕ್ತ ಮಠದ ಮಹದೇವಸ್ವಾಮಿ ಅಭಿಪ್ರಾಯಪಟ್ಟರು.



ಶ್ರೀಮಠದಲ್ಲಿ ಹನುಮ ಜಯಂತಿ ಆಚರಣಾ ಸಮಿತಿಯ 5ನೇ ವರ್ಷದ ಹನುಮ ಜಯಂತಿ ಶೋಭಾಯಾತ್ರೆ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಭಾರತ ಹಬ್ಬಗಳ ನಾಡು. ದೇಶದಲ್ಲಿ ನಾವು ಹಲವಾರು ಹಬ್ಬಗಳನ್ನು ಆಚರಿಸುತ್ತೇವೆ. ಹಿಂದೂಗಳು ಆಚರಿಸುವ ಹಬ್ಬಗಳಲ್ಲಿ ಹನುಮ ಜಯಂತಿಯೂ ಒಂದು. ಈ ದಿನದಂದು ಜನರು ಭಜರಂಗ ಬಲಿ ಎಂದು ಕರೆಯಲ್ಪಡುವ ಹನುಮಂತನನ್ನು ಪೂಜಿಸುತ್ತಾರೆ. ನಾವೆಲ್ಲರೂ ರಾಮಾಯಣದ ಕಥೆಗಳನ್ನು ಮತ್ತು ಹನುಮಂತನ ರಾಮನ ಮೇಲಿನ ಭಕ್ತಿಯನ್ನು ಕೇಳಿದ್ದೇವೆ. ದ್ರೋಣಗಿರಿ ಪರ್ವತವನ್ನು ಎತ್ತುವುದರಿಂದ ಹಿಡಿದು ಲಂಕಾದಿಂದ ಸೀತೆಯನ್ನು ಮರಳಿ ಕರೆತರುವವರೆಗೆ ರಾಮನಿಗೆ ತನ್ನ ಜೀವನದುದ್ದಕ್ಕೂ ಹನುಮಂತ ಸಹಾಯ ಮಾಡುತ್ತಾನೆ. ಹನುಮಾನ್ ಜಯಂತಿ ಭಗವಾನ್ ಹನುಮಾನ್ ಅವರ ಜನ್ಮದಿನವನ್ನು ಸೂಚಿಸುತ್ತದೆ. ಹನುಮಂತನನ್ನು ಹಿಂದೂಗಳ ಪ್ರಬಲ ದೇವರು ಎಂದು ಪರಿಗಣಿಸಲಾಗಿದೆ. ಭಕ್ತರು ಅವರನ್ನು ಸರ್ವಮಂಯವಿಭಂಜನ ಮತ್ತು ಸಂಕಟ ಮೋಚನ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಭಗವಾನ್ ಹನುಮಂತನನ್ನು ಪೂಜಿಸಿದರೆ ಎಲ್ಲಾ ಭಯ ಮತ್ತು ಕಷ್ಟಗಳು ದೂರವಾಗುತ್ತವೆ ಎಂದರು.

ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್ ಮಾತನಾಡಿ, ಹನುಮ ಜಯಂತಿ ಪ್ರಯುಕ್ತ 5ನೇ ವರ್ಷದ ಶೋಭಾಯಾತ್ರೆ ಜ.7 ರಂದು ನಡೆಯಲಿದ್ದು ಇಂದು ಪಡುವಲು ವಿರಕ್ತ ಮಠದ ಮಹದೇವಸ್ವಾಮಿ ಹಾಗೂ ಭರತೇಶ್ ಗುರೂಜಿ ಅವರ ಸಮ್ಮುಖದಲ್ಲಿ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ತಾಲೂಕಿನ ಎಲ್ಲಾ ಮಠಾಧೀಶರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಹನುಮ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಚನ್ನಪ್ಪ, ಚಿಕ್ಕದೇವಮ್ಮಬೆಟ್ಟದ ಪಾರುಪತ್ತೇದಾರ್ ಮಹದೇವಸ್ವಾಮಿ, ಸಮಿತಿ ಸದಸ್ಯರಾದ ನೂರಾಳಸ್ವಾಮಿ, ರಾಮು, ರವಿ, ನವೀನ್, ಅಭಿ, ಮಲಾರಿ, ನಂಜಪ್ಪ, ಎಂ.ನಾಗರಾಜು, ಬಿ.ಜೆ.ಪಿ.ಟೌನ್ ಅಧ್ಯಕ್ಷ ನಾಗರಾಜರಾಮ, ರಮೇಶ್, ಹನುಮ ಭಕ್ತರು ಉಪಸ್ಥಿತರಿದ್ದರು.

ಡಿ.7ರಂದು ಹುಣಸೂರಲ್ಲಿ ಹನುಮ ಜಯಂತಿ ಹಿನ್ನೆಲೆ

ಎಸ್‌ಪಿ ಸಾರಥ್ಯದಲ್ಲಿ ನಗರ ಪೊಲೀಸರ ಪಥ ಸಂಚಲನ



ಹುಣಸೂರು, ಡಿ.1– ನಗರದಲ್ಲಿ ಡಿ.7ರಂದು ನಡೆಯುವ ಹನುಮ ಜಯಂತಿ ಅಂಗವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ನೇತೃತ್ವದಲ್ಲಿ ನಗರದಾದ್ಯಂತ ಪೊಲೀಸರು ಪಥ ಸಂಚಲನ ನಡೆಸಿದರು.

ನಗರದ ಡಿವೈಎಸ್‌ಪಿ ಕಚೇರಿ ಆವರಣದಿಂದ ಡಿವೈಎಸ್‌ಪಿ ರವಿಪ್ರಸಾದ್‌ರ ಮಾರ್ಗದರ್ಶನದಲ್ಲಿ ಹೊರಟ ಪೊಲೀಸರ ಪಥ ಸಂಚಲನವು ಬಸ್ ನಿಲ್ದಾಣದ ಮುಂಭಾಗದ ರಸ್ತೆ, ಸಂವಿಧಾನ ಸರ್ಕಲ್, ಹಳೇ ಬಸ್ ನಿಲ್ದಾಣ ರಸ್ತೆ, ಗೋಕುಲ ರಸ್ತೆ, ಶಬ್ಬೀರ್ ನಗರ, ಕಲ್ಪತರು ವೃತ್ತ, ಟಿಎಪಿಸಿಎಂಎಸ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಗಣೇಶಗುಡಿ ಬೀದಿ, ಕೋಟೆ ಸರ್ಕಲ್, ಜೆ.ಎಲ್.ಬಿ. ರಸ್ತೆ, ಬಜಾರ್ ರಸ್ತೆ, ಅಕ್ಷಯ ಭಂಡಾರ್ ವೃತ್ತದ ಮೂಲಕ ಸಾಗಿ ಬಂದು ಡಿವೈಎಸ್‌ಪಿ ಕಚೇರಿ ಬಳಿ ಅಂತ್ಯಗೊಳಿಸಿದರು.

ಪಥ ಸಂಚಲನದಲ್ಲಿ ಎಸ್‌ಪಿ ಆರ್.ಚೇತನ್, ಡಿವೈಎಸ್‌ಪಿ ರವಿಪ್ರಸಾದ್ ಇನ್ಸ್‌ಪೆಕ್ಟರ್‌ಗಳಾದ ಶ್ರೀನಿವಾಸ್, ಸಿ.ವಿ.ರವಿ, ಚಿಕ್ಕಸ್ವಾಮಿ ಸೇರಿದಂತೆ ಹುಣಸೂರು ಉಪ ವಿಭಾಗದ ಐವರು ಇನ್ಸ್‌ಪೆಕ್ಟರ್‌ಗಳು, 22 ಮಂದಿ ಎಸ್‌ಐಗಳು ಹಾಗೂ ಎಎಸ್‌ಐ, ಮುಖ್ಯ ಪೇದೆಗಳು, 200 ಮಂದಿ ಸಿಬ್ಬಂದಿ ಸೇರಿದಂತೆ ಒಟ್ಟು 300ಕ್ಕೂ ಹೆಚ್ಚು ಪೊಲೀಸರು ಪಾಲ್ಗೊಂಡಿದ್ದರು.

20 ಸಿಸಿ ಕ್ಯಾಮರಾ ಅಳವಡಿಕೆ: ಹನುಮ ಜಯಂತಿ ಮುಂಜಾಗ್ರತಾ ಕ್ರಮವಾಗಿ ನಗರದ ಆಯಕಟ್ಟಿನ ಪ್ರದೇಶ, ಪ್ರಮುಖ ವೃತ್ತಗಳಲ್ಲಿ ಪೊಲೀಸರ ಮನವಿ ಮೇರೆಗೆ ನಗರಸಭೆ ವತಿಯಿಂದ 20 ಸಿಸಿ ಕ್ಯಾಮರಾ ಅಳವಡಿಸಲಾಗುತ್ತಿದೆ ಎಂದು ಪೌರಾಯುಕ್ತೆ ಎಂ.ಮಾನಸ ತಿಳಿಸಿದರು.

ಡಿ.5ಕ್ಕೆ ಗಿರಿಜನರ ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ



ಹುಣಸೂರು, ಡಿ.1– ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ನಾಗರಹೊಳೆ ಅಭಯಾರಣ್ಯದಿಂದ ಹೊರಬಂದು ಪುನರ್ವಸತಿಗೊಂಡ ಗಿರಿಜನರಿಗೆ ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಡಿ.5ರಂದು ಹುಣಸೂರಿನ ಅರಣ್ಯ ಇಲಾಖೆ ಡಿಸಿಎಫ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಜೇನು ಕುರುಬ ಸಂಘಟನೆ ಅಧ್ಯಕ್ಷ ಜೆ.ಟಿ.ರಾಜು ತಿಳಿಸಿದರು.

ತಾಲೂಕು ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮು, ಜಿಲ್ಲೆಯಲ್ಲಿರುವ ಆದಿವಾಸಿ ಗಿರಿಜನರನ್ನು ಅರಣ್ಯ ಇಲಾಖೆ ಕಡೆಗಣಿಸುತ್ತಿದ್ದು, ನ್ಯಾಯುತವಾಗಿ ಸಿಗಬೇಕಾದ ಯಾವುದೇ ಹಕ್ಕುಗಳು ಸಿಗುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು. ಹಾಡಿಯಲ್ಲಿರುವ ಗಿರಿಜನರು ಮೂಲ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅರಣ್ಯ ಹಕ್ಕು ಕಾಯ್ದೆಯ ಪ್ರಕಾರ 10 ಎಕರೆ ಭೂಮಿಯನ್ನು ಮಂಜೂರು ಮಾಡಬೇಕೆನ್ನುವ ನಿಯಮವಿದ್ದರೂ ಇದನ್ನು ಇಲಾಖಾಧಿಕಾರಿಗಳು ಉಲ್ಲಂಘನೆ ಮಾಡಿದ್ದಾರೆ. ಕನಿಷ್ಠ 5 ಎಕರೆ ಮಂಜೂರು ಮಾಡಿದ್ದರೂ ಅದು ಕೇವಲ ದಾಖಲೆಗಳಲ್ಲಿ ಮಾತ್ರ ಸೀಮಿತ. ಅದರೆ ಗಿರಿಜನರಿಗೆ ಕೊಟ್ಟಿರುವ ಜಮೀನಿನಲ್ಲಿ 2 ರಿಂದ 3 ಎಕರೆ ಮಾತ್ರ ಇರುವುದು ಎಡಿಎಲ್‌ಆರ್ ಪ್ರಕಾರ. ಒಂದು ಕುಟುಂಬಕ್ಕೆ ನಾಗಾಪುರ 1 ರಿಂದ ಘಟಕ 5ರವರೆಗೆ 5 ಎಕರೆ, ನಾಗಪುರ 6ನೇ ಘಟಕ 3 ಎಕರೆ ಭೂಮಿ, ಹೆಬ್ಬಾಳ 3 ಎಕರೆ, ಶೆಟ್ಟಳ್ಳಿ 3 ಎಕರೆ, ಹೆಚ್.ಡಿ.ಕೋಟೆ ತಾಲೂಕಿನ ಮಾಸ್ತಿಗುಡಿ ಹಾಗೂ ಸೊಳ್ಳೆಪುರ 3 ಎಕರೆ ಜಮೀನು ವ್ಯತ್ಯಾಸವಿದೆ.

ಕೇಂದ್ರ ಸರ್ಕಾರದ ಪುನರ್‌ವಸತಿ ಯೋಜನೆ ಫಲಾನುಭವಿಗಳಾಗಿ ಜಮೀನು, ವಾಸದ ಮನೆ, ಮೂಲ ಸೌಕರ್ಯಕ್ಕಾಗಿ ನಗದು ಠೇವಣಿ ಹಣ ಕೊಟ್ಟಿದ್ದೇವೆ ಎಂದು ಅರಣ್ಯ ಇಲಾಖೆ ದಾಖಲೆಗಳಲ್ಲಿ ಮಾತ್ರ ಸಾವಿರಾರು ಕೋಟಿ ವೆಚ್ಚವಾಗುತ್ತಿದೆ. ಇದು ಎಂತಹ ದುರಂತ. ಗಿರಿಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಬದಲಾವಣೆ ಬಯಸಿ ಕಾಡಿನಿಂದ ನಾಡಿಗೆ ಬಂದರು ಯೋಜನೆ ಉಪಯೋಗ ಸ್ವಲ್ಪಮಟ್ಟಿಗಾದರೂ ಬದಲಾವಣೆ ಕಂಡಿಲ್ಲ ಎಂದರು. ಗೋಷ್ಠಿಯಲ್ಲಿ ಗ್ರಾಪಂ ಸದಸ್ಯರಾದ ಜೆ.ಟಿ.ಅಯ್ಯಪ್ಪ, ರಮೇಶ, ಶಂಕರ, ಆದಿವಾಸಿ ಮುಖಂಡ ಪಾಪಣ್ಣ, ಧನುಷ್, ಜೆ.ಕೆ.ತಮ್ಮಯ್ಯ ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ತ್ರಿಬಲ್ ರೈಡಿಂಗ್ (ಕ): ಬೆ.10.30ಕ್ಕೆ, ಕಾಂತಾರ (ಕ): ಮ.1.35ಕ್ಕೆ, ಹಿಟ್: ದಿ ಸೆಕೆಂಡ್ ಕೇಸ್ (ತೆ): ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 2 ತಿಮ್ಮಯ್ಯ & ತಿಮ್ಮಯ್ಯ (ಕ): ಬೆ.10.20ಕ್ಕೆ, ರಾ.10.10ಕ್ಕೆ, ಗಟ್ಟ ಕುಸ್ತಿ (ತ): ಮ.1.15ಕ್ಕೆ, ಡಿಎಸ್‌ಪಿ (ತ): ಸಂ.4.10ಕ್ಕೆ, ಗೋಲ್ಡ್ (ಮ): ರಾ.7ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.10ಕ್ಕೆ, ರಾ.7.05ಕ್ಕೆ, ತ್ರಿಬಲ್ ರೈಡಿಂಗ್ (ಕ): ಮ.1.05ಕ್ಕೆ, ಧರಣಿ ಮಂಡಲ ಮಧ್ಯದೊಳಗೆ (ಕ): ಸಂ.4.05ಕ್ಕೆ, ದಿ ಟೀಚರ್ (ಮ): ರಾ.10ಕ್ಕೆ.

ಸ್ಕ್ರೀನ್ 4 ಗಂಧದ ಗುಡಿ (ಕ): ಬೆ.11.10ಕ್ಕೆ, ಏನ್ ಆಕ್ಷನ್ ಹೀರೊ (ಹಿಂ): ಮ.1.20ಕ್ಕೆ, ರಾ.7.20ಕ್ಕೆ, ರಾ.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಭೇದಿಯಾ (3ಡಿ)(ಹಿಂ): ಬೆ.9.50ಕ್ಕೆ, ಮ.1ಕ್ಕೆ, ಮ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ತ್ರಿಬಲ್ ರೈಡಿಂಗ್ (ಕ): ಬೆ.9.55ಕ್ಕೆ, ಕಾಂತಾರ (ಕ): ಮ.1.05ಕ್ಕೆ, ರಾ.7.15ಕ್ಕೆ, ಇಟ್ಲು ಮರೆದುಮಿಲ್ಲಿ ಪ್ರಜಾನೀಕಂ (ತೆ): ಸಂ.4.10ಕ್ಕೆ, ದೃಶ್ಯಂ–2 (ಹಿಂ): ರಾ.10.20ಕ್ಕೆ.

ಸ್ಕ್ರೀನ್ 3 ರೇಮೊ (ಕ): ಬೆ.10.30ಕ್ಕೆ, ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.4.50ಕ್ಕೆ, ಕಾಂತಾರ (ಕ): ರಾ.10.10ಕ್ಕೆ.

ಸ್ಕ್ರೀನ್ 4 ಕಾಂತಾರ (ಕ): ಬೆ.10.35ಕ್ಕೆ, ದೃಶ್ಯಂ–2 (ಹಿಂ): ಮ.1.40ಕ್ಕೆ, ತ್ರಿಬಲ್ ರೈಡಿಂಗ್ (ಕ): ಸಂ.4.35ಕ್ಕೆ, ರಾ.10.10ಕ್ಕೆ, ಸ್ಟ್ರೇಂಜ್ ವರ್ಲ್ಡ್ (3ಡಿ)(ಹಿಂ): ರಾ.7.45ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಿಎಸ್‌ಪಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೋನ್ ಭೂತ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೆಡ್‌ಬುಷ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಹಿಟ್ ದಿ 2 ಕೇಸ್ (ತೆ)	4 ಪ್ರದರ್ಶನಗಳು
ಸಂಗಂ	
ಧರಣಿಮಂಡಲ ಮಧ್ಯದೊಳಗೆ (ಕ) ಗೋಲ್ಡ್ (ಮ)	2 ಪ್ರದರ್ಶನಗಳು
ಲಿಡೋ	
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ಗಟ್ಟಕುಸ್ತಿ (ತ)	4 ಪ್ರದರ್ಶನಗಳು

‘ಚುನಾವಣೆಯಲ್ಲಿ ನನ್ನ ಗೆಲುವು ಖಚಿತ’




ಪಿರಿಯಾಪಟ್ಟಣ, ಡಿ.1– 2 ಬಾರಿ ಸೋತು 3ನೇ ಬಾರಿಗೆ ಗೆಲುವು ಸಾಧಿಸಿರುವ ನನಗೆ ತಾಲೂಕಿನ ಜನರ ಆಶೀರ್ವಾದವಿದ್ದು, ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ನನ್ನ ಗೆಲುವು ಖಚಿತ ಎಂದು ಶಾಸಕ ಕೆ.ಮಹದೇವ್ ಹೇಳಿದರು.

ತಾಲೂಕಿನ ಕೊತ್ತವಳ್ಳಿಯಲ್ಲಿ 19 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಶಾಸಕನಾಗಿ ನಾನು ತಾಲೂಕಿನಲ್ಲಿ ಮಾಡಿರುವಂತಹ ಅಭಿವೃದ್ಧಿ ಕೆಲಸಗಳೇ ನನಗೆ ಶ್ರೀರಕ್ಷೆ. ನಾನು ಮಾಡಿರುವ ಅಭಿವೃದ್ಧಿ ಕಾಮಗಾರಿಗಳು ತಾಲೂಕಿನ ಜನರ ಮನಸ್ಸಿನಲ್ಲಿ ಉಳಿದಿದೆ. ಈಗಾಗಲೇ ಅನೇಕರು ಅಭಿವೃದ್ಧಿ ಕೆಲಸಗಳನ್ನು ಮೆಚ್ಚಿ ನಮ್ಮ ಪಕ್ಷಕ್ಕೆ ಸೇರ್ಪಡೆಗೊಂಡು ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದರು.

ತಾಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ಆರ್.ಎಲ್.ಮಣಿ, ನಂದೀಶ್, ಬಸವಣ್ಣ, ಪ್ರಭು, ನಟೇಶ್, ಮಂಜು, ರಂಗಸ್ವಾಮಿ ಇತರರಿದ್ದರು.

ಹುಸ್ಕೂರು ಗ್ರಾಮದಲ್ಲಿ ಡಾ.ಪುನೀತ್ ಸ್ಮರಣೆ



ಮಲ್ಕುಂಡಿ, ಡಿ.1– ನಂಜನಗೂಡು ತಾಲೂಕಿನ ಹುಸ್ಕೂರು ಗ್ರಾಮದಲ್ಲಿ ಅಪ್ಪು ಅಭಿಮಾನಿ ಬಳಗದಿಂದ ಡಾ.ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು.

ಪುನೀತ್ ಭಾವಚಿತ್ರಕ್ಕೆ ಗ್ರಾಪಂ ಅಧ್ಯಕ್ಷ ಮಹದೇವಶೆಟ್ಟಿ ಪುಷ್ಪಾರ್ಚನೆ ಮಾಡಿ ಮಾತನಾಡಿ, ಡಾ.ಪುನೀತ್ ರಾಜ್‌ಕುಮಾರ್ ಅವರನ್ನು ನಾವು ಮರೆಯಲು ಸಾಧ್ಯವಿಲ್ಲ. ಅವರು ಚಿತ್ರರಂಗಕ್ಕೆ, ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಹೃದಯವಂತಿಕೆ ಹೊಂದಿದ್ದ ಅಪ್ಪು ಅವರನ್ನು ಕಳೆದುಕೊಂಡಿರುವುದು ತುಂಬಲಾರದ ನಷ್ಟ ಎಂದರು. ಇದೇ ವೇಳೆ ಅಪ್ಪು ಅಭಿಮಾನಿ ಬಳಗದಿಂದ ಹೋಳಿಗೆ ಊಟ ಏರ್ಪಡಿಸಲಾಗಿತ್ತು. ನಂತರ ಡಾ.ಪುನೀತ್ ರಾಜ್‌ಕುಮಾರ್ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಅಪ್ಪು ಅಭಿಮಾನಿ ಬಳಗದ ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಡಿಸಿ ರಾಜೇಂದ್ರ ಸಭೆ

ತಿ.ನರಸೀಪುರ, ಡಿ.1– ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಇದೇ ಮೊದಲ ಬಾರಿಗೆ ತಾಲೂಕಿಗೆ ಭೇಟಿ ನೀಡಿ, ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು.



ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಯ ಪ್ರಗತಿಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು, ಚುನಾವಣೆಗೆ ಸಂಬಂಧಿಸಿದಂತೆ ಬೂತ್ ಮಟ್ಟದ ಅಧಿಕಾರಿಗಳ ಜೊತೆ ಸಮಾಲೋಚಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿವಿಧ ಇಲಾಖೆಗಳಲ್ಲಿರುವ ಆಡಳಿತಾತ್ಮಕ ತೊಂದರೆ ತಿಳಿಯಲು ಅಧಿಕಾರಿಗಳ ಸಭೆ ನಡೆಸಲಾಗಿದೆ. ಆಯಾಯ ಇಲಾಖೆಗಳಲ್ಲಿ ಕಡತ ನಿರ್ವಹಣೆ ಮತ್ತು ಕಡತ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬ ತಗ್ಗಿಸುವುದು. ಪ್ರಗತಿ ಕಾಣುತ್ತಿರುವ ಇಲಾಖೆಗಳಲ್ಲಿ ಪ್ರಗತಿಯ ಕಾರ್ಯಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸುವ ದೃಷ್ಟಿಯಿಂದ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು ಈ ಭೇಟಿಯ ಉದ್ದೇಶ ಆಗಿದೆ ಎಂದರು.

ತಾಲೂಕಿನ ಜ್ವಲಂತ ಸಮಸ್ಯೆಗಳಾದ ಕುಡಿಯುವ ನೀರು, ನೀರಾವರಿ, ಕೃಷಿ, ತೋಟಗಾರಿಕೆ ಮತ್ತು ಇನ್ನಿತರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡು ಹಿಡಿಯುವ ಸಲುವಾಗಿ ಸಭೆ ನಡೆಸಿರುವುದಾಗಿ ತಿಳಿಸಿದರು. ಸಾರ್ವಜನಿಕರು ತಮ್ಮ ಕೆಲಸಕ್ಕಾಗಿ ಮೈಸೂರಿಗೆ ಅಲೆಯುವುದನ್ನು ತಪ್ಪಿಸುವ ಭರವಸೆಯನ್ನು ಜಿಲ್ಲಾಧಿಕಾರಿಗಳು ವ್ಯಕ್ತಪಡಿಸಿದರು.

ತಾಲೂಕಿನಾದ್ಯಂತ ಚಿರತೆ ಹಾವಳಿ ಹೆಚ್ಚಾಗಿರುವ ಬಗ್ಗೆ ಕ್ಷೇತ್ರದ ಶಾಸಕರಿಂದ ಮಾಹಿತಿ ಪಡೆದಿದ್ದೇನೆ. ಜಿಲ್ಲಾ ಅರಣ್ಯ ಅಧಿಕಾರಿಗಳ ಜೊತೆ ಚರ್ಚಿಸಿ ತುರ್ತು ಚಿರತೆ ಹಿಡಿಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು. ಅಕ್ರಮ ಮದ್ಯ ಮಾರಾಟದ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಅಕ್ರಮ ಮದ್ಯ ಮಾರಾಟ ಆಗುವುದರಿಂದ ಸಾಮಾಜಿಕ ಅವಘಡಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಜಿಲ್ಲಾ ಅಬಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಚರ್ಚಿಸಿ ಅಕ್ರಮ ಮದ್ಯ ಮಾರಾಟ ನಿಂಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ಎಸಿ ಕಮಲಬಾಯಿ, ತಹಸೀಲ್ದಾರ್ ಸಿ.ಜಿ.ಗೀತಾ, ತಾಪಂ ಇಓ ಸಿ.ಕೃಷ್ಣ, ಶಿರಸ್ತೇದಾರ್ ಮಹ ದೇವನಾಯಕ, ಚುನಾವಣಾ ಶಿರಸ್ತೇದಾರ್ ಪ್ರಭುರಾಜ್, ಕಂದಾಯ ನಿರೀಕ್ಷಕರಾದ ಸರ್ವೇಶ್, ಸಿದ್ದರಾಜು, ಪುರಸಭೆ ಮುಖ್ಯಾಧಿಕಾರಿ ಎಚ್.ಎಸ್. ಬಸವರಾಜು, ವಿಷಯ ನಿರ್ವಾಹಕ ನಿತಿನ್ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಸುತ್ತೂರು ಜಾತ್ರೆ: ರಾಜ್ಯ ಮಟ್ಟದ ಭಜನಾ ಸ್ಪರ್ಧೆ

ಮೈಸೂರು,ಡಿ.1–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಜ.18ರಿಂದ 23ರವರೆಗೆ ನಡೆಯಲಿದ್ದು, ಇದರ ಅಂಗವಾಗಿ ರಾಜ್ಯ ಮಟ್ಟದ 29ನೇ ಭಜನಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಲು ಪುರುಷರ ತಂಡ, ಮಕ್ಕಳ ತಂಡ, ನಗರ ಮಹಿಳಾ ತಂಡ, ಗ್ರಾಮಾಂತರ ಮಹಿಳಾ ತಂಡ, ಏಕತಾರಿ ಪುರುಷರ ತಂಡ, ಏಕತಾರಿ ಮಹಿಳಾ ತಂಡಗಳಿಗೆ ಅವಕಾಶ ವಿರುತ್ತದೆ. ನೆರೆ ರಾಜ್ಯಗಳ ಪುರುಷ ಮತ್ತು ಮಹಿಳಾ ಭಜನಾ ತಂಡಗಳಿಗೆ, ಭಾಗವಹಿಸುವ ತಂಡಗಳ ಸಂಖ್ಯೆಯನ್ನು ಗಮನಿಸಿ, ಪ್ರತ್ಯೇಕವಾಗಿ ಸ್ಪರ್ಧೆ ಏರ್ಪಡಿಸಿ ಸೂಕ್ತ ಬಹುಮಾನಗಳನ್ನು ನೀಡಲಾಗುವುದು. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಭಜನಾ ತಂಡಗಳವರು ಮಾಹಿತಿಗಾಗಿ ದೂ. 0821–254821, ಮೊ. 9448800977, 984447 1330 ಸಂಪರ್ಕಿಸಬಹುದು.

ಡಿ.4, ಸರ್ವ ಸದಸ್ಯರ ಸಭೆ

ಮೈಸೂರು,ಡಿ.1–ಹೂಟಗಳ್ಳಿ ಕೆಹೆಚ್‌ಬಿ ಬಡಾವಣೆಯಲ್ಲಿರುವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಸರ್ವ ಸದಸ್ಯರ ಮಹಾಸಭೆಯು ಡಿ.4ರಂದು ಬೆಳಗ್ಗೆ 10 ಗಂಟೆಗೆ ಹೂಟಗಳ್ಳಿಯ ಎಸ್‌ಬಿಐ ಬ್ಯಾಂಕ್ ಎದುರು ಇರುವ ಸುಜ್ಞಾನ ಟ್ರಸ್ಟ್‌ನಲ್ಲಿ ನಡೆಯಲಿದೆ.

GOLD COMPANY
ಗಿರವಿ ಚಿನ್ನಾಭರಣ ಖರೀದಿ
ನಿಮ್ಮ ಚಿನ್ನಾಭರಣಕ್ಕೆ ಹಣ ಬೇಕೆ ನೀವು ಗಿರವಿ ಇಟ್ಟ ಚಿನ್ನಾಭರಣವನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.
9964522225

HOUSE FOR SALE
60x40, W/F, old demolition house for sale in Saraswathipuram, near Kamakshi hospital road.
Vyshak Raman
77606 49855
Brokers Excuse

WANTED
Smart & Qualified Teachers
(Proficiency in English is Preferred)
N.S.T. / D.Ed. / B.Ed. / B.P.Ed.
(All Subjects - KG to X)
SUNANDHA ACADEMY SCHOOL
Akashavani Circle, Yadavagiri, Mysore-20
98451-08273 sunandhaacademy@gmail.com

Wanted
1. Web Designer
2. Graphics Designer.
3. Salesman (FMCG)
With Minimum One Year Experience
+9191418 35175
hr@kreativepool.in

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary
+ 10,000/- Incentive
8884171888


JOB OPPORTUNITY
Position :
Process associates,
Eligibility:- Diploma in Civil, BE Civil, M.Tech.
3 yrs Experienced & Freshers
Walk in Interview :
Date: 3rd Dec 2022.
9019079454 / 7676024023
9611037123

FOR RENT
2538 sq.ft., Second Floor Office / Commercial Space available for Rent in Udayaravi Road, Kuvempunagar (Opp. KHB Complex), Lift and basement car parking facility available.
Call : 94480 56137

INDIAN COUNCIL OF ASTROLOGICAL SCIENCES [ICAS] MYSURU CHAPTER STARTS 40th BATCH
Courses are: JYOTHISH PRAVEENA JYOTHISH VISHARADA and VASTU
(Special Classes are also Conducted)
Classes are conducted both in Kannada and English by experienced faculties
New Batch Starts from 15.01.2023
Online and Offline Classes are Conducted
For Details Contact:-
9535859348/ 9448058965/ 9448816493
Classes are held every Sunday

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

FOR SALE
Commercial Building for sale in Mysore. Earning a rent of 5 Lakhs / month. Clear papers. Strictly No Brokers.
email: murthy2244mys@gmail.com

ಮೊದಲನೇ ವರ್ಷದ ಸವಿನೆನಪು

ಶ್ರೀ ಬಿ.ಕೆ.ನಾಗರಾಜಮೂರ್ತಿ
ಜನನ: 03.06.1941 ಮರಣ: 02.12.2021
ದುಃಖತಪ್ತರು: ಕುಟುಂಬವರ್ಗ ಹಾಗೂ ಬಂಧು-ಮಿತ್ರರು

ಸೈಟು ಮಾರಾಟಕ್ಕಿದೆ
30x40 South Face, MUDA Approved. 59 Lakh Only, ಟೆಲಿಕಾಂ ಲೇಔಟ್ ಹತ್ತಿರ, ಬೋಗಾದಿ 2ನೇ ಹಂತ, ಆಸಕ್ತರು ಸಂಪರ್ಕಿಸಿ:
9008822054

BLAZERS & SUITS @ HEAVENLYS GENERATIONS
DHANVANTHRI ROAD, MYSURU
PH: +91 821 2422370


ಶ್ರೀ ಗಜಾನನ ಡ್ರಾಮ ಥೇಟರ್ ಹುಬ್ಬಳ್ಳಿ ಕ್ಯಾಂಪ್ ಮೈಸೂರು
ಶ್ರೀ ಶರಣ ಬಸವೇಶ್ವರ ನಾಟ್ಯ ಸಂಘ ಲಕ್ಷ್ಮೇಶ್ವರ ಇವರಿಂದ
ಸಂದೇಶ ಪ್ರಿನ್ಸ್ ಹೋಟೆಲ್ ಪಕ್ಕ.
ನಜರ್‌ಬಾದ್
ಶುಕ್ರವಾರ ದಿನಾಂಕ: 02-12-2022 ರಿಂದ ಹೊಸ ನಾಟಕ
ಮಧ್ಯಾಹ್ನ 2-45 ಹಾಗೂ 5-45ಕ್ಕೆ 2 ಪ್ರದರ್ಶನಗಳು,
ಕೆ.ಪ್ರಕಾಶ ಕೃತ ತವರು ಬಿಟ್ಟ ತಂಗಿ
ಎಂಬ ಹಾಸ್ಯಭರಿತ ಸಾಮಾಜಿಕ ನಾಟಕ ಅಭಿನಯಿಸುವರು

ASTRUM GRANDVIEW MYSURU
DREAM HOME? OR DREAM INVESTMENT?
CHOOSE BOTH!
PREMIUM PLOTS
Launch Price ₹4499 ₹3999/- Per Sq.ft
Bandipalya (Opp. APMC Yard), Mysore-Ooty Road (NH-212) (Adj to Ring Road)
PLOT SIZE: 1163 sq.ft. onwards
Book Before 15th Dec 2022 & Avail FREE GOLD COIN
RERA APPROVED PRM/KA/RERA/1268/378/PR/200922/005250
MUDA APPROVED 20/2022-23
Book now before price rise!
96200 33222
www.astrumhomes.com

RECRUITING FOR INTERNATIONAL SCHOOL IN MYSORE - 2023 - 24
WANTED
1. Teachers who have experience in CBSE / ICSE/ IGCSE cambridge schools to work as Principal, Teachers.
2. Preschool Teachers / Centre Heads With Montessori or NST Candidate with experience.
3. Admission Councellors.
4. HR Operations
5. Marketing Executive.
Mail ur resume with Photo to:
schoolstaffneed@gmail.com

ANGEL CONSTRUCTIONS
WALK-IN-INTERVIEW

30+VACANCIES	QUALIFICATION	JOB LOCATION
Male Candidates Only	B.E., Civil / Diploma Civil	All Over Karnataka (Accommodation Free)

- SITE ENGINEERS
  Experience: 2-7 years
- QUANTITY SURVEYOR
  (Costing / Billing)
  Experience: 2-8 Years
- PROJECT ENGINEERS
  Experience: 8-15 Years
- STORE / SITE ADMIN
  (Any Degree/Diploma/Basic Computer Skill)
  (Job: Materials Monitoring, Register, Purchase Etc.,)
  Fresher / Experience

Interview Date: 04-12-2022 Time:10.00am - 5.00pm
Send your Resume by WhatsApp & E-mail
WhatsApp : 96866 89036 / 96865 01033
Mail: hr@angelconstructions.in | www.angelconstructions.in
* Terms & Conditions Apply
Interview Venue: SHREE GURU RESIDENCY (Near Railway Station) #10,10/1, Jhansi Lakshmi Bai Cross Road, Devaraja Mohalla, Mysuru-05


ನಾಯಿ ಕಾಣೆಯಾಗಿದೆ
ಸುಮಾರು 5 ವರ್ಷದ ಗೋಲ್ಡನ್ ರೆಟ್ರೀವರ್ (ಬಿಳಿ ಬಣ್ಣ) ಜಾತಿಯ ನಾಯಿಯು ರಾಮಕೃಷ್ಣ ಮಾರ್ಕೆಟ್‌ನಿಂದ ದಿನಾಂಕ 29/11/22 ಬೆಳಗ್ಗೆ 10.30ರಿಂದ ಕಾಣೆಯಾಗಿದ್ದು ಕತ್ತಿನಲ್ಲಿ ಕೆಂಪು ಬಣ್ಣದ ಬೆಲ್ಟ್ ಇರುವ ಇದರ ಸುಳಿವು ಸಿಕ್ಕಲ್ಲಿ ತಕ್ಷಣ ಈ ಸಂಖ್ಯೆಗೆ ಕರೆ ಮಾಡಿ
ಹಂಟರ್ (Male)
90356 58938
78996 77646

ಹಸಿರು ನಮ್ಮ ಉಸಿರು





ARE YOU INTERESTED TO BE PART OF
- An MNC with international process
- To resolve technical issues relating to websites & hosting

WE ARE HIRING TALENTS FOR OUR TECH SUPPORT TEAM
WITH 1 TO 5 YEARS OF CHAT EXPERIENCE
@ MYSORE,
SILVER SPIRIT TECH PARK, HEBBAL, WAP FACTORY ROAD, MYSORE
WALK-IN ON 2ND & 3RD DECEMBER 2022
FRIDAY & SATURDAY | STARTS AT 9.30AM

Key Attributes :
- Excellent English communication, both verbal and written
- Strong in logical thinking and learning skill
- Minimum Typing Speed of 35 WPM; Good knowledge of keyboard shortcuts
- Able to handle 3 to 5 chats at a time

BRING YOUR RESUME & COPY OF AADHAAR
BECOME PART OF WINNING TEAM
Talent Acquisition Team
GLOWTOUCH PUTTING PEOPLE FIRST

EXPERIENCE THE BEST OF CINEMA AT THE ALL NEW
INOX LIVE the MOVIE
AT CENTRO, BENGALURU-NILGIRI ROAD, MYSURU
NOW OPEN
Live kitchen
Ticketing & food-ordering on touch screen
4 Screens
Dolby ATMOS Immersive sound
VOLFONI CREATIVE 3D TECHNOLOGY Premium 3D technology

ENJOY A TOP QUALITY VISUAL EXPERIENCE WITH LASER IN ALL 4 SCREENS


Route Map
Image shown is for representation purpose only.
Book your tickets at inoxmovies.com or on the INOX App! For enquiry, contact 96069 76757